

ತಿರುಮಲೆ ತಿರುಪತಿ ದೇವಸ್ಥಾನಗಳು
ಸಪ್ತಗಿರಿ
ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ
ಅಕ್ಟೋಬರ್ 2025 ಬೆಲೆ ರೂ. 20/-
SAPTHAGIRI
SAPTHAGIRI(KANNADA)
SPIRITUAL ILLUSTRATED MONTHLY
Volume:05, Issue:3, Pages:56
October - 2025, Price Rs. 20/-
ತಿರುಮಲೆ
ಶ್ರೀ ವೆಂಕಟೇಶ್ವರ ಸ್ವಾಮಿಯವರ ಪುಷ್ಪಯಾಗ
30-10-2025

ತಿರುಮಲ ತಿರುಪತಿ ದೇವಸ್ಥಾನಗಳು

# ನೂತನವಾಗಿ ಕಾರ್ಯನಿರ್ವಹಣಾಧಿಕಾರಿಗಳಿಗೆ ಹಾರ್ದಿಕ ಸ್ವಾಗತ





ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್., ಅವರು ದಿನಾಂಕ 10-9-2025 ರಂದು ಎರಡನೆಯ ಬಾರಿಗೆ ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿಗಳಾಗಿ ನೇಮಕಗೊಂಡಿದ್ದಾರೆ. ಬೆಳಿಗ್ಗೆ ಶ್ರೀರಂಗನಾಯಕ ಮಂಟಪದಲ್ಲಿ ಸಂಪ್ರದಾಯದಂತೆ, ಪೂರ್ವ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಜೆ. ಶ್ಯಾಮಲರಾವ್, ಐ.ಎ.ಎಸ್., ಅವರಿಂದ ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್., ಅವರು ತಿ.ತಿ.ದೇ., ಅಧಿಕಾರವನ್ನು ಸ್ವೀಕರಿಸಿದರು. ನಂತರ ಶ್ರೀ ವೇಂಕಟೇಶ್ವರಸ್ವಾಮಿಯ ಎದಿರು ಶ್ರೀ ಅನಿಲ್ ಕುಮಾರ್ ಸಿಂಘಾಲ್,ಐ.ಎ.ಎಸ್., ಅವರು ತಿ.ತಿ.ದೇ., ಆಡಳಿತ ಮಂಡಳಿಯ ಕಾರ್ಯದರ್ಶಿಗಳಾಗಿ ಪ್ರಮಾಣ ಸ್ವೀಕಾರ ಮಾಡಿದರು. ಶ್ರೀ ವೆಂಕಟೇಶ್ವರ ಸ್ವಾಮಿಯವರ ದರ್ಶನದ ನಂತರ ಶ್ರೀ ಅನಿಲ್ ಕುಮಾರ್ ಸಿಂಘಾಲ್ ,ಐ.ಎ.ಎಸ್., ಅವರಿಗೆ ಶ್ರೀ ಶ್ರೀನಿವಾಸನ ಚಿತ್ರಪಟ, ತೀರ್ಥ ಮತ್ತು ಪ್ರಸಾದಗಳೊಂದಿಗೆ ವೇದ ಪಂಡಿತರಿಂದ ವೇದಶೀರ್ವಾದವನ್ನು ಮಾಡಲಾಯಿತು. ಶ್ರೀ ಅನಿಲ್ ಕುಮಾರ್ ಸಿಂಘಾಲ್, ಐ.ಎ.ಎಸ್.,ರವರು ಈ ಹಿಂದೆ ಮೇ 2017 ರಿಂದ ಅಕ್ಟೋಬರ್ 2020 ರ ವರೆಗೂ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿಗಳಾಗಿ ಕಾರ್ಯ ನಿರ್ವಹಿಸಿದ್ದರು. ಆ ಸಮಯದಲ್ಲಿ ಅವರು ತಿರುಮಲೆಯಲ್ಲಿ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು, ಸರ್ವದರ್ಶನದ ಟೋಕನ್ ಪದ್ಧತಿಯನ್ನು ಜಾರಿಗೆ ತಂದಿದ್ದರು. ಹಾಗೇ ತಿ.ತಿ.ದೇ., ಸ್ಥಾನಿಕ ದೇವಾಲಯಗಳಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡಿದರು. ಈ ಕಾರ್ಯಕ್ರಮದಲ್ಲಿ ತಿ.ತಿ.ದೇ.,ಅಧ್ಯಕ್ಷರು, ಸದಸ್ಯರು ಮತ್ತು ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ,ಸಂಯುಕ್ತಕಾರ್ಯನಿರ್ವಹಣಾಧಿಕಾರಿ ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು. ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್., ಅವರು ಸಪ್ತಗಿರಿ ಮಾಸ ಪತ್ರಿಕೆಯ ಗೌರವ ಸಂಪಾದಕರೂ ಆಗಿದ್ದಾರೆ. ಅವರಿಗೆ 'ಸಪ್ತಗಿರಿ' ಪತ್ರಿಕಾ ವರ್ಗದವರೆಲ್ಲರೂ ಆದರದ ಸ್ವಾಗತವನ್ನು ಬಯಸುತ್ತಾ ಅವರ ಮುಂದಿನ ಎಲ್ಲಾ ಕೆಲಸಗಳೂ ಯಶಸ್ವಿಯಾಗಿ, ನಿರ್ವಿರಾಮವಾಗಿ ಮುಂದುವರೆಯಲಿ ಎಂದು ಹಾರೈಸುತ್ತಿದ್ದಾರೆ.






ಶ್ರೀ ಜೆ. ಶ್ಯಾಮಲರಾವ್, ಐ.ಎ.ಎಸ್., ಅವರು ಜೂನ್ 2024 ರಿಂದ ಸೆಪ್ಟೆಂಬರ್ 2025 ರ ವರೆಗೂ ತಿ.ತಿ.ದೇ, ಕಾರ್ಯನಿರ್ವಹಣಾಧಿಕಾರಿಗಳಾಗಿ ತಮ್ಮ ಕರ್ತವ್ಯವನ್ನು ಯಶಸ್ವಿಯಾಗಿ ನಿಭಾಯಿಸಿದ್ದಾರೆ. 09-09-2025 ರಂದು ತಿ.ತಿ.ದೇ., ಸಮಾವೇಶ ಮಂದಿರದಲ್ಲಿ ಕಾರ್ಯನಿರ್ವಹಣಾಧಿಕಾರಿಗಳ ಕಛೇರಿ ತಿರುಪತಿಯಲ್ಲಿ ಅವರನ್ನು ಗೌರವಾದರದಿಂದ ಸನ್ಮಾನಿಸಲಾಯಿತು. ಅವರ ಕರ್ತವ್ಯ ನಿರ್ವಹಣೆಯ ಸಮಯದಲ್ಲಿ ಲಾಡು ಪ್ರಸಾದ ಮತ್ತು ಅನ್ನಪ್ರಸಾದಗಳ ಗುಣಮಟ್ಟವನ್ನು ಉತ್ತಮಗೊಳಿಸಿದ್ದೇ ಅಲ್ಲದೇ ಯಾತ್ರಿಕರ ಅಭಿಪ್ರಾಯ ಶೇಖರಣೆ, ಸಂದರ್ಶಕರಿಗೆ ಅಗತ್ಯವಾದ ಮಾಹಿತಿ ಒದಗಿಸುವುದು. ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ ಮತ್ತು ಲಾಡು ಕೌಂಟರ್‌ಗಳಲ್ಲಿ ಕಿಯಾಸ್ಕೋ ಯಂತ್ರಗಳ ಅಳವಡಿಕೆ ಇನ್ನೂ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ತಮ್ಮ ಅವಧಿಯಲ್ಲಿ ನಿರ್ವಹಿಸಿದ್ದಾರೆ. ಈಗ ಅವರು ಸಾಮಾನ್ಯ ಆಡಳಿತ ಇಲಾಖೆಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಾಗಿ (ರಾಜಕೀಯ) ನೇಮಕಗೊಂಡಿದ್ದಾರೆ. ಈ ಕಾರ್ಯಕ್ರಮದಲ್ಲಿ ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ,ಸಂಯುಕ್ತಕಾರ್ಯನಿರ್ವಹಣಾಧಿಕಾರಿ,ಸಿ.ವಿ.&ಎಸ್.ಓ, ಮತ್ತು ಎಫ್ಎ&ಸಿಎಓ, ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು.

# ಭಗವದ್ಗೀತೆ



ಯದೃಚ್ಛಯಾ ಚೋಪಪನ್ನಂ ಸ್ವರ್ಗದ್ವಾರ ಮಪಾವೃತಮ್।
ಸುಖಿನಃ ಕ್ಷತ್ರಿಯಾಃ ಪಾರ್ಥಲಭಂತೇ ಯುದ್ಧ ಮೀದೃಶಮ್॥

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -32)

**ಅರ್ಜುನ, ತಾನಾಗಿ ಒದಗಿ ಬಂದ ಇಂಥ ಯುದ್ಧವೆಂದರೆ ತೆರೆದಿಟ್ಟ ಸ್ವರ್ಗದ ಬಾಗಿಲು, ಇಂಥ ಯುದ್ಧವನ್ನು ಪುಣ್ಯಶಾಲಿಗಳಾದ ಕ್ಷತ್ರಿಯರು ಪಡೆಯುತ್ತಾರೆ.**




ಬಾರೋ ಮನೆಗೆ ಬಾರೋ ವೆಂಕಟರಮಣಾ
ಕಂಸಾಸುರಮರ್ದನನೆ ಬಾರೋ
ಕೌಶಿಕಯಜ್ಞಪ ಬಾರೋ
ಹಂಸಡಿಭಕರಂತಕ ಬಾರೋ
ಹಂಸವಾಹನನ ಪಿತನೆ ಬಾರೋ
ಸಾಸಿರಮುಖನ ಪೆತ್ತವನೆ ಬಾರೊ
ಸಾಸಿರಗಣ್ಣನ ಅನುಜ ಬಾರೊ
ಸಾಸಿರವದನಶಯನ ಬಾರೊ
ಭೂಸುರರಿಗೆ ಪ್ರಿಯನೆ ಬಾರೊ
ವಾರಿಧಿಯೊಳು ಪೊಕ್ಕವನೆ ಬಾರೊ
ವಾರಿಧಿಯ ಮಾನಭಂಗನೆ ಬಾರೊ
ವಾರಿಧಿಸುತೆಯ ಪಡೆದ ಕರುಣಾ
ವಾರಿಧಿ ಸಿರಿವಿಜಯವಿಟ್ಠಲ ಬಾರೊ

- ಶ್ರೀ ವಿಜಯದಾಸರು

(ಹತ್ತನೆಯ ದಶಕ)

# ದಯಾ ಶತಕಮ್



**ವೇದಾಂತ ದೇಶಿಕರ ಅವತಾರ ನಕ್ಷತ್ರಂ**

**ಶತಕಮಿದಮುದಾರಂ ಸಮ್ಯಗಭ್ಯಸ್ಯಮಾನಾನ್ ವೃಷಗಿರಿಮಧಿರುಹ್ಯ ವ್ಯಕ್ತಮಾಲೋಕಯಂತೀ**
**ಅನಿತರಶರಣಾನಾಮಾಧಿರಾಜ್ಯೇ ऽಭಿಷಿಂಚೇ ಚ್ಛಮಿತ ವಿಮತಪಕ್ಷಾ ಶಾರ್ಙ್ಗಧನ್ವಾನುಕಂಪಾ ॥ 106॥**

ಹಿಂದಿನ ಶ್ಲೋಕದಲ್ಲಿ ಈ ಸ್ತೋತ್ರದ ಹಿರಿಮೆ ವೈಶಿಷ್ಟ್ಯಗಳನ್ನು ವಿವರವಾಗಿ ತಿಳಿಸಿದ್ದಾರೆ. ಈ ಶ್ಲೋಕದಲ್ಲಿ ಇಂತಹ ಹಿರಿಮೆಯುಳ್ಳ ಸ್ತೋತ್ರವನ್ನು ಅಧ್ಯಯನ ಮಾಡುವವರಿಗೆ ಉಂಟಾಗುವ ಪ್ರಯೋಜನವನ್ನು ವಿವರಿಸಿದ್ದಾರೆ.

ತಿರುಮಲೆ (ವೃಷಾದ್ರಿ)ಯು ಒಂದು ಪುಣ್ಯಕ್ಷೇತ್ರವು. ಆ ದಿವ್ಯಕ್ಷೇತ್ರಕ್ಕೆ ಬಂದು ಅಲ್ಲಿ ಶ್ರೀನಿವಾಸನ ಸೇವೆಯನ್ನು ಮಾಡಿ ವಿಸ್ತಾರವೂ, ಅರ್ಥಪೂರ್ಣವೂ ಆದ ದಯಾದೇವಿಯ ಈ ಸ್ತೋತ್ರವನ್ನು ಚನ್ನಾಗಿ ಅಧ್ಯಯನ ಮಾಡಿ ಅರ್ಥಮಾಡಿಕೊಂಡು ಅದಕ್ಕನುಸಾರವಾಗಿ ದಯಾದೇವಿಯನ್ನು ಸ್ತುತಿಸುವವರಿಗೆ,ಅಂದರೆ ಭಗವಂತನನ್ನು ಅವನ ಗುಣಗಾನ ಮಾಡುತ್ತ ಸ್ತುತಿಸುವವರಿಗೆ, ದಯಾದೇವಿಯು, ಚೇತನರನ್ನು ರಕ್ಷಿಸುವುದರಲ್ಲೇ ದತ್ತಚಿತ್ತಳಾದ್ದರಿಂದ ಅನನ್ಯಶರಣರಾದ ಪ್ರಪನ್ನರಿಗೆ ದೊರಕುವ ಶ್ರೇಷ್ಠಪದವಿಯನ್ನು ಕರುಣಿಸುವವನು. ಪುಣ್ಯಕ್ಷೇತ್ರವಾದ ತಿರುಮಲೆಯ ಅಧೀಶ್ವರನಾದ ಶ್ರೀನಿವಾಸನ ಸೇವೆ ಮಾಡುವವರಿಗೆ ಅಂತಹ ಉತ್ತಮಸ್ಥಾನ ದೊರಕುವುದೆಂಬುದು ಸುಸ್ಪಷ್ಟವಾದ ವಿಚಾರ,ಏಕೆಂದರೆ ಈ ರೀತಿ ಭಗವಂತನ ಸೇವೆ ಮತ್ತು ಸ್ತೋತ್ರ ಮಾಡುವವನು ಅಂತಹ ಯೋಗ್ಯತೆಯನ್ನು ಪಡೆಯಲು ತಕ್ಕ ಕ್ರಮಗಳನ್ನೂ ಅನುಸರಿಸುತ್ತಾರೆ. ಈ ರೀತಿ ಕರುಣಾಳುವಾದ ಭಗವಂತನ ಗುಣಗಾನ ಮಾಡುತ್ತಾ ಅವನ ಸೇವೆಯನ್ನು ಮಾಡಿದರೆ ಆ ಉತ್ತಮಸ್ಥಾನವು ಲಭಿಸುವುದೆಂದು ಹೇಳಲ್ಪಟ್ಟಿದೆ. ಅಂತಹ ಭಗವದ್ಭಕ್ತರನ್ನು ಮುಕ್ತರನ್ನಾಗಿ ಮಾಡಿ, ಭಗವಂತನಿಗೆ ಸಮೀಪವಾಗಿದ್ದುಕೊಂಡು ಅವನಿಗೆ ಸೇವೆ ಮಾಡುವ ಯೋಗ್ಯತೆಯನ್ನು ಅವರಿಗೆ ದಯಾದೇವಿಯು ಕೊಡುವವಳೆಂದು ಭಾವ. ಹೀಗೆ ಮುಕ್ತರಾದ ಚೇತನರಿಗೆ ಅವರವರ ಯೋಗ್ಯತೆಗೆ ತಕ್ಕಂತೆ ಸಾಮೀಪ್ಯ, ಸಾನ್ನಿಧ್ಯ, ಸಾಯುಜ್ಯ, ಮತ್ತು ಸಾರೂಪ್ಯಗಳೆಂಬ ಸ್ಥಾನಗಳನ್ನು ಕರುಣಿಸುವವಳೆಂದು ಅಭಿಪ್ರಾಯ. ಇಂತಹವರುಗಳನ್ನು ನಿತ್ಯಸೂರಿಗಳು, ದಿವ್ಯಸೂರಿಗಳು ಮುಂತಾಗಿ ಕರೆಯುತ್ತಾರೆ. ಇಂತಹ ಉತ್ತಮ ಪದವಿಯನ್ನು ಕರುಣಿಸುವುದಕ್ಕೆ ಮುಂಚಿತವಾಗಿ ಚೇತನರ ಶತ್ರುಗಳನ್ನು ನಿಗ್ರಹಿಸುವವಳೆಂದು ತಿಳಿಸುತ್ತಾರೆ. ಅರ್ಥಾತ್ ಭಗವಂತನ ಸೇವೆ ಮಾಡುವ ಸಂಕಲ್ಪ ಮಾಡುವವರಿಗೆ ಕಾಮ,ಕ್ರೋಧಾದಿ ಅರಿಷಡ್ವರ್ಗಗಳೇ ಮೊದಲಾದ ಆಧ್ಯಾತ್ಮಿಕವಾದ ಚೇತನರ ಉದ್ಧಾರಕ್ಕೆ ವಿರೋಧಿಗಳಾದ ಶತ್ರುಗಳ ನಾಶವಾಗುತ್ತದೆಂಬುದು ವಿವಕ್ಷಿತ. ಹೀಗೆ ಭಗವಂತನ ಗುಣಗಾನ ಮಾಡಿ ಸ್ತೋತ್ರ ಮಾಡುವ ಅನನ್ಯ ಶರಣರಾದ ಭಕ್ತರಿಗೆ ಸಮಸ್ತ ವಿಧವಾದ ಕಲ್ಯಾಣವುಂಟಾಗುವಂತೆಯೇ ಈ ಸ್ತೋತ್ರವನ್ನು ಅಭ್ಯಸಿಸಿ ಹಾಡುವವರಿಗೂ ಇಂತಹ ಉತ್ತಮ ಫಲಗಳು ದೊರಕುವುದೆಂದು ಆಚಾರ್ಯರ ಅಭಿಪ್ರಾಯ.

**ಸಮಾಪ್ತಿ**

ತಿರುಮಲೆ ತಿರುಪತಿ ದೇವಸ್ಥಾನಗಳು ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

# ಸಪ್ತಗಿರಿ

ಶ್ರೀವಿಶ್ವಾವಸು ನಾಮ ಸಂವತ್ಸರ ಆಶ್ವಯುಜ - ಕಾರ್ತಿಕ ಮಾಸ ಸಂಚಿಕೆ

ಸಂಪುಟ:05 ಅಕ್ಟೋಬರ್ - 2025 ಸಂಚಿಕೆ:03



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ

**ಗೌರವ ಸಂಪಾದಕರು**
ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್.,
ಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ.,ತಿರುಪತಿ.

**ಪ್ರಚುರಣೆ,ಸಂಪಾದಕರು,**
**ಪ್ರಧಾನ ಸಂಪಾದಕರು** (ಎಫ್.ಎ.ಸಿ)
ಡಾ॥ವಿ.ಜಿ.ಚೊಕ್ಕಲಿಂಗಂ,ಎಮ್.ಎ.ಪಿಎಚ್.ಡಿ.,

**ಮುದ್ರಣ**
ಶ್ರೀ ಆರ್.ವಿ. ವಿಜಯ್‌ಕುಮಾರ್,ಬಿ.ಎ. ಬಿ.ಇಡಿ
ಉಪಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ ಮತ್ತು ಪ್ರಕಾಶನ,
ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ ತಿ.ತಿ.ದೇ.ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್, ಪ್ರಧಾನ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ, ಸಹಾಯ ಛಾಯಗ್ರಹಣ ತಿ.ತಿ.ದೇ.

**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ,
ತಿ.ತಿ.ದೇ.,ಪ್ರೆಸ್, 2 ನೇ ಅಂತಸ್ತು, ಕೆ.ಟಿ.ರಸ್ತೆ.
ತಿರುಪತಿ - 517 507
ಕಾರ್ಯಾಲಯ : 0877 - 2264543
: 0877 - 2264359
ಪ್ರಧಾನ ಸಂಪಾದಕರು : 0877 - 2264363

ಬಿಡಿ ಪ್ರತಿ ರೂ. 20/-
ವಾರ್ಷಿಕ ಚಂದಾ ರೂ. 240/-
ಆಜೀವ ಚಂದಾ ರೂ. 2400/- (12 ವರ್ಷಗಳು)
ವಿದೇಶಿ ವಾರ್ಷಿಕ ಚಂದಾ ರೂ. 1030/-

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ:
**1800-425-4141**
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
**www.tirumala.org**
ಮೂಲಕ ಓದಬಹುದು.

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

## ವಿಷಯಸೂಚಿಕೆ

| | | |
|---|---|---|
| ಸಂಪಾದಕೀಯ | | 06 |
| ಲಕ್ಷ್ಮೀ ಮಹಿಮೆ | - ಶ್ರೀನಿವಾಸರಾವ್ ಗೋಪಾಲ್ | 07 |
| ತಿರುತ್ತೇವನಾರ್ ತೊಗೈ (ಕೀಳ್ ಚಾಲೈ) | - ಸೂರ್ಯವಂಶಿ | 09 |
| ಹರಪನ ಹಳ್ಳಿ ಭೀಮವ್ವನ ಹಾಡುಗಳು | - ಹರಿಹರ ಶ್ರೀನಿವಾಸರಾವ್ | 12 |
| ಪಂಚಕನ್ಯಾಂ ಸ್ಮರೇನ್ ನಿತ್ಯಂ | - ಡಾ॥ ಸಿ.ಎಸ್. ಊರ್ಮಿಳಾ | 16 |
| ಶ್ರೀ ಕಲ್ಕಿ ಲಕ್ಷ್ಮೀ ವೆಂಕಟರಮಣ ದೇವಾಲಯ | - ಕೆಂಗೇರಿ ಚಕ್ರಪಾಣಿ | 21 |
| ಕತ್ತಲು ಬೆಳಕಿನ ಮಾಸ | - ಡಾ॥ ಗುರುರಾಜ ಪೋಶೆಟ್ಟಿಹಳ್ಳಿ | 23 |
| ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯ | - ದಿ॥ ಬಿ. ಎನ್. ಶ್ರೀನಿವಾಸನ್ | 25 |
| ದೇವ ಪಿತೃಗಳಿಗೆ ಭಕ್ತಿ ಸಮರ್ಪಿಸುವ ಬೆಳಕಿನ ಮಾಸ ಭುವಿಜನ ಭಗವಂತನಿಗೂ ಪ್ರಿಯವಾದ ಮಾಸ | - ಶ್ರೀಮತಿ ವಾರುಣಿ ಹೊನ್ನಾಳಿ | 31 |
| ಶ್ರೀ ವೆಂಕಟಾಚಲ ಮಹಾತ್ಮ್ಯೆ | - ಶ್ರೀಮತಿ ಎನ್. ಪಾರ್ವತಿ | 36 |
| ಆಳ್ವಾರುಗಳು ಕಂಡ ತಿರುವೇಂಗಡ | - ಎಂ.ಆರ್. ನರಸಿಂಹನ್ | 38 |
| ತಿರುಮಲೆ ಕಾಲಮಾನಾಚರಣೆಗಳು | - ಶ್ರೀಮತಿ | 40 |
| ಮಹರ್ಷಿ ವಾಲ್ಮೀಕಿ | - ಕೆ. ವಿ. ಪದ್ಮಾವತಿ | 42 |
| ರಾಶಿಫಲಗಳು | - ಶ್ರೀಮಾತಾ ಅನುಗ್ರಹ | 46 |
| ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು | - ಡಾ॥ ಅನಸೂಯ ಎಸ್. ರಾಜೀವ್ | 47 |
| ನೀತಿಕಥೆ - ನಿಜವಾದ ಪುಷ್ಪಾರ್ಚನೆ | - ಪ್ರಣವ | 48 |
| ಚಿತ್ರಕಥೆ - ಗುರುಗಳನ್ನು ಗೌರವಿಸೋಣ | - ಆರ್. ಕೆ.ವಿ. | 52 |

**ಮುಖಚಿತ್ರ** - ಉಭಯದೇವಿಯರೊಂದಿಗೆ ಶ್ರೀ ಮಲೆಯಪ್ಪ ಸ್ವಾಮಿಯವರು, ತಿರುಮಲೆ

**ಹಿಂಬದಿಚಿತ್ರ**- ಶ್ರೀ ಮನವಾಳ ಮಹಾಮುನಿ (ಚಿತ್ರಕಲೆ: ಎಂ.ವಿ. ರುದ್ರಮೂರ್ತಿ)

# ಸಂಪಾದಕೀಯ

## ದೀಪಗಳ ಸಡಗರದ ದೀಪಾವಳಿ

**ದೀ**ಪಗಳಿಂದ ಎಲ್ಲೆಡೆ ಬೆಳಕನ್ನು ಹರಡುತ್ತಾ ಕತ್ತಲೆಂಬ ಅಜ್ಞಾನದಿಂದ ಸುಜ್ಞಾನವೆಂಬ ಪ್ರಕಾಶದತ್ತ ನಡೆಸುವ ಹಬ್ಬ ದೀಪಾವಳಿ. ದೇಶಾದ್ಯಂತ ದೀಪಗಳ ಬೆಳಕು, ಪಟಾಕಿಗಳ ಸಂಭ್ರಮವನ್ನು ಮೆರೆಸುವ ಎಲ್ಲರಿಗೂ ಅತ್ಯಂತ ಪ್ರಿಯವಾದ ಹಬ್ಬ ದೀಪಾವಳಿ ಎಂದರೆ ತಪ್ಪಾಗಲಾರದು. ಈ ಹಬ್ಬದ ವಿಶೇಷತೆ ಪುರಾಣ ಕಾಲದಿಂದಲೂ ಕಂಡು ಬರುತ್ತಿದೆ. ಹಿಂದೆ ಶ್ರೀಕೃಷ್ಣನು ಸತ್ಯಭಾಮೆಯೊಡಗೂಡಿ ನರಕಾಸುರನನ್ನು ಸಂಹರಿಸಿ, ನರಕಾಸುರನ ಸೆರೆಯಲ್ಲಿದ್ದ ಹದಿನಾರು ಸಾವಿರ ಜನ ರಾಜಕನ್ಯೆಯರನ್ನು ಬಂಧನದಿಂದ ಮುಕ್ತಿಗೊಳಿಸಿದ. ನಂತರ ಅವರುಗಳ ಪ್ರಾರ್ಥನೆಯ ಮೇರೆಗೆ ಅವರನ್ನೆಲ್ಲಾ ತನ್ನ ಪತ್ನಿಯರನ್ನಾಗಿ ಮಾಡಿಕೊಂಡ.


ಹೀಗೆ ಲೋಕಕಂಟಕನಾದ ನರಕಾಸುರರನ್ನು ಸಂಹರಿಸಿದ ಕುರುಹಾಗಿ ನರಕಚತುರ್ದಶಿಯ ಆಚರಣೆಯನ್ನು ಮಾಡಿ ತನ್ಮೂಲಕ ಪ್ರಪಂಚದಲ್ಲಿ ಶಾಂತಿ ನೆಲೆಸಲಿ ಎಂಬ ಉದ್ದೇಶವು ಇದರಲ್ಲಿ ಅಡಗಿದೆ. ಹಾಗೇ ಮರುದಿನ ಎಲ್ಲೆಡೆ ದೀಪಾವಳಿಯ ಅಮಾವಾಸ್ಯೆಯಂದು ಶ್ರೀ ಮಹಾಲಕ್ಷ್ಮೀದೇವಿಯನ್ನು ತಮ್ಮ ಮನೆ ಮನಗಳಿಗೆ ಆಹ್ವಾನಿಸಿ ಆ ಜಗನ್ಮಾತೆಯನ್ನು ವಿಶೇಷವಾಗಿ ಆರಾಧಿಸುವ ಸಂಪ್ರದಾಯ ಅನೂಚಾನವಾಗಿ ನಡೆದುಕೊಂಡು ಬಂದಿದೆ. ಇವೆರಡೂ ದಿನಗಳ ಸಂಭ್ರಮವನ್ನು ಮುಂದುವರೆಸುತ್ತಾ, ವಟುವಾಗಿ ಬಂದು ತ್ರಿವಿಕ್ರಮವಾಗಿ ಬೆಳೆದ ವಾಮನನು ತನ್ನ ಪುಟ್ಟ ಪಾದಗಳಿಂದ ಭೂಮಂಡಲವನ್ನೇ ಅಳೆದು ಬಲಿಚಕ್ರವರ್ತಿಯ ತಲೆಯ ಮೇಲೆ ತನ್ನ ಮೂರನೆಯ ಹೆಜ್ಜೆಯನ್ನು ಇರಿಸಿ ಅವನನ್ನು ಪಾತಾಳಕ್ಕೆ ತುಳಿದು ಅವನಿಗೆ ಮೋಕ್ಷವನ್ನು ನೀಡಿದ ಸಂಕೇತವಾಗಿ ಬಲಿಪಾಡ್ಯಮಿಯನ್ನು ಆಚರಿಸುತ್ತೇವೆ.

ಈ ಎಲ್ಲಾ ಸಡಗರವನ್ನು ದೇಶದ ಎಲ್ಲೆಡೆ ದೀಪಗಳನ್ನು ಹಚ್ಚುವ ಮೂಲಕ ಆಚರಿಸುತ್ತೇವೆ. ಇದರ ಮೂಲಕ ಕತ್ತಲಿನಿಂದ ಬೆಳಕಿನೆಡೆಗೆ ಸಾಗುವ ಮುಖ್ಯ ಉದ್ದೇಶವನ್ನು ಸಾರುತ್ತೇವೆ. ಈ ದೀಪಗಳ ಹಬ್ಬವನ್ನು ಸಾಕ್ಷಾತ್ ಭೂವೈಕುಂಠವಾದ ತಿರುಮಲೆಯಲ್ಲಿ ವಿಶೇಷವಾಗಿ ಆಚರಿಸುತ್ತಾರೆ. ನರಕಚತುರ್ದಶಿಯ ದಿನದಂದು ಉಗ್ರಾಣದಿಂದ ಎಣ್ಣೆ, ಸೀಗೆಕಾಯಿಯನ್ನು ತರಿಸಿ ಬಂಗಾರದ ಬಾಗಿಲ ಮುಂದೆ ಇರಿಸಿ ಅರ್ಚಕರು, ಏಕಾಂಗಿ ದೇವಸ್ಥಾನದ ಉದ್ಯೋಗಿಗಳ ಮುಂದೆ ಗೋಷ್ಠಿ ವಿನಿಯೋಗ ಮಾಡುತ್ತಾರೆ. ಉಳಿದ ಎಣ್ಣೆ, ಸೀಗೆಕಾಯಿಯನ್ನು ವಿಮಾನ ಪ್ರದಕ್ಷಿಣೆಯ ಮಾರ್ಗವಾಗಿ ತಂದು ಪ್ರಾಕಾರದ ಬೀದಿಯಲ್ಲಿ ಮೆರವಣಿಗೆಯಲ್ಲಿ ತರುತ್ತಾರೆ. ಹಾಗೆ ಬರುವಾಗ ದೇವರಿಗೆ ಸಮರ್ಪಿಸಿದ ಶೇಷ ಎಣ್ಣೆ, ಸೀಗೆಕಾಯಿಯನ್ನು ಭಕ್ತರಿಗೆ ಹಂಚುತ್ತಾರೆ. ಮರುದಿನ ಅಂದರೆ ದೀಪಾವಳಿ ಅಮಾವಾಸ್ಯೆಯಂದು ತಿರುಮಲೆಯಲ್ಲಿ ದೀಪಾವಳಿ ಆಸ್ಥಾನವನ್ನು ಮಹಾಸಂಭ್ರಮದಿಂದ ಆಚರಣೆ ಮಾಡಲಾಗುತ್ತದೆ.

ಅಂದು ಶುದ್ಧಿ ತೋಮಾಲ ಸೇವೆಯ ನಂತರ ಶ್ರೀಮಲೆಯಪ್ಪಸ್ವಾಮಿ, ಶ್ರೀದೇವಿ ಭೂದೇವಿ ಸೇನಾಧಿಪತಿ ವಿಷ್ವಕ್ಸೇನರಿಗೆ ತಿರುಮಂಜನ ಮಾಡುತ್ತಾರೆ. ನಂತರ ಮೊದಲಘಂಟೆ, ಸಾತುಮೊರೈ ಸೇವೆ ನಡೆಯುತ್ತದೆ. ನಂತರ ಯಾಗಶಾಲೆಯಿಂದ ಶ್ರೀಸೀತಾರಾಮಲಕ್ಷ್ಮಣ , ಅನಂತ ವಿಷ್ವಕ್ಸೇನ, ಗರುಡಾಳ್ವಾರರನ್ನು ಶ್ರೀ ಹರಿಯ ಸನ್ನಿಧಿಯೊಳಗೆ ಕರೆತಂದು ಪೂಜಿಸುತ್ತಾರೆ. ನಂತರ ಶ್ರೀದೇವಿ ಭೂದೇವಿ ಸಮೇತ ಮಲೆಯಪ್ಪಸ್ವಾಮಿಯನ್ನು ಸರ್ವಭೂಪಾಲ ವಾಹನದಲ್ಲಿ ಕುಳ್ಳೀರಿಸಿ ವಿಶೇಷ ತಿರುವಾಭರಣಗಳಿಂದ ಅಲಂಕರಿಸಿ, ಪುಷ್ಪಾಲಂಕಾರ ಸೇವೆ ಮಾಡುತ್ತಾರೆ. ಆಗ ಮೂಲ ಮೂರ್ತಿಗೆ ಎರಡನೆಯ ಅರ್ಚನೆ, ಘಂಟೆ ನೈವೇದ್ಯ ಮಾಡುತ್ತಾರೆ. ಅರ್ಚಕರು, ಆಲಯದ ಅಧಿಕಾರಿಗಳು ಛತ್ರ, ಚಾಮರ ಸಹಿತ ಪಂಚಮುಖ ಬಾಜಾಭಜಂತ್ರಿಗಳೊಂದಿಗೆ ಬಂಗಾರದ ಬಾಗಿಲ ಮೂಲಕ ಮೂಲದೇವರ ಬಳಿಗೆ ಬರುತ್ತಾರೆ. ಮೂಲಮೂರ್ತಿಗೆ ಕಿರೀಟ, ನೂತನ ವಸ್ತ್ರ, ತೋಮಾಲ ಉತ್ತರೀಯದ ಸಮರ್ಪಣೆ ನಡೆಯುತ್ತದೆ. ನಂತರ ಚಂದನವನ್ನೂ ಸಮರ್ಪಿಸುತ್ತಾರೆ. ಆರತಿಯ ನಂತರ ಗೋಷ್ಠಿ ತೀರ್ಥ, ಚಂದನ ಶಠಾರಿ ವಿನಿಯೋಗ ನಡೆಯುತ್ತದೆ.

ಮೂಲದೇವರಿಗೆ ಅರ್ಪಿಸಿ ಉಳಿದ ಎರಡು ವಸ್ತ್ರಗಳನ್ನು ಬೆಳ್ಳಿಯ ತಟ್ಟೆಯಲ್ಲಿ ಜಿಯ್ಯಂಗಾರರು ತಮ್ಮ ತಲೆಯ ಮೇಲಿರಿಸಿಕೊಂಡು ಆಸ್ಥಾನಕ್ಕೆ ಬರುತ್ತಾರೆ. ಅಲ್ಲಿ ಒಂದು ವಸ್ತ್ರವನ್ನು ಮಲೆಯಪ್ಪಸ್ವಾಮಿಗೆ ಮತ್ತೊಂದನ್ನು ಸೇನಾಧಿಪತಿ ವಿಷ್ವಕ್ಸೇನರಿಗೆ ಸಮರ್ಪಿಸುತ್ತಾರೆ. ನಂತರ ಪಂಚಮುಖಗಳ ಆಸ್ಥಾನ , ಅಂದರೆ ಐದು ದೀವಟಿಗೆಗಳನ್ನು ಒಂದು ಚಕ್ರದಂತೆ ಇರಿಸಿ, ಬೆಳಗಿಸಿ ಮಾಡುವ ಆರತಿ. ನಂತರ ಅರ್ಚಕರಿಗೆ ಶಠಾರಿ ನೀಡುತ್ತಾರೆ.ದೀಪಾವಳಿ ಅಮಾವಾಸ್ಯೆಯಂದು ಆಲಯದಲ್ಲಿ ವಿಶೇಷವಾಗಿ ದೀಪಾಲಂಕಾರ ಮಾಡುತ್ತಾರೆ. ರಂಗಮಂಟಪ, ಕಲ್ಯಾಣಮಂಟಪ ಧ್ವಜ ಸ್ತಂಭದ ಬಳಿ, ವಿಮಾನ ಪ್ರಾಕಾರದ ಬಳಿ, ವರಾಹಸ್ವಾಮಿಯ ಗುಡಿಯೊಳಗೆ ಪ್ರತ್ಯೇಕವಾದ ದೀಪಗಳನ್ನು ಹಚ್ಚುತ್ತಾರೆ. ಸಂಜೆಯ ತೋಮಾಲೆಸೇವೆಗೂ ಮುನ್ನ ಈ ದೀಪಗಳನ್ನು ಹಚ್ಚುವ ನಿಯಮವಿದೆ. ಈ ಎಲ್ಲಾ ದೀಪಗಳೂ ಆಕಳಿನ ಸೆಗಣಿಯಿಂದ ತಯಾರಿಸಿದ ಹಣತೆಗಳಲ್ಲಿ ಹಚ್ಚಬೇಕೆಂಬ ನಿಯಮವಿದೆ.ಈ ಮೂಲಕ ದೀಪಾವಳಿಯ ಹಬ್ಬವು ದೇವದೇವನ ಸನ್ನಿಧಿಯಿಂದ ಹಿಡದು ಭಕ್ತರ ಮನೆಮನೆಗಳಲ್ಲಿ ಬೆಳಕನ್ನು ಚೆಲ್ಲಿ ಆ ಶ್ರೀನಿವಾಸನ ಆಶೀರ್ವಾದವನ್ನು ಸಮಸ್ತ ಭಕ್ತರಿಗೆ ದೊರೆಯುವಂತೆ ಮಾಡುವುದು ಇದರ ಮುಖ್ಯಸಾರವಾಗಿದೆ.

**ಗೋವಿಂದಾ! ಗೋವಿಂದಾ!! ಗೋವಿಂದಾ!!!**



# ಲಕ್ಷ್ಮೀ ಮಹಿಮೆ

- ಶ್ರೀನಿವಾಸರಾವ್ ಗೋಪಾಲ್
84533 26571

ನಮ್ಮ ಹಿಂದೂ ಧರ್ಮದಲ್ಲಿ ಒಂದೊಂದು ಋತುವಿಗೆ ಒಂದೊಂದು ಮಾಸಕ್ಕೆ ಪ್ರತ್ಯೇಕತೆ ವೈವಿಧ್ಯತೆ ಇರುತ್ತದೆ. ಆ ವೈಶಿಷ್ಟತೆ ಅನ್ವಯ ಭಾರತೀಯರ ಹಬ್ಬ ಹರಿದಿನಗಳು ಏರ್ಪಡುತ್ತದೆ, ಏರ್ಪಟ್ಟಿದೆ ಎನ್ನಬಹುದು. ಅದಕ್ಕಾಗಿಯೇ ಆ ಹಬ್ಬಗಳಲ್ಲಿ ವೈವಿಧ್ಯತೆ ಕಂಡು ಬರುತ್ತದೆ. ಶ್ರಾವಣಮಾಸ ವರ್ಷ ಋತುವಿನ ಮೊದಲ ಮಾಸ ಭೂಮಿ ಆರ್ದ್ರವಾಗುವ (ನೆನೆಯುವ, ತೇವಗೊಳ್ಳುವ ಕಾಲ-ಸಮಯ ಹಾಗಾಗಿ ವೇದಗಳಲ್ಲಿ - ಶ್ರೀ ಸೂಕ್ತದಲ್ಲಿ ಆರ್ದ್ರತೆ ಎನ್ನುವ ಮಹಾಲಕ್ಷ್ಮಿಯನ್ನು ಆದರಿಸಿ ಆಹ್ವಾನಿಸಲಾಗುವುದು ಕಾರಣ ಏನೆಂದರೆ ಮಳೆಯಿಂದ ಭೂಮಿ ತೋಯ್ದು ನೀರನ್ನು ಹೀರಿಕೊಂಡು ತೇವದಿಂದ ಕೂಡಿ ಭೂಮಿ ಸಸ್ಯಶ್ಯಾಮಲೆಯಾಗಿ ಶೋಭಿತಳಾಗಿ ಕಂಗೊಳಿಸುವವಳು. ಇದರಿಂದ ಜೀವಕೋಟಿಗೆ ಎಲ್ಲ ಬಗೆಯ ಆಹಾರೋತ್ಪನ್ನವಾಗಲು ಸಹಾಯಕ ಚೇತೋಹಾರಿ ಯಾಗಿ ಪರಿಣಮಿಸಿ ಈ ಆರ್ದ್ರ ಋತುವು (ಶ್ರಾವಣ-ಭಾದ್ರಪದ) ಲಕ್ಷ್ಮಿ ಆರಾಧನೆಗೆ ಪ್ರಶಸ್ತಮಾಸ **"ಶ್ರಾವಣ"** ಎಂದು ಹೇಳ ಲಾಗಿದೆ. ಶಾಸ್ತ್ರಗಳಲ್ಲಿ ಶ್ರಾವಣಮಾಸದಲ್ಲಿ ಶುಕ್ಲಪಕ್ಷವೆಲ್ಲಾ ಲಕ್ಷ್ಮಿರೂಪಶಕ್ತಿ ಆರಾಧನೆಗೆ ಪ್ರಶಸ್ತವಾದದು ಎಂಬುದನ್ನು ಧರ್ಮಶಾಸ್ತ್ರದಲ್ಲಿ ಪುರಾಣಗಳಲ್ಲಿ ಹಾಗೂ ತಂತ್ರಗಳಲ್ಲೂ ಸಹ ಉಲ್ಲೇಖಿಸಲಾಗಿದೆ ಎನ್ನುತ್ತಾರೆ. ಶ್ರೀಲಕ್ಷ್ಮಿ ಉಪಾಸನೆಗೆ ಸಂಬಂಧಿಸಿದಂತೆ ಕಮಲಾತ್ಮಿಕ ವಿದ್ಯೆಯಲ್ಲಿ ಶ್ರಾವಣ ಶುಕ್ಲ ಪಕ್ಷವೆಲ್ಲಾ ಮಹಿಮಾನ್ವಿತವಾದುದು ಎಂದೆನ್ನಲಾಗಿದೆ. ಶ್ರಾವಣ ಶುಕ್ಲ ಪಾಡ್ಯಮಿಯಿಂದ ನವಮಿ ಚಂದ್ರ ಲಕ್ಷಣಗಳು. ಈ ಮೂರು ಗುಣಗಳ ಲಕ್ಷ್ಮಿದೇವಿ ಅದಕ್ಕಾಗಿಯೇ ಚಂದ್ರಾ ಅನ್ನೋ ಹೆಸರೂ ಅಮ್ಮನವರ ನಾಮ (ಅಷ್ಟೋತ್ತರ/ಸಹಸ್ರನಾಮ)ವಾಗಿ ಶಾಸ್ತ್ರರೀತ್ಯ ಸ್ಮರಿಸಲಾಗುವುದು. ಚಂದ್ರವೃದ್ಧಿ ಕಲೆಯಲ್ಲಿ (ದೊಡ್ಡದಾಗುವುದು) ಇದ್ದರೆ ಶುಕ್ಲ ಪಕ್ಷದಲ್ಲಿ ಯಾವುದನ್ನು ಆರ್ಜಿಸುವುದರಲ್ಲಿ ಪ್ರತ್ಯೇಕತೆ ಅದಕ್ಕೆ ಜೊತೆ ಈ ಶುಕ್ಲಪಕ್ಷ ಶುಕ್ರವಾರಗಳು ಮತ್ತಷ್ಟು ಪ್ರತ್ಯೇಕತೆ.

ಇಂದ್ರದೇವನು ಈ ವಾರಕ್ಕೆ (ಶುಕ್ರವಾರ) ಆದಿ ದೇವನಾಗಿ ಜ್ಯೋತಿರ್ವಿಜ್ಞಾನ ಹೇಳುತ್ತದೆ. ಇಂದ್ರನು ತ್ರಿಲೋಕದ ಐಶ್ವರ್ಯಕ್ಕೆ ಅಧಿಪತಿ. ಈ ಸ್ಥಿತಿ ಅವನಿಗೆ ಲಕ್ಷ್ಮೀ ಅನುಗ್ರಹದಿಂದ ಲಭಿಸಿತು. ಭೃಗುಪ್ರಜಾಪತಿ ಕೂಡ ಅಧಿಪತಿಯನ್ನಾಗಿಸುತ್ತಾನೆ ಮತ್ತು ಲಕ್ಷ್ಮೀ ಕಟಾಕ್ಷ ಸಿದ್ಧಿಯಾಗಿ ಆ ಮಾತಯೇ (ಲಕ್ಷ್ಮೀದೇವಿ) ಅವನಿಗೆ ಮಗಳಾಗಿ ಲಭಿಸಿ ವಿಷ್ಣು ಪತ್ನಿಯಾದಳು. ಅದಕ್ಕಾಗಿಯೇ ಶುಕ್ರ (ಭೃಗು)ವಾರ ಶಕ್ತಿ ಆರಾಧನೆಗೆ ಪ್ರಶಸ್ತವಾದರಿಂದ ಶ್ರಾವಣ ಶುಕ್ಲಪಕ್ಷ ಶುಕ್ರವಾರ ಅತ್ಯಂತ ಪ್ರಭಾವ (ಶಕ್ತಿಯುತ)ವಾದುದೆಂದು ಹೇಳಿ ಬಲು ವಿಶೇಷವಾಗಿ ವರ ಮಹಾಲಕ್ಷ್ಮಿವ್ರತವನ್ನು ಎಲ್ಲರೂ ಬಲು ವೈಭವದಿಂದ ಭಕ್ತಿಶ್ರದ್ಧೆಗಳಿಂದ ಆಚರಿಸಿ ಸಂಭ್ರಮಿಸುತ್ತಾರೆ.

ತುಷ್ಟಿ - ಪುಷ್ಟಿ (ಸಂತೋಷ - ಸಮೃದ್ಧಿ) ಸದ್ಬುದ್ಧಿ ಕೀರ್ತಿ ವರ್ಚಸ್ಸು, ಜ್ಞಾನ,ಸ್ಮೃತಿ, ಬಲ,ಮೇದಸ್ಸು, ಶ್ರದ್ಧೆ, ಆರೋಗ್ಯ,

ಜಯ,ಪರಾಕ್ರಮ, ಶಾಂತಿ, ಪ್ರಸನ್ನತೆ, ಸ್ನೇಹಶೀಲತೆ, ದಯೇ, ಸ್ವಚ್ಛತೆ, ಶುಚಿತ್ವ, ಇವೆಲ್ಲಾ ಲಕ್ಷ್ಮಿ ಲಕ್ಷಣಗಳು ಎಂದು ಕೆಲವು ಸಂಹಿತೆ ಗ್ರಂಥಗಳು ಹೇಳುತ್ತದೆ. ಇವೆಲ್ಲಾ (ಮೇಲೆ ತಿಳಿಸಿದ) ಲಕ್ಷಣಗಳೇ ಲಕ್ಷ್ಮಿಕಟಾಕ್ಷವೆಂದು ಈ ಗುಣಗಳನ್ನು ಹೊಂದುವ ಸಾಧನವೇ/ಯೇ ಲಕ್ಷ್ಮಿಸಂತಸ. ಲಕ್ಷ್ಮಿಪೂಜೆಗೆ ಸಮನಾಗಿ ವ್ರತವನ್ನಾಚರಿಸುವ ವಾಡಿಕೆ ಎನ್ನಲಾಗಿದೆ.

ಕೇವಲ ಧನ (ಹಣ) ಒಂದೇ ಅಲ್ಲದೆ ಸದ್ಗುಣ, ಸದ್ಭಾವನೆ, ಆಕ್ರೋಶವೆಂಬುದಿಲ್ಲದಿರುವುದು ಸೌಮ್ಯತೆ,ಸಂತಸ, ವಿದ್ಯೆ, ಅಪಾರ ಸಮೃದ್ಧಿ, ಸೌಖ್ಯ ದವಸದಾನ್ಯಗಳ ರಾಶಿ ಇಂತಹ ಸಂಪತ್ತುಗಳನ್ನು ಹೊಂದಿರುವುದೇ ಲಕ್ಷ್ಮಿದೇವಿಯ ಪ್ರಸನ್ನತೆ ಎಂಬುದಾಗಿ ದೇವಿ ಭಾಗವತ ಪುರಾಣದಲ್ಲಿ ಹೇಳಲಾಗಿದೆ. ಕಲಹ, ದುಃಖ, ವಾಕ್ಪಾರುಷ್ಯ, ದರಿದ್ರ, ದುಷ್ಟತನ ಅಹಂಕಾರ, ಅಹಂಭಾವ ಅಲಕ್ಷ್ಮಿ ಚರ್ಯಗಳು ಪರಸ್ಪರ ಪ್ರೇಮ ಸಂತೃಪ್ತಿ ಸೌಮ್ಯವಾಕ್ಕು, ಐಶ್ವರ್ಯ, ಶಿಷ್ಟತ್ವ, ಸದಾಚಾರ ಇಂತಹ ಗುಣಗಳೆಲ್ಲಾ ಲಕ್ಷ್ಮಿ ವಿಭೂತಿಯಂತೆ ಭಾವಿಸಿ ಲಕ್ಷ್ಮಿ ತಾಂಡವವಾಡುವ ಲಕ್ಷಣಗಳೆನ್ನಬಹುದು ಇಂತಹ ಲಕ್ಷ್ಮಿ ಲಕ್ಷಣಗಳೊಡನೆ ವಿಲಾಸ ವೈಭೋಗದಿಂದಿರುವುದೇ ಭಾವನಾತ್ಮಕವಾಗಿ ಆ ಮಹಾಲಕ್ಷ್ಮೀದೇವಿಯನ್ನು ಆರಾಧಿಸುವುದೇ ನಿಜ ಅರ್ಥದಲ್ಲಿ ವೈಭವಲಕ್ಷ್ಮಿ ಪೂಜೆ ಎನ್ನಲಾಗುವುದು.

ಪ್ರತಿ ಸ್ತ್ರೀಯಲ್ಲಿ ಏನೋ ಒಂದು ಬಗೆಯ ವಿಶೇಷ ಕಳೆ ಇದ್ದು (ಎಲ್ಲಿ ನಾರಿಯನ್ನು ಪ್ರೀತಿ ಗೌರವದಿಂದ ಕಂಡು ಆರಾಧಿಸಲಾಗುವುದೋ ಅಲ್ಲಿ ಲಕ್ಷ್ಮಿ ಶಾಶ್ವತವಾಗಿ ನೆಲಸಿ ಅಂತಹ ಮನೆ ಸದಾಕಾಲ ಸುಖ ಸಂತಸದಿಂದ ನಳನಳಿಸುತ್ತಿರುತ್ತದೆ ಎಂದೆನ್ನಲಾಗಿದೆ-ಲಕ್ಷ್ಮೀಪುರಾಣದಲ್ಲಿ) ಅದಕ್ಕಾಗಿಯೇ ಸ್ತ್ರೀಯರನ್ನುಶ್ರೀ ಲಕ್ಷ್ಮಿ ಅಂಶವಾಗಿ ಭಾವಿಸಿ ಗೌರವಿಸಿದಲ್ಲಿ ನಿಜವಾಗಿಯೂ ಲಕ್ಷ್ಮಿ ಕಟಾಕ್ಷ ಸಿದ್ಧಿಸುವುದಾಗಿ ದೇವಿ ಶಾಸ್ತ್ರವು ಸ್ಪಷ್ಟವಾಗಿ ಪ್ರತಿಪಾದಿಸುತ್ತದೆ.ಅದಕ್ಕಾಗಿಯೇ ಸೌಮ್ಯವದನಳಾದ ಸುಸ್ವಭಾವದ ಸುಗುಣವಂತರಾದ ಸ್ತ್ರೀಯರು ಸಂತಸ ಸಂಭ್ರಮದಿಂದ ಶುದ್ಧ ಸಂತುಷ್ಟ ಸಮೃದ್ಧ ಮನದಿಂದ ಭಕ್ತಿ ಪರವಶಳಾಗಿ ಶ್ರಾವಣ ಶುಕ್ರವಾರ ಸಂತೃಪ್ತ ಶ್ರೀಲಕ್ಷ್ಮಿ ಪೂಜೆ ಶಾಸ್ತ್ರೋಕ್ತವಾಗಿ ಮಾಡಿ ಪರಸ್ಪರ ಗೌರವಾದರಗಳಿಂದ ಚೆನ್ನಾಗಿ ವ್ರತಾಚರಣೆ ಸಂಪ್ರದಾಯ ಅನಾದಿ ಕಾಲದಿಂದ ನಡೆದು ಬಂದ ಪದ್ಧತಿ ಆದ್ದರಿಂದ ತಮ್ಮ ತಮ್ಮ ಕುಟುಂಬದ ಒಳಿತನ್ನು ಏಳಿಗೆಯನ್ನು ಕಂಡುಕೊಳ್ಳಬಹುದಾಗಿದೆ.

ಎಷ್ಟೋ ಔಚಿತ್ಯಗಳೊಡನೆ ಕೂಡಿದ ಶ್ರಾವಣಮಾಸ ಪ್ರಕೃತಿಗೆ ಮನುಕುಲಕ್ಕೆ ಶಾಂತಿ ಪುಷ್ಟಿ ಅಭ್ಯುದಯವನ್ನು ಪ್ರಸಾದಿಸುವಂತೆ ನಮ್ಮೆಲ್ಲರ ಆಶಾಜ್ಯೋತಿ ಲಕ್ಷ್ಮೀದೇವಿಯ ಅನುಗ್ರಹ ಕೇಳಿಕೊಂಡು ಪ್ರಾರ್ಥಿಸೋಣ.



ತಿರುಮಲೆ ತಿರುಪತಿ ದೇವಸ್ಥಾನಗಳು

ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಶೀರ್ವಾದ ಎಲ್ಲರಿಗೂ ಸಿಗಲೆಂದು ಹಾರೈಸುತ್ತಾ ಓದುಗರಿಗೆ, ಚಂದಾದಾರರಿಗೆ,

**ದೀಪಾವಳಿ ಹಬ್ಬದ**


ಹಾರ್ದಿಕ ಶುಭಾಶಯಗಳು

- ಪ್ರಧಾನಸಂಪಾದಕರು

ದೀಪಾವಳಿ ಹಬ್ಬದ
ಹಾರ್ದಿಕ ಶುಭಾಶಯಗಳು

# ತಿರುತ್ತೇವನಾರ್ ತೊಗೈ (ಶೀಳ್ ಕಾಳ್ಳೈ) ಮಾಧವಪ್ಪೆರುಮಾಳ್ ಕೋಯಿಲ್

108 ದಿವ್ಯದೇಶಗಳು



ಮೂಲ : ಆಚಾರ್ಯ ಚಕ್ರವರ್ತಿ ರಂಗನಾಥನ್
ಅನುವಾದ : ಸೂರ್ಯವಂಶಿ


ಈ **'ತಿರುತ್ತೇವನಾರ್ ತೊಗೈ'** ತಿರುನಾಂಗೂರ್ ದಿವ್ಯ ದೇಶಗಳಲ್ಲಿ ಒಂಭತ್ತನೆಯದಾಗಿದೆ. ಈ ದಿವ್ಯ ದೇಶವು ಶೀರ್ ಕಾಳಿ ಎಂಬ ದಿವ್ಯ ದೇಶದಿಂದ ಸುಮಾರು 8 ಕಿ.ಮೀ ದೂರ ದಲ್ಲಿ, ತಿರುನಾಂಗೂರ್ ನ ಸಮೀಪದಲ್ಲಿ **'ಮಾಧವಪೆರುಮಾಳ್ ಕೋಯಿಲ್'** ಎಂಬ ಹೆಸರಿನಿಂದ ನೆಲೆಸಿದೆ. ಅತ್ಯಂತ ಸುಂದರವಾದ ಪ್ರಕೃತಿ ಸೌಂದರ್ಯದಿಂದ ರಾರಾಜಿಸುತ್ತಿದೆ. ಇಲ್ಲಿ ಭಗವಂತನು ಶ್ರೀದೇವಿಭೂದೇವಿ ಸಮೇತವಾಗಿ ಪಶ್ಚಿಮಾ ಭಿಮುಖವಾಗಿರುವ ಭಂಗಿಯಲ್ಲಿ ನಿಂತು, ಶಂಖಚಕ್ರಾದಿಗಳನ್ನು, ಅಭಯಹಸ್ತದೊಂದಿಗೆ, ನಾಲ್ಕು ಭುಜಗಳಿಂದ ದೈವನಾಯ ಕನ್ ಎಂಬ ದಿವ್ಯನಾಮದಿಂದ ಸೇವೆಯನ್ನು ಸ್ವೀಕರಿಸುತ್ತಿ ದ್ದಾನೆ. ಉತ್ಸವ ಮೂರ್ತಿಯ ಮೂಲಮೂರ್ತಿಯಂತೆಯೇ ಚತುರ್ಭುಜಗಳೊಂದಿಗೆ ಶ್ರೀದೇವಿ, ಭೂದೇವಿ ಸಮೇತನಾಗಿ **'ಮಾಧವ ಪ್ಪೆರುಮಾಳ್'** ಎಂಬ ದಿವ್ಯನಾಮದೊಂದಿಗೆ ನಿಂತು ಭಕ್ತರನ್ನು ಅನುಗ್ರಹಿಸುತ್ತಿದ್ದಾನೆ. ಪ್ರತ್ಯೇಕ ಸನ್ನಿಧಿಯಲ್ಲಿ ಅಮ್ಮ ನವರು ಸಮುದ್ರದಿಂದ ಉದ್ಭವಿಸಿದಳಾದ್ದರಿಂದ **'ಕಡಲ್ ಮಗಳ್ ನಾಚ್ಚಿಯಾರ್'** ಅಂದರೆ **'ಸಮುದ್ರತನಯ'** ಎಂಬ ಹೆಸರಿನೊಂದಿಗೆ ಅಮ್ಮನವರು ನೆಲೆಸಿದ್ದಾರೆ. ಉತ್ಸವಮೂರ್ತಿ ಮಾಧವನಾಯಕಿ, ಮಧುರನಾಯಕಿ ಎಂಬ ತಿರುನಾಮಗ ಳಿಂದ ಕರೆಯಲ್ಪಡುತ್ತಿದ್ದಾರೆ. ಇಲ್ಲಿ ಇರುವಂತಹ ತೀರ್ಥವು ಶೋಭನತೀರ್ಥ, ದೇವಸಭಾಪುಷ್ಕರಿಣಿ, ದೇವಕುಂಡ ಪುಷ್ಕ ರಿಣಿ ಎಂದು ಕರೆಯುಲ್ಪಡುತ್ತಿದೆ. ಈ ದಿವ್ಯ ದೇಶದ ವಿಮಾನ ವನ್ನು ಶೋಭನ ವಿಮಾನವೆಂದು ಕರೆಯುತ್ತಾರೆ.

### ಇಲ್ಲಿನ ವಿಶೇಷತೆ

**'ಕಡಲ್ ಮಗಳ್ ನಾಚ್ಚಿಯಾರ್'** ಸಮುದ್ರತನಯ ಕ್ಷೀರಾಬ್ಧಿಯಿಂದ ಅವತರಿಸಿದಳಾದ್ದರಿಂದ ಆ ಸನ್ನಿಧಿಯ ವಿಮಾನದ ನೆರಳು ವಿಮಾನದ ಮೇಲೆ ಬೀಳುತ್ತದಾಗಲೀ ಭೂಮಿಯ ಮೇಲೆ ಬೀಳುವುದಿಲ್ಲವಂತೆ.

### ಸ್ಥಳಪುರಾಣ

ದೇವೇಂದ್ರನು ದೇವತೆಗಳ ರಾಜನಾಗಿ ದೇವಲೋಕ ದಲ್ಲಿ ಸಮಸ್ತ ವೈಭೋಗಗಳನ್ನು ಅನುಭವಿಸುತ್ತಾ, ಅಹಂಕಾ ರಕ್ಕೆ ಒಳಗಾದನು. ಒಂದು ದಿನ ದುರ್ವಾಸ ಮಹರ್ಷಿಯು ಭಗವಂತನ ಪ್ರಸಾದದೊಂದಿಗೆ ಒಂದು ದಿನ ದುರ್ವಾಸ ಮಹರ್ಷಿಯು ಭಗವಂತನ ಪ್ರಸಾದದೊಂದಿಗೆ ಒಂದು ಅದ್ಭುತವಾದ ಮಾಲೆಯನ್ನು ತಂದು,ಈ ಸುಗಂಧಭರಿತವಾದ ಮಾಲೆಯನ್ನು ಸಾಮಾನ್ಯವಾದ ರಾಜನಿಗೆ ನೀಡಿದರೆ ಚೆನ್ನಾಗಿ ರುವುದಿಲ್ಲವೆಂದು ಭಾವಿಸಿ, ದೇವೇಂದ್ರನಿಗೆ ಈ ಮಾಲೆಯನ್ನು ನೀಡಬೇಕೆಂದು,ಐರಾವತದ ಮೇಲೆ ಕುಳಿತು ಆಡಂಬರ ದಿಂದ ಬರುತ್ತಿದ್ದ ದೇವೇಂದ್ರನಿಗೆ ಪ್ರಸಾದಿಸಿದರು. ಮದಾಂಧ ನಾಗಿ ಗರ್ವದಿಂದ, ಇಮ್ಮಡಿಸಿದ ಅಹಂಕಾರದಿಂದ ತುಂಬಿದ್ದ ದೇವೇಂದ್ರನು ದುರ್ವಾಸ ಮಹರ್ಷಿಯನ್ನು ಕೊನೇ ಪಕ್ಷ



ನೋಡಲೂ ಇಲ್ಲ, ಐರಾವತದಿಂದ ಕೆಳಗಿಳಿದು ನಮಸ್ಕರಿಸಲೂ ಇಲ್ಲ, ದುರ್ವಾಸ ಮಹರ್ಷಿ ದೇವೇಂದ್ರನ ಈ ನಡವಳಿಕೆಯನ್ನು ಅಷ್ಟಾಗಿ ಲೆಕ್ಕ ಮಾಡದೇ ತನ್ನ ಕೈಯಲ್ಲಿದ್ದ ಮಾಲೆಯನ್ನು ದೇವೇಂದ್ರನಿಗೆ ನೀಡಿದ. ದೇವೇಂದ್ರನು ನಿರ್ಲಕ್ಷ್ಯದಿಂದ ಆ ಮಾಲೆಯನ್ನು ತೆಗೆದುಕೊಂಡು ಶಿರಸ್ಸಿಗೆ ಭಕ್ತಿಯಿಂದ ಮುಟ್ಟಿಸಿಕೊಳ್ಳದೇ ಅದನ್ನು ಐರಾವತದ ಮೇಲೆ ಹಾಕಿದ. ಆ ಐರಾವತವು ತನ್ನ ಮೇಲೆ ಯಾವುದೋ ವಸ್ತು ಬಿದ್ದಿದೆ ಎಂದುಕೊಂಡು ಆ ಮಾಲೆಯನ್ನು ತನ್ನ ಸೊಂಡಿಲಿನಿಂದ ತೆಗೆದು ಕೆಳಗೆ ಬೀಳಿಸಿ ಕಾಲಿನಿಂದ ತುಳಿಯಿತು.

ಈ ದೃಶ್ಯವನ್ನು ಪ್ರತ್ಯಕ್ಷವಾಗಿ ನೋಡುತ್ತಾ ನಿಂತಿದ್ದ ದುರ್ವಾಸ ಮಹರ್ಷಿಗೆ ಅಮಿತವಾದ ಕೋಪವುಂಟಾಯಿತು. ತನ್ನ ಮೇಲಿನ ಅಕ್ಕರೆಯಿಂದ ಅಮ್ಮನವರು ಮತ್ತು ಶ್ರೀಮನ್ನಾರಾಯಣನು ಈ ಮಾಲೆಯನ್ನು ಪ್ರಸಾದಿಸಿದ್ದರು. ತನ್ನೊಂದಿಗೆ ಅವರಿಗೂ ಅವಮಾನ ನಡೆಯಿತೆಂದು ಕೋಪದಿಂದ ದೇವೇಂದ್ರನನ್ನು ನೋಡಿ ಹೇ ದೇವೇಂದ್ರಾ! ಐಶ್ವರ್ಯವಿದೆ ಎಂಬ ಮದದಿಂದ ನೀನು ಕುರುಡನಾಗಿರುವೆ.

ಸಂಪತ್ತಿನಿಂದ ನೀನು ಪರಬ್ರಹ್ಮ ಸ್ವರೂಪನಾದ ಶ್ರೀಮನ್ನಾರಾಯಣನನ್ನು ಆ ಮಹಾಲಕ್ಷ್ಮೀದೇವಿಯನ್ನು ಅವಮಾನಿಸಿರುವೆ. ಆದ್ದರಿಂದ ಅಂತಹಾ ಐಶ್ವರ್ಯವು ನಿನ್ನನ್ನು ಬಿಟ್ಟು ಹೊರಟು ಹೋಗಲಿ,ನೀನು ಪದಚ್ಯುತಿಯನ್ನು ಹೊಂದುವಿ ಹಾಗೇ ಎಲ್ಲಲಿಂದಲೂ ಅವಮಾನದ ಪಾಲಾಗುವಿ ಎಂದು ಶಪಿಸಿದನು.

ದುರ್ವಾಸ ಮಹರ್ಷಿಯಿಂದ ಶಾಪಕ್ಕೆ ಒಳಗಾದ ಇಂದ್ರನು ರಾಕ್ಷಸರ ಮೂಲಕ ದೇವಲೋಕವನ್ನು ಸಮಸ್ತ ಸಂಪತ್ತೆಲ್ಲವನ್ನೂ ಕಳೆದುಕೊಂಡನು. ಇಂದ್ರನಿಗೆ ತನ್ನ ತಪ್ಪಿನ ಅರಿವಾಗಿ ತನ್ನ ಅಪರಾಧವನ್ನು ಮನ್ನಿಸಬೇಕೆಂದು ದುರ್ವಾಸ ಮಹರ್ಷಿಯನ್ನು, ಬೃಹಸ್ಪತಿಯನ್ನು ಪ್ರಾರ್ಥಿಸಿದಾಗ ಅವರಿಬ್ಬರೂ ಬ್ರಹ್ಮ ದೇವನ ಬಳಿಗೆ ಹೋಗಿ ಪ್ರಾರ್ಥಿಸಬೇಕೆಂದು ಹೇಳಿದರು. ಆಗ ಇಂದ್ರನು ಬ್ರಹ್ಮನ ಬಳಿಗೆ ಬಂದು, ಪ್ರಾರ್ಥಿಸಿದಾಗ ನೀನು ಈಗ ಶ್ರೀಯಃಪತಿಯನ್ನು ಶರಣು ಬೇಡು ಎಂದು ಶ್ರೀಮನ್ನಾರಾಯಣನ ಬಳಿಗೆ ಕಳುಹಿಸಿದ. ಇಂದ್ರನು, ಹಾಲಿನ ಕಡಲಿನಲ್ಲಿ ಯೋಗನಿದ್ರೆಯಲ್ಲಿ ಶಯನಿಸಿದ್ದ ಪರಂಧಾಮನನ್ನು ಸಮೀಪಿಸಿ ತನ್ನ ದಾರಿದ್ರ್ಯವನ್ನು ಹೋಗಲಾಡಿಸುವ ಉಪಾಯವನ್ನು ತಿಳಿಸಬೇಕೆಂದು ಬೇಡಿಕೊಂಡನು.

ಭಕ್ತವತ್ಸಲನಾದ ಸಕಲಗುಣ ಸಂಪನ್ನನಾದ ಪರಮಾತ್ಮನು ಇಂದ್ರನ ಮೇಲೆ ಕೃಪೆ ತೋರಿ,“ನಿನಗೆ ಈ ಸಂಪತ್ತು ಹಿಂದಿರುಗಿ ಬರುವುವು, ಇಂದ್ರ ಪದವಿಯೂ ನಿನಗೆ ದೊರೆಯುತ್ತದೆ.”ಎಂದು ಆಶೀರ್ವದಿಸಿದನು. ನಂತರ ಲಕ್ಷ್ಮೀನಾರಾಯಣನು ಹಾಲಿನ ಕಡಲನ್ನು ಕಡೆದು, ಇಂದ್ರನಿಗೆ ಸೇರುವಂತೆ ಮಾಡಿದನು.

ಹಾಲಿನ ಕಡಲಿನಿಂದ ಚಂದ್ರ,ವಾರಿಣಿ ಅಮ್ಮನವರು ಮೇಲೆ ಬಂದಾಗ, ಇಂದ್ರನು ಕೂಡಲೇ ಅಮ್ಮನ ಕಾಲುಗಳ ಮೇಲೆ ಬಿದ್ದು ತಾನು ಮಾಡಿದ ಅಪಚಾರವನ್ನು ಕ್ಷಮಿಸಬೇಕೆಂದು ಪ್ರಾರ್ಥಿಸಿದನು. ಅಮ್ಮನವರು ಸ್ವಾಮಿಗೆ ಇಂದ್ರನನ್ನು ಅನುಗ್ರಹಿಸಬೇಕೆಂದು ಹೇಳಿ, ತನ್ನ ಕೈಯಲ್ಲಿರುವ ಆ ಪಾರಿಜಾತದ ಮಾಲೆಯನ್ನು ಇಂದ್ರನಿಗೆ ಅನುಗ್ರಹಿಸಿದಳು. ಭಕ್ತಿಶ್ರದ್ಧೆಗಳೊಂದಿಗೆ ಇಂದ್ರನು ಆ ಮಾಲೆಯನ್ನು ಪಡೆದು, ಅದಕ್ಕೆ ಮರ್ಯಾದೆಯನ್ನು ತೋರಿಸುತ್ತಾ ತನ್ನ ಕಣ್ಣುಗಳಿಗೆ ಒತ್ತಿಕೊಂಡ. ಆ ಪಾರಿಜಾತ ಮಾಲೆಯ ಪ್ರಸಾದವನ್ನು ಪಡೆದ ನಂತರ ಇಂದ್ರನು ದೇವಲೋಕಕ್ಕೆ ಅಧಿಪತಿಯಾದನು.

ಆ ಸಮಯದಲ್ಲಿ ಮಹಾವಿಷ್ಣುವು ಮಹಾಲಕ್ಷ್ಮೀಯನ್ನು ವಿವಾಹ ಮಾಡಿಕೊಂಡು ಆ ವಿವಾಹದ ವಸ್ತ್ರಗಳೊಂದಿಗೆ ಸೇವಾ ಭಾಗ್ಯವನ್ನು ಪ್ರಸಾದಿಸಿದ. ದೇವದೇವನ ದಿವ್ಯ ವಿವಾಹ ಸ್ವರೂಪವನ್ನು ದರ್ಶಿಸಿಕೊಳ್ಳಬೇಕೆಂದು ದೇವತೆಗಳೆಲ್ಲರೂ ಒಂದೆಡೆ ಸೇರಿದಂತಹಾ ಸ್ಥಳವೇ **‘ತಿರುತ್ತೇವನಾರ್ ತೊಗೈ’** ಕರೆಯಲ್ಪಡುತ್ತಿದೆ.

ಭಗವಂತನು ಮಹಾಲಕ್ಷ್ಮಿಯನ್ನು ವಿವಾಹ ಮಾಡಿಕೊಂಡು, ಸ್ಥಳವೂ ದಿವ್ಯದೇಶವೆಂದೇ ಎಂದು ಕರೆಯಲ್ಪಡು

ತ್ತಿದೆ. ಈ ದಿವ್ಯದೇಶದ ಬಗೆಗೆ ತಿರುಮಂಗೈ ಆಳ್ವಾರರು ಹತ್ತು ಪಾಶುರಗಳನ್ನು ಮಂಗಳಾಶಾಸನವನ್ನಾಗಿ ರಚಿಸಿದ್ದಾರೆ.

ಯಾರು ಈ ತಿರುತ್ತೇವನಾರ್ ತೊಗೈ ಎನ್ನುವ ದಿವ್ಯ ದೇಶಕ್ಕೆ ಬಂದು ಸ್ವಾಮಿಯನ್ನು ಅಮ್ಮನವರನ್ನು ದರ್ಶಿಸಿಕೊಳ್ಳು ತ್ತಾರೋ ಅವರಿಗೆ ಕೂಡಲೇ ವಿವಾಹವು, ಸತ್ಸಂತಾನವೂ ಪ್ರಾಪ್ತಿಯಾಗುತ್ತದೆ.

**ಶ್ರೀಮದ್ದಿವ್ಯಸಭಾಸರಸ್ತಟಭುವಿ**
**ಶ್ರೀದೇವಬೃಂದೇ ಪುರೇ**
**ದೇವೋ ದೈವತನಾಯಕಃ ತದಬಲಾ**
**ಕ್ಷೀರಾಬ್ಧಿಜಾ ಶೋಭನೇ॥**
**ದೀಪ್ತ್ಯಾ ನಿರ್ಜಿತ ಭಾಸ್ಕರೇ ತು ರಮಣಃ**
**ತದ್ ವ್ಯೋಮಯಾನೇ ಸ್ಥಿತಃ**
**ಶಿಷ್ಟಃ ಶ್ರೇಷ್ಠವಸಿಷ್ಠ ಛಾಂಛಿತಕರಃ ಪ್ರತ್ಯಜ್ಞ್**
**ಮುಖೋ ಭಾಸತೇ ॥**

**॥ಓಂ ತತ್ಸತ್॥**

| | |
|---|---|
| ಭಗವಂತ : | ಮೂಲಮೂರ್ತಿ "ದೇವನಾಯಕನ್" |
| ಉತ್ಸವ ಮೂರ್ತಿ : | ಮಾಧವಪ್ಪೆರುಮಾಳ್ |
| ಅಮ್ಮನವರು : | ಮೂಲಮೂರ್ತಿ 'ಕಡಲ್ ಮಗಳ್ ನಾಚ್ಚಿಯಾರ್" (ಸಮುದ್ರತನಯ) |
| ಉತ್ಸವಮೂರ್ತಿ : | ಮಾಧವನಾಯಕಿ , ಮಧುರನಾಯಕಿ |
| ತೀರ್ಥ : | ಶೋಭನ ಪುಷ್ಕರಿಣಿ, ದೇವಸಭಾಪುಷ್ಕರಿಣಿ ದೇವಕುಂಡಪುಷ್ಕರಿಣಿ |
| ವಿಮಾನ : | ಶೋಭನ ವಿಮಾನ |
| ಪ್ರತ್ಯಕ್ಷ : | ವಸಿಷ್ಠ ಮತ್ತು ಉದಂಕಮಹರ್ಷಿಗೆ |
| ಆಗಮ : | ಪಾಂಚರಾತ್ರಾಗಮ |
| ಕೀರ್ತಿಸಿದ ಆಳ್ವಾರರು : | ತಿರುಮಂಗೈ ಆಳ್ವಾರರು |

## ತಿರುಮಲೆಯಲ್ಲಿ ನೋಡುವ ಪ್ರದೇಶಗಳು

### ಸ್ವಾಮಿಪುಷ್ಕರಿಣಿ :

ಸ್ವಾಮಿಪುಷ್ಕರಿಣಿ ತಿರುಮಲೆಯಲ್ಲಿ ಆಲಯದ ಪಕ್ಕದಲ್ಲಿದೆ. ಭಕ್ತರು ಆಲಯದಲ್ಲಿ ಪ್ರವೇಶಿಸುವ ಮೊದಲು ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡುತ್ತಾರೆ. ಇಲ್ಲಿ ಸ್ನಾನ ಮಾಡಿದರೆ ದೇಹವೇ ಅಲ್ಲದೇ ಮನಸ್ಸು ಕೂಡಾ ಪರಿಶುದ್ಧವಾಗುತ್ತದೆ.

### ಆಕಾಶಗಂಗ :

ಈ ತೀರ್ಥ ಆಲಯದಿಂದ ಉತ್ತರಕ್ಕೆ 5 ಕಿ.ಮೀ ದೂರದಲ್ಲಿದೆ.

### ಪಾಪವಿನಾಶನ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ವೈಕುಂಠತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ತುಂಬುರುತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿದೆ.

### ಶಿಲಾತೋರಣ :

ಭೌಗೋಳಿಕ ಪರಿಣಾಮದಿಂದ ಸಹಜಸಿದ್ಧವಾಗಿರುವ ಶಿಲಾತೋರಣ. ಗುಡಿಗೆ ಉತ್ತರಕ್ಕೆ ಒಂದು ಕಿಲೋ ಮೀಟರು ದೂರದಲ್ಲಿದೆ.

### ತಿ.ತಿ.ದೇ ಉದ್ಯಾನವನಗಳು :

ದೇವಸ್ಥಾನದವರು ತಿರುಮಲೆಯಲ್ಲಿ ಶೋಭಾಯಮಾನವಾದ ಉದ್ಯಾನವನಗಳನ್ನು ಬೆಳಸುತ್ತಿದ್ದಾರೆ. ಇಲ್ಲಿ ಅಪುರೂಪವಾದ ಗಿಡಗಳು, ವೃಕ್ಷಗಳು ಅಭಿವೃದ್ಧಿಯಾಗುತ್ತಿವೆ.

### ಆಸ್ಥಾನಮಂಡಪ :

ಹಿಂದೂ ಧರ್ಮ ಪ್ರಚಾರಪರಿಷತ್ತು ಅವರ ಆಧ್ವರ್ಯದಲ್ಲಿ ನಿರ್ವಹಿಸುವ ಧಾರ್ಮಿಕ ಉಪನ್ಯಾಸಗಳು, ಹರಿಕಥೆ, ಸಂಗೀತ, ಭಜನೆ ಕಾರ್ಯಕ್ರಮಗಳಿಗೆ ವೇದಿಕೆಯಾಗಿ ಉಪಯೋಗಿಸಲ್ಪಡುತ್ತಿರುವ ಸಭಾಮಂಡಪ.

### ಶ್ರೀವೆಂಕಟೇಶ್ವರ ಧ್ಯಾನಮಂದಿರ(ಎಸ್.ವಿ.ಮ್ಯೂಜಿಯಂ):

ಅಪುರೂಪವಾದ ಪುರಾವಸ್ತು ಪ್ರದರ್ಶನ, ಚಿತ್ರ, ಶಿಲ್ಪಕಳಾ ರೂಪಗಳಿಗೆ, ಧ್ಯಾನಕ್ಕೆ ಕೇಂದ್ರವಾಗಿ ಭಕ್ತರನ್ನು ಆಕರ್ಷಿಸುತ್ತಿದೆ. ಭಕ್ತರು ಭಗವಂತನನ್ನು ಧ್ಯಾನಿಸುತ್ತಾ ಮಾನಸಿಕ ಒತ್ತಡವನ್ನು ಕಳೆದುಕೊಳ್ಳಬಹುದು.

# ಹರಪನ ಹಳ್ಳಿ ಭೀಮವ್ವನ ಹಾಡುಗಳು

- ಡಾ॥ ಹರಿಹರ ಶ್ರೀನಿವಾಸರಾವ್

91104 89871

ಭೀಮವ್ವ, ಹೊಸಪೇಟೆಯ ತುಂಗಭದ್ರಾ ಅಣೆಕಟ್ಟಿನ ಹಿನ್ನೀರಿನಿಂದ ಮುಳುಗಡೆಯಾಗಿರುವ ನಾರಾಯಣ ದೇವರ ಕೆರೆ ಎಂಬಲ್ಲಿ 19 ನೇ ಶತಮಾನದ ಆದಿ ಭಾಗದಲ್ಲಿ ಹುಟ್ಟಿ, ಮದುವೆಯ ನಂತರ ಹರಪನಹಳ್ಳಿಗೆ ಬಂದು ತನ್ನ ಜೀವಿತದ ದೀರ್ಘಾವಧಿಯನ್ನು ಕಳೆದು ಕಾಲವಾದದ್ದು ಕ್ರಿ.ಶ. 1901 ಸ್ಥಳ ಸೊಂಡೂರು.

ಮಧ್ಯಮ ವರ್ಗದ ಮಾಧ್ವ ಸಂಪ್ರದಾಯದ ಸಂಪ್ರದಾಯಸ್ಥ ಕುಟುಂಬಕ್ಕೆ ಸೇರಿದ ಭೀಮವ್ವ,ತನ್ನ ಪತಿ ವಿಯೋಗದ ನಂತರ, ಹರಪನಹಳ್ಳಿಗೆ ಆರು ಕಿಲೋಮೀಟರ್ ದೂರದಲ್ಲಿರುವ ತಿಮ್ಮಲಾಪುರ ಒಡೆಯನಾದ ವೆಂಕಟೇಶ್ವರನಲ್ಲಿ ಅದಮ್ಯ ಭಕ್ತಿ ಉಳ್ಳವಳಾಗಿ, ಆತನನ್ನು ಬಗೆ ಬಗೆಯಾಗಿ **"ಭೀಮೇಶಕೃಷ್ಣ"** ಎಂಬ ಅಂಕಿತನಾಮದಿಂದ ಬಣ್ಣಿಸುತ್ತಾ ಅನೇಕ ಹಾಡುಗಬ್ಬಗಳನ್ನು ಹೆಣೆದಿದ್ದಾಳೆ. ಇವುಗಳ ಕಂಪು ಕನ್ನಡನಾಡಿನಲ್ಲಿ ಅಷ್ಟೇ ಅಲ್ಲದೆ ಆಂಧ್ರದ ತಿರುಪತಿಯ ವರೆಗೂ ನುಡಿ ಸೌರಭವಾಗಿ ಹರಡಿದೆ. ಈಕೆ ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣಿತಮತಿಯಾಗಿದ್ದ ಜಾನಪದ ಸಿರಿಯಜ್ಜಿ!ಕೃತಿಗಳು ಶ್ರಾವಣ ಶುಕ್ರವಾರ, ಶನಿವಾರ, ಸೋಮವಾರ, ದಿವಸಿಗೌರಿ, ಮಂಗಳಗೌರಿ ಹಾಡುಗಳು ಇತ್ಯಾದಿ.

ಕನ್ನಡ ಭಾಷಾ ಸಾಹಿತ್ಯದ ವೈಶಿಷ್ಟಗಳಲ್ಲಿ ಒಂದಾದ ಸಾಂಗತ್ಯದ ಛಂದಸ್ಸಿನಲ್ಲಿ, ಕೇವಲ ಎಂಟು-ಹತ್ತು ಪದ್ಯಗಳಲ್ಲಿ 68 ಬಗೆಯ ಅಡುಗೆಗಳನ್ನು 5 ಶುಕ್ರವಾರ ಮತ್ತು ಶನಿವಾರದ ಹಾಡುಗಳಲ್ಲಿ ಮನಮುಟ್ಟುವಂತೆ ಬಣ್ಣಿಸಿದ್ದಾಳೆ. ದಾಸ ಸಾಹಿತ್ಯದ ಪ್ರಕಾರದ ಗಾಢ ಪ್ರಭಾವವನ್ನು ನಾವು ಇಲ್ಲಿ ಕಾಣ ಬಹುದಾದರೂ,ನೆಲದ ಭಾಷೆ ಅದರಲ್ಲೂ ಬಳ್ಳಾರಿ ಭಾಷೆಯಲ್ಲಿ ತಿಂಡಿ ತೀರ್ಥಗಳು, ನಮ್ಮ ದೈನಂದಿನ ಆರೋಗ್ಯದ ಮೇಲೆ ಬೀರುವ ಪ್ರಭಾವ, ಹಾಗೂ ಕಂಪ್ಯೂಟರ್ ಯುಗದ ಇಂದಿನ ದಿನಗಳಲ್ಲಿ ಹೊಂದಿಕೊಳ್ಳುವ ಸೂಪಶಾಸ್ತ್ರ, ವೈದ್ಯಶಾಸ್ತ್ರ ಇವುಗಳ ಹಿನ್ನೆಲೆಯಲ್ಲಿ ಇಲ್ಲಿ ಉಲ್ಲೇಖಿಸಲಾಗಿರುವ ಅಡುಗೆಗಳ ಬಗ್ಗೆ ಪರಿಶೀಲಿಸಬಹುದಾಗಿದೆ. ಇನ್ನೊಂದು ಪ್ರಮುಖ ಅಂಶವೆಂದರೆ ಇಲ್ಲಿ ಹೇಳಿರುವ ಅಡಿಗೆಗಳನ್ನು ಇಂದಿಗೂ ಶ್ರಾವಣ ಮಾಸದ ಸೋಮವಾರ, ಮಂಗಳವಾರ, ಶುಕ್ರವಾರ, ಶನಿವಾರಗಳಂದು ತಯಾರಿಸುವ ಪರಿಪಾಠ ಬಳ್ಳಾರಿ ಮತ್ತು ಇತರ ಜಿಲ್ಲೆಗಳಲ್ಲಿ ಇಂದಿಗೂ ಸಂಪ್ರದಾಯಕವಾಗಿ ಉಳಿದು ಬಂದಿದೆ.

ಭೀಮವ್ವನು ಹೇಳಿರುವ ಶಾಖಾಹಾರಗಳನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ.

**ಸಿಹಿಪದಾರ್ಥಗಳು :** ಹೋಳಿಗೆ,ಎಣ್ಣೋರಿಗೆ, ಮಂಡಿಗೆ, ಬೀಸೂರಿಗೆ ಗುಳ್ಳೋರಿಗೆ, ಶಾವಿಗೆ ಫೇಣಿ, ಸುರಳಿ ಹೋಳಿಗೆ ಇತ್ಯಾದಿ.

**ಅನ್ನದಿಂದ ತಯಾರಾದವು:** 4 ವಿಧಗಳು ಪರಮಾನ್ನ, ಪಕ್ವಾನ್ನ, ಅನ್ನರಸ.

**ಶ್ಯಾಲ್ಯಾನ್ನ /ಪಾಯಸಗಳು : 4 ವಿಧ:-**
ಖೀರು, ಮಾಲತಿ, ಗವಲಿ, ಪರಡಿ ಪಾಯಸ.

**ಖಾರದ ಪದಾರ್ಥಗಳು :** ರಸಗಳು ಸಾರು, ಸಾಂಬಾರ, ಉಪ್ಪಿನಕಾಯಿ, ರಸರೂಪಗಳು.

**ಭಾತುಗಳು:** ನಿಂಬೆಭಾತು,ಸೌತೆಭಾತು, ಕೇಸರಿಭಾತು, ಕಾಬಾಳೆ ಭಾತು.

**ಕಲಸುಮೇಲೋಗರಗಳು:** ಹಾಗಲಕಾಯಿ, ಸೌತೆ, ಹಂದರದವರೆ (ಬಳ್ಳಾರಿ ಭಾಷೆಯಲ್ಲಿ ಚಪ್ಪರದವರೆ)ಹೀರೇಕಾಯಿ, ಬೆಂಡೆಕಾಯಿ,ಕುಂಬಳಕಾಯಿ,ಮಾದಲಕಾಯಿ,ತೆಂಗಿನ ಕಾಯಿ, ಗೆಣಸು, ಗುಳದಕಾಯಿ ಬೀಜಗಳ ವಿಶೇಷ ಖಾದ್ಯಗಳು: ಸುಖನುಂಡೆ, ಮುಖ ವಿಲಾಸ, ಉದ್ದಿನ ಕಡುಬು, ಎಣ್ಣೋರಿಗೆ, ಚಪ್ಪರದವರೆ ಭಾತು, ಹುರಿಕಡಲೆ ಮತ್ತು ಬೆಲ್ಲದ ಹೂರಣವಿರುವ ಒಂದು ರೀತಿಯ ಕರಿದ ಕಡುಬಿಗೆ ಹರಪನಹಳ್ಳಿ ಭಾಗದಲ್ಲಿ ಕರ್ಜಿಕಾಯಿ ಅಥವಾ ಗಿಲಗಂಚಿ ಎನ್ನುತ್ತಾರೆ.

ಬೆಂಗಳೂರಿನಲ್ಲಿ ಕನ್ನಡ ಜಾನಪದ ಕೋಶದ ಬಿಡುಗಡೆ ಸಂದರ್ಭದಲ್ಲಿ ಕೇಳಿ ಬಂದದ್ದೇನೆಂದರೆ ಆಯಾ ಜನಾಂಗದ ಜನ ತಮ್ಮ ಭಾಷೆಯನ್ನು ಬಿಟ್ಟು ಬೇರೆ ಭಾಷೆಯನ್ನು ಸುತಾರಾಂ ಒಪ್ಪುವುದಿಲ್ಲ ಎನ್ನುವುದು ಉದಾಹರಣೆಗೆ ಬ್ರಾಹ್ಮಣರಲ್ಲಿ ಭಕ್ಷ್ಯ ಎಂದು ಕರೆದರೆ ಇತರರಲ್ಲಿ ರೊಟ್ಟಿ ಎನ್ನುತ್ತಾರೆ.

ಆದರೆ ಜನಪದ ಕವಯಿತ್ರಿರೆನಿಸಿರುವ ಭೀಮವ್ವ, ಹೆಳವನಕಟ್ಟೆ ಗಿರಿಯಮ್ಮ ನಂತವರಿಗೆ ಈ ಮಾತುಗಳು ಅನ್ವಯಿಸು ವುದಿಲ್ಲ ಎನ್ನುವುದಕ್ಕೆ ಮೇಲೆ ಹೇಳಿದ ಗಿಲಗಂಚಿ, ಇದು ಇತರೆ ಜನಾಂಗದವರು ಉಪಯೋಗಿಸುವ ಪದ ಶನಿವಾರದ ಹಾಡಿ ನಲ್ಲಿ ಬರುವ ಶಬ್ದಗಳು ಹೀಗಿವೆ.

ಹಿಟ್ಟಿನ ಕಡುಬು ಫುಂಡಿ ಪಲ್ಯ ಮಾಡಿ ಅಚ್ಚೆಳ್ಳು ಗಾಣದೆಣ್ಣೆಯನ್ನು ನಚ್ಚು ಮಜ್ಜಿಗೆ ಹುಳಿ ತಿಳಿಯ ಕಟ್ಟಂಬಲಿ ಇಟ್ಟರೂ ನೈವೇದ್ಯವನು ಹಳೆಯ ಚಿನ್ನದ ಹರಿವಾಣದೊಳು ಕಡುಬು ಕಟ್ಟಂಬಲಿ ಬಡಿಸಿ ತರಿಸಿದ ಎಳ್ಳೆಣ್ಣೆ ಹಿಂಡಿ ಪಲ್ಯ ತಾಂಬೂಲ ನಲಿನಲಿದಾಡಿ ನೋಡುತ್ತಲೇ. ಇಲ್ಲಿ ಬಂದಿರುವ ನುಚ್ಚು, ಹುಳಿನುಚ್ಚು, ಹಿಟ್ಟಿನ ಕಡುಬು, ಹಿಂಡಿಪಲ್ಯ, ಫುಂಡಿಪಲ್ಯ,ಅಂಬಲಿ ಇವೆಲ್ಲವೂ ಹರಪನಹಳ್ಳಿ ಯಲ್ಲಿಯೇ ಏಕೆ? ಸಾಮಾನ್ಯವಾಗಿ ಕರ್ನಾಟಕ ದಾದ್ಯಂತ ಜನಪದರು ಉಪಯೋಗಿಸುವ ಮನೆ ಮನೆಯಲ್ಲೂ ತಯಾರಿಸುವಂತ ದೈನಂದಿನ ಆರೋಗ್ಯದ ಭಾಗ್ಯನಿಧಿಗಳೇ ಆಗಿವೆ. ಅನ್ನವನ್ನು ಜರಿದರೆ (ದೂರಿದೆ) ಏನಾಗುತ್ತದೆ? ಎಂದು ಬಿಂಬಿ ಸುವ ಶ್ರಾವಣ ಸಂಪತ್ತು ಶನಿವಾರದ ಪದ್ಯ ಹೀಗಿದೆ.

**ಒಂದೊಂದು ಅಡುಗೆ ನಿಂದೆಯ ಮಾಡಿ**
**ನಗುತಿರೆ ಕುಂದೀತು ಸಕಲ ಸಂಪತ್ತು|**
**ಬಂದೀತು ಪರ ರಾಜರಿಂದ ಮುತ್ತಿಗೆ ದಾಳಿ**
**ಬಂಧನ ಮಾಡಬೇಕೆನುತ ॥1॥**

ತಿನ್ನುವ ಅನ್ನವನ್ನು ದಿಕ್ಕರಿಸುವುದರಿಂದ ಉಂಟಾಗುವ ಹಾನಿಯನ್ನು ಹೇಳುವ ಸರ್ವಜ್ಞ ವಚನವಿದು.

**ಕನ್ನವನು ಕೊರೆಸುವುದು ಭಿನ್ನವನು ತರಿಸುವುದು**
**ಬನ್ನದ ಸೆರೆಗೆ ಒಯ್ಯುವುದು**
**ಒಂದು ಹಿಡಿ ಅನ್ನ ನೋಡೆಂದ ಸರ್ವಜ್ಞ**

ರೂಪಕಗಳು ಶಬ್ದ ಶಿಲ್ಪಗಳು ಬಡತನದ ಬೇಗೆಯಿಂದ ಉದಿಸುವ ಚಿತ್ತ ಛೇದಕ ನುಡಿಗಳನ್ನು ಭೀಮವ್ವ ವರ್ಣಿಸುವ ರೀತಿ ಇದು. ಅಕ್ಕ ಸಾಯಕ್ಕ



ನನ್ನು ರಾಜ ಮನೆತನಕ್ಕೆ ಮತ್ತು ತಂಗಿ ಧೇಯಕ್ಕನನ್ನು ಇನ್ನೊಂದು ರಾಜ್ಯದ ಪ್ರಧಾನಿಗೆ ಮದುವೆ ಮಾಡಿಕೊಟ್ಟಿರು ತ್ತಾರೆ, ಮೇಲೆ ಹೇಳಿದಂತೆ ಅನ್ನ ವನ್ನು ಮತ್ತು ಗೌರಿಯನ್ನು ತಂಗಿ ಧೇಯಕ್ಕ ಧಿಕ್ಕ ರಿಸಿ ಮಾತನಾಡಿದಾಗ ಪ್ರಧಾನಿಯ ಮನೆಗೆ ಕೊಟ್ಟಿದ್ದರೂ ಆಕೆ ಸಂಪತ್ತೆಲ್ಲವೂ ಕರಗಿ ಹೋಗುತ್ತದೆ. ತಿನ್ನಲು ಕೂಳೇ (ಊಟವೇ) ಇಲ್ಲದಾಗ, ಅಕ್ಕನ ಮನೆಗೆ ಸಹಾಯ ಕೇಳಿಕೊಂಡು ಬರುತ್ತಾಳೆ ತಂಗಿ. ಅಲ್ಲಿ ಆಕೆಯನ್ನು ಸಂಭ್ರಮ ದಿಂದ ಸ್ವಾಗತಿಸಿದ ದಿನ ಶ್ರಾವಣಮಾಸದ ಸಂಪತ್ತು ಶುಕ್ರವಾರ ದಿನ. ಮೇಲೆ ವಿವರಿಸಿದಂತೆ 64 ಬಗೆಯ ತಿಂಡಿ ತಿನಿಸುಗಳನ್ನು ವ್ರತಾಚರಣೆ ಗೋಸ್ಕರ ತಯಾರಿಸಿರುತ್ತಾರೆ.

ಹೀಗೆ ಸಿಟ್ಟಿನ ಕಾರಣ ತಿಳಿದ ಕೂಡಲೇ ಅಕ್ಕ ಮನಸ್ಸಿನಲ್ಲಿಯೇ ನಕ್ಕು ತಂಗಿಗೆ ತಿಳಿಯ ಹೇಳುತ್ತಾಳೆ. ನಮ್ಮಿಬ್ಬರಿಗೂ ಮದುವೆ ಮಾಡಿ ಕಳಿಸುವಾಗ ನಮ್ಮ ಅಮ್ಮ ಐದು ಶುಕ್ರವಾರದ ಮಹಾಲಕ್ಷ್ಮೀವ್ರತ, ಶನಿ ವಾರದ ಗೌರೀವ್ರತ ಇತ್ಯಾದಿಗಳ ಮಹತ್ವವನ್ನು ಹೇಳಿದ್ದಳಲ್ಲವೇ? ಈ ವ್ರತಗಳನ್ನು ಹೇಗೆ ಆಚರಿಸಬೇಕು? ಮತ್ತು ಅವುಗಳನ್ನು ಮಾಡುವಾಗ ಯಾವ ಯಾವ ನೈವೇದ್ಯಗಳು ಆಯಾ ದೇವಿ/ದೇವತೆಗಳಿಗೆ ಇಷ್ಟವೋ ಅವನ್ನೇ ಮಾಡಬೇಕೆಂದು ಹೇಳಿರಲಿಲ್ಲವೇ? ಇವನ್ನೆಲ್ಲಾ ಮರೆತು, ವ್ರತ ಗಳನ್ನು ಆಚರಿಸದಿದ್ದರಿಂದಲೇ ನಿನಗೆ ಈ ದಟ್ಟದಾರಿದ್ರ್ಯ ಒದಗಿ ಬಂದಿದೆ. ಆದ್ದರಿಂದ ಈಗಲೇ ಮಹಾಲಕ್ಷ್ಮಿ ಮತ್ತು ಗೌರಿವ್ರತಗಳನ್ನು ಇಲ್ಲಿಯೇ ಮಾಡೋಣ ಎಂದು ಸಕಲ ಏರ್ಪಾಟುಗಳನ್ನು ಮಾಡಿ ವೈಭವದಿಂದ ಪೂಜೆ ಪುನಸ್ಕಾರಗಳನ್ನು ಆಚರಿಸಿದ ನಂತರ ಮತ್ತೆ ಪ್ರಧಾನ ಮಂತ್ರಿ ಹುದ್ದೆ ಆಕೆಯ ಗಂಡನಿಗೆ ದೊರಕುತ್ತದೆ ಎಂದು ಕಥೆ ಮುಂದುವರಿ ಯುತ್ತದೆ.

ಈ ವ್ರತಗಳ ಆಚರಣೆಯ ಬಗೆಗೆ ಹೇಳಬೇಕೆಂದರೆ ಇಲ್ಲಿ ಅಕ್ಕ ತಂಗಿಯರ ಅನುಬಂಧ, ಬಡವ ಬಲ್ಲಿದ ತಾರತಮ್ಯವಾದಗಳು ಈ ವ್ರತ ಗಳಿಂದ ಹೇಗೆ ಮಾಯವಾಗುತ್ತದೆ ಎನ್ನುವುದನ್ನು ಬಹಳ ಸುಂದರವಾಗಿ ಕಥೆ ಹೇಳುವುದರ ಮೂಲಕ ತಿಳಿ ಹೇಳಿ ಅರಿವನ್ನು ಮೂಡಿಸುತ್ತಾಳೆ ಕವಯಿತ್ರಿ.

ಕನ್ನಡದ ಇನಿ, ಬನಿ, ದನಿಗಳನ್ನು ಬಹಳ ಸರಳವಾಗಿ ಚಿಕ್ಕ ಚೊಕ್ಕ ದೈನಂದಿನ ರೂಪಕಗಳೊಂದಿಗೆ ಭೀಮವ್ವ ಯಾವ ಕವಿಗೂ ಸಾಟಿ ಇಲ್ಲದಂತೆ ಸುಲಭ ಸಾಂಗತ್ಯದಲ್ಲಿ ಚಿತ್ರಿಸಿ ಹರಪನಹಳ್ಳಿ ಜಾನಪ





ದೀಯ, ಪ್ರಾದೇಶಿಕ ಭಾಷೆಯ ಸೊಗಡನ್ನು ಕನ್ನಡ ಸರಸ್ವತಿಯ ಮಡಿಲಿಗೆ ಸೇರಿಸಿ ಕನ್ನಡ ಜಾನಪದ ಲೋಕಕ್ಕೆ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನು ನೀಡಿದ್ದಾಳೆ. ಭಾರತೀಯರಲ್ಲಿ ವ್ರತಾಚರಣೆಗಳು ಕೇವಲ ರೂಢಿಗತವಲ್ಲ ಅವುಗಳ ಸಾಹಿತ್ಯ, ಸಂಗೀತ, ಆರೋಗ್ಯ, ಸಾಮಾಜಿಕ, ಸಾಮರಸ್ಯ, ಇತ್ಯಾದಿಗಳ ಅಂತರ್ ಶಾಸ್ತ್ರೀಯ ಮೌಲ್ಯಗಳ ಉನ್ನತಿಗೆ ಕಾರಣವಾಗುತ್ತದೆ. ಈ ಮೂಲಕ ದೇಹ ಹಾಗೂ ಮನಗಳ ಸಂಸ್ಕಾರಗಳು, ಹೇಗೆ ಹೃದಯ ಸಂಸ್ಕಾರಗಳಿಗೆ ನೆರವಾಗುತ್ತವೆ? ಅನೇಕ ಕ್ಷಣ ಕ್ಷಣಕ್ಕೂ ನಾವೇ ಸೃಷ್ಟಿಸಿಕೊಂಡ ತಲ್ಲಣಗಳ ನಡುವೆ ಬದುಕುತ್ತಿರುವ ಇಂದಿನ ನಮಗೆ, ದಾರಿ ದೀಪಗಳಾಗಿ ಮುನ್ನಡೆಯಲು ಸಹಾಯಕವಾಗುತ್ತದೆ ಇಂತಹ ಹಾಡುಗಬ್ಬಗಳು ಎನ್ನುವುದನ್ನು ಇದರಿಂದ ತಿಳಿಯಬಹುದಾಗಿದೆ.

**ವೈದ್ಯಕೀಯ ನೆಲೆ**

**ಮಜ್ಜಿಗೆ :** ವೈದ್ಯಗ್ರಂಥ **"ಭಾವ ಪ್ರಕಾಶ"**ದಲ್ಲಿ 10 ವಿಧವಾಗಿ ಮಜ್ಜಿಗೆ ತಯಾರಿಸುವ ವಿಧಾನವನ್ನು ವಿವರಿಸಲಾಗಿದೆ.

1. **ಉದಶ್ವಿತ್ :** ಅರ್ಧ ನೀರು ಹಾಕಿ ಕಡೆದ ಮಜ್ಜಿಗೆ.
2. **ಮಥಿತ :** ನೀರಿಲ್ಲದೆ ಕಡೆದ ಮಜ್ಜಿಗೆ
3. **ತಕ್ರ:** ಕಾಲುಪಾಲು ನೀರು ಹಾಕಿ ಕಡೆದ ಮಜ್ಜಿಗೆ, ಇದರಲ್ಲಿ ಇನ್ನೊಂದು ರೀತಿಯಲ್ಲಿಯೂ ಬಳಕೆಯಲ್ಲಿತ್ತು.
4. **ದಂಡಾಹತ :** ಒಂದಕ್ಕೆ ಎರಡೂವರೆ ನೀರು ಹಾಕಿ ಕಡೆದದ್ದು
5. **ಗೋಳಕ :** ಸಮ ಪ್ರಮಾಣದಲ್ಲಿ ನೀರು ಹಾಕಿ ಕಡೆದದ್ದು
6. **ಕಾಲಶೇಯ :** ಮೂರು ಪಾಲು ನೀರು ಹಾಕಿ ಕಡೆದದ್ದು.
7. **ಬಾಡಬ:** ಒಂದಕ್ಕೆ ಎರಡು ಪಾಲು ನೀರು ಹಾಕಿ ಕಡೆದದ್ದು
8. **ಕರಮರ್ದಿತ :** ನೀರು ಹಾಕದೆ ಕೈಯಲ್ಲೇ ಮುಟುಗಿ ಮಾಡಿ ಕಡೆದದ್ದು
9. **ಮಿಳಿತ :** ಎರಡೂ ಕಾಲ. ಅರೆ ಕಾಲು ನೀರು ಹಾಕಿ ಕಡೆದದ್ದು,
10. **ಅತಿಮಿತ:** ಮೂರು ಪಾಲಿಗಿಂತ ಹೆಚ್ಚು ನೀರು ಹಾಕಿ ಕಡೆದದ್ದು.

ಮಂಗರಸನ ಸೂಪಶಾಸ್ತ್ರದಲ್ಲಿ ಮಜ್ಜಿಗೆಯನ್ನು ಹೇಗೆ ಔಷಧಿಯಾಗಿ ಬಳಸಬೇಕು ಎಂಬುದನ್ನು ಹೇಳಿದ್ದಾನೆ.

**1. ಗೋಳಕ:** ಕೆನೆಯ ತೆಗೆಯದೆ ಕಡೆದ ಮಜ್ಜಿಗೆ. ಇದು ವಾತ ಮತ್ತು ಪಿತ್ತಗಳನ್ನು ಕಡಿಮೆ ಮಾಡುತ್ತದೆ.

**2.ಮಥಿತ:** ನೀರನ್ನು ಹಾಕದೆ ಕೆನೆಯನ್ನು ತೆಗೆದು ಕಡೆಯುವುದು ಇದು ಪಿತ್ತ ಮತ್ತು ಶ್ಲೇಷ್ಮವನ್ನು ಕೆಡಿಸುವುದು.

**3. ಸಿಂಧು :** 3 ಭಾಗ ಮೊಸರು,1 ಭಾಗ ನೀರು ಹಾಕಿ ಕಡೆದು ಬೆಣ್ಣೆಯ ಭಾಗವನ್ನು ಪೂರ್ತಿಯಾಗಿ ತೆಗೆದು ಹಾಕಿರುವಂಥದ್ದು. ಇದರಿಂದ ಪ್ರಮೇಹ, ಮೂಲವ್ಯಾಧಿ ಗುಣವಾಗುತ್ತದೆ.

**4.ತಕ್ರ :** ಅರ್ಧ ನೀರು ಅರ್ಧ ಮೊಸರನ್ನು ಸೇರಿಸಿ ಕಡೆದು ಬೆಣ್ಣೆಯನ್ನು ಬೇರೆಯಾಗಿ ತೆಗೆದು ಉಪಯೋಗಿಸುವಂತಹುದು.ಇದು ಆಹಾರವನ್ನು ಸುಲಭವಾಗಿ ಪಚನ ಮಾಡಲು ಜಠರಕ್ಕೆ ಸಹಾಯ ಮಾಡುತ್ತದೆ. ಒಳ್ಳೆಯ ಆಹಾರವೇ ಒಳ್ಳೆ ಸಂಸ್ಕೃತಿಗೆ ಆಧಾರ.

ಭೀಮವ್ವನು ಹೇಳಿರುವ ಅಡುಗೆಗಳಲ್ಲಿ ಇಂದಿನ ವೈದ್ಯಕೀಯ ಮಾಹಿತಿ ಹೀಗಿದೆ.

**ಕಾರ್ಬೋಹೈಡ್ರೇಟ್ಸ್ ಅಥವಾ ಶರ್ಕರಪಿಷ್ಟ ಅಂಶಗಳು :**

ಅಕ್ಕಿ, ಗೋಧಿ, ಜೋಳ, ಸಕ್ಕರೆ, ಬೆಲ್ಲ, ಆಲೂಗಡ್ಡೆಯ ಉಪ್ಪೇರಿ, ಗೆಣಸು, ಬಾಳೆಹಣ್ಣುಗಳು,ವೈದ್ಯ ವಿಜ್ಞಾನದ ಪ್ರಕಾರ ಪ್ರತಿದಿನ ಕನಿಷ್ಠ ನೂರು ಗ್ರಾಂಗಳನ್ನಾದರೂ ಒಳಗೊಂಡ ಶರ್ಕರಪಿಷ್ಟ ಅಂಶವಿರುವ ಆಹಾರವನ್ನು ಸೇವಿಸಬೇಕು. ಇದು ಶರೀರಕ್ಕೆ ಶಕ್ತಿ

ಯನ್ನು ನೀಡುತ್ತದೆ. ಇದು ಕಡಿಮೆಯ ಪೂರೈಕೆ ಆದಾಗ ಅಪೌಷ್ಟಿಕತೆ ಉಂಟಾಗಿ ಬಹಳ ಬೇಗ ಆಯಾಸವಾಗುತ್ತದೆ. ದೇಹದ ಬೆಳವಣಿಗೆಗೆ ಧಕ್ಕೆ ಯಾಗುತ್ತದೆ.

**ಪ್ರೋಟಿನ್ಸ್ ಅಥವಾ ಸಸಾರಜನಕ:**

ಶರೀರ ನಿರ್ಮಾಣದ ಆಹಾರ ಇದಾಗಿದ್ದು ಜೀವ ಕೋಶಗಳ ರಿಪೇರಿಗೆ ಮತ್ತು ಹೊಸ ಜೀವಕೋಶಗಳ ರಚನೆಗೆ ಅತ್ಯಗತ್ಯವಾದ ಅಂಶವಿದು. ಗರ್ಭಿಣಿ ಯರಿಗೆ, ಹಾಲುಣಿಸುವ ತಾಯಂದಿರಿಗೆ ಮತ್ತು ಮಕ್ಕ ಳಿಗೆ ಹೆಚ್ಚಿನ ಪ್ರಮಾಣದಲ್ಲಿ ಇದರ ಅವಶ್ಯಕತೆ ಇರು ತ್ತದೆ. ಭಾರತೀಯ ವೈದ್ಯಕೀಯ ಪರಿಷತ್ತಿನವರು ಒಬ್ಬ ವ್ಯಕ್ತಿಗೆ ಒಂದು ದಿನಕ್ಕೆ ಅವನ ಅವಳ ಶರೀರದ ಪ್ರತಿ ಒಂದು ಕೆಜಿ ತೂಕದ ಒಂದು ಗ್ರಾಂ ಪ್ರೋಟೀನ್ ಇರಬೇಕೆಂದು ನಿಗದಿ ಪಡಿಸಿರುತ್ತಾರೆ. ಒಂದು ಗ್ರಾಂ ಪ್ರೋಟೀನ್ ಸುಮಾರು ನಾಲ್ಕು ಕಿಲೋ ಕ್ಯಾಲರಿ ಗಳಷ್ಟು ಶರೀರಕ್ಕೆ ಶಕ್ತಿಯನ್ನು ನೀಡುತ್ತದೆ. ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವ ಶಕ್ತಿ ಸಸಾರ ಜನಕ್ಕೆ ಇರುತ್ತದೆ. ಸುಟ್ಟಗಾಯಗಳಿಂದ ತೊಂದರೆ ಪಡುತ್ತಿರುವವರಿಗೆ, ಕ್ಷಯರೋಗದವರಿಗೆ ಮತ್ತು ರೋಮ್ಯಾಟಿಕ್ ಜ್ವರ (ಮೂಳೆಸವೆತದ ತೊಂದರೆ) ಇರುವವರಿಗೆ ಹೆಚ್ಚು ಪ್ರೋಟಿನ್ ಅತ್ಯವಶ್ಯ.

**ಪ್ರೋಟಿನ್ ಇರುವ ಪದಾರ್ಥಗಳು :**

ಕಾಳುಗಳು, ಎಣ್ಣೆ ಬೀಜಗಳು, ಹಾಲು ಇತ್ಯಾದಿ. ಹಾಲಿ ನಲ್ಲಿ ಪ್ರತಿ ಗ್ರಾಂಗೆ 3.5 ರಿಂದ 4 ಗ್ರಾಂ ಕಾಳು ಗಳಲ್ಲಿ, ಪ್ರತಿ 10 ಗ್ರಾಂಗೆ 6 ಗ್ರಾಂ ಗೆಡ್ಡೆಗಳಲ್ಲಿ ಒಂದ ರಿಂದ 1.5 ಗ್ರಾಂ ವಿಟಮಿನ್ ಬಿ: ಗೋಧಿ, ಕಡ್ಲೆ ಕಾಯಿಬೀಜ, ಬೇಳೆ ಕಾಳುಗಳಲ್ಲಿ ಇದು ಹೆಚ್ಚಾಗಿ ರುತ್ತದೆ.

**ಉಪಯೋಗ:**

ಮೈಚರ್ಮ, ನರವ್ಯೂಹಗಳನ್ನು ಅಭಿವೃದ್ಧಿ ಪಡಿ ಸುತ್ತದೆ. ರಕ್ತಕಣಗಳು ರೂಪುಗೊಳ್ಳಲು ಆಹಾರ ಹೀರಿ ಕೊಳ್ಳಲು ಸಹಾಯವಾಗುತ್ತದೆ.

ಹೀಗೆ ನಮ್ಮ ಶರೀರಕ್ಕೆ ಪ್ರಮುಖವಾಗಿ ವೈದ್ಯರು ಗುರುತಿ ಸಿರುವ ಘಟಕಗಳಲ್ಲಿ ಮೂರನ್ನು ಮಾತ್ರ ಮೇಲೆ ಸಂಕ್ಷಿಪ್ತವಾಗಿ ವಿವರಿಸಿದೆ. ಇಂದಿನ ಪ್ಯಾಕ್ಡ್ ಮತ್ತು ಜಾಹೀರಾತಿನ ಭರಾಟೆಯಲ್ಲಿ ಮುಳುಗಿರುವ ತಿನಿಸುಗಳಿಗಿಂತ ಇಲ್ಲಿ ಹೇಳಿರುವ ಸಿಹಿ ಪದಾರ್ಥಗಳು, ಪಾಯಸ, ಭಾತುಗಳು ಕಲಸುಮೇಲೋಗರಗಳು ಮೇಲೆ ಹೇಳಿರುವಂತೆ ಪೌಷ್ಟಿಕ ಅಂಶಗಳ ಹೊಸ ಪರಿಕಲ್ಪನೆಯೊಂದಿಗೆ ಆಹಾರವನ್ನು ಸೇವಿಸಿದರೆ ನಮ್ಮ ಆರೋಗ್ಯವನ್ನು ಹೆಚ್ಚಿನ ಖರ್ಚು ಇಲ್ಲದೇ ಆರೋಗ್ಯವನ್ನು ಕಾಪಾಡಿಕೊಳ್ಳಲು ಬರುತ್ತದೆ.

ಕರ್ನಾಟಕದ ನಡುಮನೆ ಎನಿಸಿರುವ ಹರಪನ ಹಳ್ಳಿಯ ತೊಟ್ಟಿಯ ಮನೆಯ ಯಾವುದೋ ಒಂದು ಮೂಲೆಯಲ್ಲಿ ಜೀವನ ನಡೆಸುತ್ತಿದ್ದ ಭೀಮವ್ವ ರಚಿಸಿರುವ ಹಾಡುಗಬ್ಬಗಳಲ್ಲಿ ಪಾಕಶಾಸ್ತ್ರ ವೈದ್ಯಕೀಯ ಶಾಸ್ತ್ರ, ಛಂದಸ್ಸು ಪ್ರಾದೇಶಿಕ ಭಾಷೆ, ಮಾನವೀಯ ರೀತಿ ಯಲ್ಲಿರಬೇಕಾದ ಅಕ್ಕ ತಂಗಿಯರ ಅನುಬಂಧ, ಆಕೆಯ ಹೆಸರನ್ನು ತಿರುಪತಿ, ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಗಳಲ್ಲಿ ಚಿರಸ್ಥಾಯಿ ಯನ್ನಾಗಿಸಿವೆ.

**ಶ್ಲೋಕ:**

ಪ್ರದೀಪ ಜ್ವಾಲಾಭಿಃ ದಿವಸಕರ ನೀರಾಜನ ವಿಧಿಃ।
ಸುದಾಸೂತೇಃ ಚಂದ್ರೋಪಲ ಜಲಲವೈ ರರ್ಘ್ಯ ರಚನಾ॥
ಸ್ವಕೀಯೈರಂಭೋಭಿಃ ಸಲಿಲನಿಧಿ ಸೌಹಿತ್ಯ ಕರಣಂ।
ತ್ವದೀಯಾಭಿಃ ವಾಗ್ಭಿಃ ತವ ಜನನಿ! ವಾಚಾಂಸ್ತುತಿರಿಯಂ॥

**ಅನ್ವಯ:**

ಹೇ ಜನನಿ! ಸ್ವಕೀಯಾಭಿಃ ಪ್ರದೀಪಜ್ವಾಲಾಭಿಃ ದಿವಸಕರ ನೀರಾಜನವಿಧಿಃ ಯಥಾ ಸ್ವಕೀಯೈಃ ಚಂದ್ರೋಪಲಜಲಲವೈಃ ಸುಧಾ ಸೂತೇಃ ಅರ್ಘರಚನಾ ಯಥಾ ಸ್ವಕೀಯೈಃ ಅಂಭೋಭಿಃ ಸಲಿಲ ನಿಧಿಸೌಹಿತ್ಯ ಕರಣಂ ಯಥಾ ತಥಾ ತ್ವದೀಯಾನಾಂ ವಾಚಾಂ ತವ ಇಯಂ ಸ್ತುತಿಃ

(ಸೌಂದರ್ಯಲಹರೀ ಸ್ತೋತ್ರ ಶತಕಂ)

# ಪಂಚಕನ್ಯಾಂ ಸ್ಮರೇನ್ ನಿತ್ಯಂ

- ಡಾ. ಸಿ. ಎಸ್. ಊರ್ಮಿಳಾ

**ಭಾ**ರತ ದೇಶವು ಪ್ರಾಚೀನ ಸಂಸ್ಕೃತಿಯ ನೆಲೆ ವೀಡು, ಕರ್ಮಭೂಮಿ ಆಧ್ಯಾತ್ಮ ಪ್ರಪಂಚಕ್ಕೆ ನಮ್ಮೆಲ್ಲರನ್ನು ಕರೆದೊಯ್ಯುವ ಪುಣ್ಯಭೂಮಿ, ರಾಮ-ಕೃಷ್ಣರೆಂಬ ಹೆಸರಿನಿಂದ ದೇವನು ಮನುಷ್ಯನ ಅವತಾರವನ್ನು ಎತ್ತಿ ನಮ್ಮಂತೆಯೇ ಕಷ್ಟ ಸುಖಗಳನ್ನು ಅನುಭವಿಸಿ ಮೋಕ್ಷ ಸಾಮ್ರಾಜ್ಯಕ್ಕೆ ತೆರಳಿದವರು. ವೇದ ಉಪನಿಷತ್ತುಗಳ ಸಾರವನ್ನೆಲ್ಲಾ ತಿಳಿಸಿ ನಮ್ಮೆಲ್ಲರಿಗೂ ಮಾರ್ಗದರ್ಶಿಗಳಾಗಿ ಇಂದಿಗೂ ಇದ್ದು ನಮ್ಮೆಲ್ಲರ ಮನಃಪಟಲದಲ್ಲಿ ಶಾಶ್ವತವಾಗಿ ನೆಲಸಿರುವವರು ಇರಲಿ ಈಗ ನಾವು ಪಂಚಕನ್ಯೆಯರ ಬಗ್ಗೆ ತಿಳಿಯೋಣ.

ವೇದಗಳ ಕಾಲದಿಂದಲೂ ಸ್ತ್ರೀಯರಿಗೆ ಅತ್ಯಂತ ಉತ್ಕೃಷ್ಟ ಸ್ಥಾನವಿದ್ದಿತು ಎಂಬುದನ್ನು ಅಪಾಲಾ, ಗಾರ್ಗೀ ಮುಂತಾದವರಿಂದ ತಿಳಿಯುತ್ತೇವೆ. **"ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ"** ಎಂಬ ಉಕ್ತಿಯು ನಮ್ಮಲ್ಲಿ ಜನಜನಿತವಾಗಿದೆ.

ಇಂತಹ ಸ್ತ್ರೀಯರಲ್ಲಿ ಐದು ಮಂದಿ ನಾರೀಮಣಿಗಳು ಅತ್ಯಂತ ಪ್ರಸಿದ್ಧರಾಗಿದ್ದಾರೆ. ಹಾಗಾದರೆ ಆ ಐವರು ಕನ್ಯಾಮಣಿಗಳು ಯಾರು?

ಅಹಲ್ಯಾ, **"ದ್ರೌಪದಿ, ಸೀತಾ, ತಾರಾ, ಮಂಡೋದರೀ ತಥಾ ಪಂಚಕನ್ಯಾಂ ಸ್ಮರೇನ್ ನಿತ್ಯಂ"** ಮಹಾಪಾತಕ ನಾಶನಂ ಎಂಬ ಪ್ರಸಿದ್ಧವಾದ ಶ್ಲೋಕವನ್ನು ಪ್ರತಿ ದಿನವೂ ಹೇಳುವುದು ಪ್ರತಿಯೊಬ್ಬ ನಾರೀಮಣಿಯ ಆದ್ಯ ಕರ್ತವ್ಯವಾಗಿದೆ. ಈಗ ಈ ಪಂಚಕನ್ಯೆಯರ ಬಗ್ಗೆ ಸ್ವಲ್ಪ ತಿಳಿಯೋಣ.

**ಅಹಲ್ಯೆ:**

ಅಹಲ್ಯೆಯ ಪಾತ್ರವು ಶ್ರೀರಾಮಾಯಣದಲ್ಲಿ ಬರುತ್ತದೆ. ಅಹಲ್ಯೋ ಪಾಖ್ಯಾನವು ವೇದದಲ್ಲಿ ಉದಾಹರಿಸಲ್ಪಟ್ಟಿದೆ.

ಗೌರಾವಸ್ಕನ್ದಿನ್ನಹಲ್ಯಾಯೈಜಾರ
ಕೌಶಿಕಬ್ರಾಹ್ಮಣ ಗೌತಮ ಬ್ರವಾಣ ॥
(ತೈತ್ತರೀಯಾರಣ್ಯಕ - 1-12)

ಅಹಲ್ಯೆ ಗೌತಮ ಮಹರ್ಷಿಗಳ ಪತ್ನಿ, ಮಹಾಪತಿವ್ರತೆ. ಆಕೆ ಸುರಸುಂದರಿಯಾಗಿದ್ದಳು. ಅವಳ ರೂಪ ಲಾವಣ್ಯಗಳು ಜಗತ್ತಿನಲ್ಲೇ ಪ್ರಸಿದ್ಧವಾಗಿದ್ದವು. ಅದನ್ನು ತಿಳಿದ ಇಂದ್ರ ಅವಳನ್ನು ಪಡೆಯುವ ಆಸೆಯಿಂದ ಒಮ್ಮೆ ಗೌತಮ ಮಹರ್ಷಿ ಇಲ್ಲದ ವೇಳೆ ಅವರ ವೇಷವನ್ನು ಧರಿಸಿಕೊಂಡು ಅವರ ಆಶ್ರಮಕ್ಕೆ ಬರುತ್ತಾನೆ ಹಾಗೂ ತನ್ನ ಅಭಿಲಾಷೆಯನ್ನು ವ್ಯಕ್ತಪಡಿಸುತ್ತಾನೆ. ದೇವೇಂದ್ರನಾದರೋ ಮಹಾತೇಜಸ್ವಿ, ಆದರೆ ವಿಷಯ ಲಂಪಟ ಭೂಲೋಕದಲ್ಲಿ ಯಾರಾದರೂ ಯಜ್ಞ ಮಾಡುತ್ತಾರೆ. ತಪಸ್ಸು ಮಾಡುತ್ತಾರೆ ಎಂದರೆ ಸಾಕು. ಅವರು ಯಾವ ವರವನ್ನು ಸಂಪಾದಿಸಿ ತನಗೆ ಏನು ತಂದಾರೋ ಎಂದೂ ತನ್ನ ಇಂದ್ರ ಪದವಿ ಎಲ್ಲಿ ಕಳೆದುಕೊಳ್ಳುತ್ತಾನೋ ಎಂದು ಇಂದ್ರನಿಗೆ ಭಯ. ಕೂಡಲೇ ವಿಘ್ನ ತರುವ ಪ್ರವೃತ್ತಿ ಇಂದ್ರನದು. ಹೀಗಾಗಿಯೇ ವಿಶ್ವಾಮಿತ್ರನ ತಪಸ್ಸನ್ನು ಕೆಡಿಸಲು ರಂಭೆಯನ್ನು ಕಳುಹಿಸಿದ್ದ. ಮೇನಕೆಯನ್ನು ಕಳುಹಿಸಿದ. ಸಗರ ಚಕ್ರವರ್ತಿಯು ಯಜ್ಞವನ್ನು ಸಂಕಲ್ಪಿಸಿ ಯಜ್ಞಾಶ್ವವನ್ನು ದಿಗ್ವಿಜಯಕ್ಕೆ ಕಳುಹಿಸಿ



ದಾಗ, ಇಂದ್ರನು ಆ ಅಶ್ವವನ್ನೇ ಕದ್ದು ಪಾತಾಳದಲ್ಲಿ ಬಚ್ಚಿಟ್ಟಿದ್ದ. ಇವನೇ ಸಕಲ ಪುತ್ರರ ವಿನಾಶಕ್ಕೆ ಕಾರಣನಾದ ಇಂತಹ ವಿಚಿತ್ರ ಸ್ವಭಾವ ದೇವತೆಗಳ ಅಧಿಪತಿ ಇಂದ್ರನದು. ಈ ಇಂದ್ರ-ಅಹಲ್ಯೆಯನ್ನು ಬಿಡಲಿಲ್ಲ. ಕಾಮಾಸಕ್ತನಾದ ಇಂದ್ರನು ಅಹಲ್ಯೆಯ ಬಳಿ ಬಂದು ಅವಳನ್ನೇ ಬಯಸಿದ. ಅಹಲ್ಯೆಯೂ ಸಹ ಇಂದ್ರನಿಗೆ ಮನ ಸೋತು ಒಂದು ಕ್ಷಣ ಕಾಮಪಾಶಕ್ಕೆ ಬಲಿಯಾಗುತ್ತಾಳೆ. ತನ್ನ ಪಾವಿತ್ರ್ಯವನ್ನು ಕಳೆದುಕೊಳ್ಳುತ್ತಾಳೆ. ಅಷ್ಟರಲ್ಲಿ ಆಶ್ರಮಕ್ಕೆ ಹಿಂತಿರುಗಿದ ಗೌತಮ ಮಹರ್ಷಿಯು ಇವರಿಬ್ಬರನ್ನೂ ಶಪಿಸುತ್ತಾರೆ. ಅಹಲ್ಯೆಗೆ ನೀನು ನೀರು, ಆಹಾರ, ನಿದ್ರೆಗಳಿಲ್ಲದೆ ಯಾರ ಕಣ್ಣಿಗೂ ಕಾಣದಂತೆ ಈ ಆಶ್ರಮದಲ್ಲಿಯೇ ಸಾವಿರಾರು ವರ್ಷ ಇಲ್ಲಿಯೇ ಬಿದ್ದಿರು ಎಂದು ಶಪಿಸುತ್ತಾರೆ. ಅಹಲ್ಯೆಯು ತನ್ನ ಕೃತ್ಯಕ್ಕೆ ಪಶ್ಚಾತ್ತಾಪ ಪಟ್ಟು ಗೌತಮರಲ್ಲಿ ಕ್ಷಮೆ ಕೇಳಿದಾಗ ಗೌತಮರು ಮುಂದೆ ಒಂದು ದಿನ ಆಶ್ರಮಕ್ಕೆ ಆಗಮಿಸುವ ಶ್ರೀರಾಮಚಂದ್ರನ ಅನುಗ್ರಹದಿಂದ ನಿನ್ನ ಶಾಪ ವಿಮೋಚನೆಯಾಗುತ್ತದೆ ಎಂದು ಹೇಳಿ ಹಿಮಾಲಯದತ್ತ ತಪಸ್ಸಿಗೆ ಹೊರಡುತ್ತಾರೆ. ವಿಪರ್ಯಾಸವೆಂದರೆ ಮಹಾಪತಿವ್ರತೆಯಾದ ಅಹಲ್ಯೆಗೆ ಇಂದ್ರನು ಮುನಿಯ ವೇಷದಲ್ಲಿ ಬಂದಿದ್ದಾನೆಂದು ತಿಳಿದರೂ ದೇವೇಂದ್ರನೊಡನೆ ಸಮಾಗಮವಾಗಲು ಇಚ್ಛಿಸಿದಳಲ್ಲಾ !! ವಿಧಿಯು ಯಾರನ್ನು ಬಿಡದು. ಶ್ರೀರಾಮಚಂದ್ರನು ಈ ತಪೋವನಕ್ಕೆ ಬಂದಾಗ ಅಹಲ್ಯೆಯನ್ನು ಹೀಗೆ ಕಂಡನು.

ಧೂಮೇನಾಪಿ ಪರೀತಾಂಗೀಂ ದೀಪ್ತಾ ಮಗ್ನಿಶಿಖಾಮಿವ
ಮಧ್ಯೇಂಽಭಸೊ ದುರಾಧರ್ಷಾಂ ದೀಪ್ತಾಂಸೂರ್ಯಪ್ರಭಾಮಿವ ॥


(ರಾಮಾಯಣ - ಬಾಲಕಾಂಡ 49ಸ. 14 ನೇ ಶ್ಲೋಕ) ಮಂಜು ಮೋಡಗಳಿಂದ ಮರೆಯಾದ ಪೂರ್ಣ ಚಂದ್ರಪ್ರಭೆಯಂತೆ ಹೊಗೆಮುಚ್ಚಿದ ಅಗ್ನಿಜ್ವಾಲೆಯಂತೆ ಇದ್ದ ಅಹಲ್ಯೆಯನ್ನು ಶ್ರೀರಾಮನು ಕಂಡನಂತೆ, ಶ್ರೀರಾಮನ ದರ್ಶನದಿಂದ ಅಹಲ್ಯೆಯು ಶಾಪವಿಮೋಚಿತಳಾದಳು. ಇದನ್ನರಿತು ಗೌತಮ ಮಹರ್ಷಿಗಳು ಅಲ್ಲಿಗೆ ಬಂದು ತಪೋಬಲದಿಂದ ಪರಿಶುದ್ಧಳಾದ ಅಹಲ್ಯೆಯನ್ನು ಸ್ವೀಕರಿಸಿದರು. ಅಹಲ್ಯೆಯು ಕ್ಷಣಿಕಕಾಮದಾಸೆಯನ್ನು ಪೂರೈಸಿಕೊಳ್ಳಲು ತಪ್ಪು ಮಾಡಿದ್ದು ನಿಜ, ಆದರೆ ಆ ತಪ್ಪನ್ನು ಒಪ್ಪಿಕೊಂಡು ತಾನು ಮಾಡಿದ ತಪ್ಪಿಗಾಗಿ ಕಠೋರವಾದ ಶಿಕ್ಷೆಯನ್ನು ಅನುಭವಿಸುತ್ತಾಳೆ. ಪ್ರಾಯಶ್ಚಿತ್ತವನ್ನು ಮಾಡಿಕೊಂಡಿದ್ದರಿಂದಲೇ ಆಕೆ ಪ್ರಾತಃ ಸ್ಮರಣೀಯಳಾದಳು.

## ದ್ರೌಪದಿ :

ಪಾಂಚಾಲ ದೇಶದ ರಾಜ ದ್ರುಪದನ ಮಗಳು ದ್ರೌಪದಿ ತ್ರಿಲೋಕ ಸುಂದರಿಯಾಗಿದ್ದಳು. ಆಕೆಯ ಸ್ವಯಂವರಕ್ಕಾಗಿ ಏರ್ಪಡಿಸಿದ್ದ ಸ್ಪರ್ಧೆಯಲ್ಲಿ ಅರ್ಜುನನು ಗೆದ್ದು ಆಕೆಯನ್ನು ವರಿಸಿದ್ದರೂ ಮಾತೆ ಕುಂತಿಯ ಆದೇಶದಂತೆ ಪಂಚಪಾಂಡವರ ಪತ್ನಿಯಾಗುತ್ತಾಳೆ. ಇದರಿಂದಾಗಿ ಅನೇಕ ಟೀಕೆಗಳನ್ನು ಕಷ್ಟಗಳನ್ನು ಅನುಭವಿಸಿದಳು. ತುಂಬಿದ ರಾಜಸಭೆಯಲ್ಲಿ ದ್ರೌಪದಿಯ ವಸ್ತ್ರಾಪಹರಣವಾಯಿತು. **"ಪತಿಗಳೈವರಿದ್ದರೇನು, ಸತಿಯ ಭಂಗಕ್ಕೊದಗಲಿಲ್ಲಾ ಗತಿ ನೀನೇ ಮುಕುಂದನೆಂದರೆ ಅತಿವೇಗದಿ ಒಂದೊದಗಿದೆ. ಕೃಷ್ಣಾ ನೀನೇ ಅನಾಥ ಬಂಧು ಕಾರುಣ್ಯ ಸಿಂಧೂ"** ಎಂದು ದಾಸರು ಕೀರ್ತನೆಗೈದುದನ್ನು ಇಲ್ಲಿ ಸ್ಮರಿಸೋಣ. ದ್ರೌಪದಿಯ ವಸ್ತ್ರಾಪಹರಣ ಕಾಲದಲ್ಲಿ ಶ್ರೀಕೃಷ್ಣ ಪರಮಾತ್ಮನನ್ನು ಮೊರೆ ಹೊಕ್ಕ ಪರಿಯನ್ನು ನಾವು ಸ್ಮರಿಸಲೇಬೇಕು.

**ಶಂಖ ಚಕ್ರ ಗಧಾಪಾಣೇ**
**ದ್ವಾರಕಾ ನಿಲಯಾಚ್ಯುತ**
**ಗೋವಿಂದ ಪುಂಡರೀಕಾಕ್ಷ**
**ರಕ್ಷ ಮಾಮ್ ಶರಣಾಗತಂ।**

ದ್ರೌಪದಿಯು ಪಂಚಪಾಂಡವರ ಜೊತೆ ವನವಾಸ, ಅಜ್ಞಾತ ವಾಸಗಳನ್ನು ಅನುಭವಿಸ




ಬೇಕಾಯಿತು. ಇಷ್ಟಾದರೂ ಆಕೆ ಪ್ರಾತಃಸ್ಮರಣೀಯಳಾದಳು. ಪಂಚಪಾಂಡವರಿಗೂ ಸಮಾನ ಸಹಧರ್ಮಿಣಿಯಾಗಿ ಬಾಳಿದಳು ಅತ್ಯಂತ ಸಹನ ಶೀಲೆಯೂ, ಬುದ್ಧಿವಂತಳೂ ಆದ ದ್ರೌಪದಿಯು ತನ್ನ ದಿಟ್ಟ ನಿಲುವಿನಿಂದ ಆದರ್ಶನಾರಿ ಎನಿಸಿದಳು.

**ಸೀತಾದೇವಿ :**

ಇವಳು ಜನಕ ಮಹಾರಾಜನ ಸಾಕುಮಗಳು ತ್ರಿಲೋಕ ಸುಂದರಿ, ಸೌಮ್ಯ ಸ್ವಭಾವದವಳೂ ಹೌದು. ಇವಳು ಶಿವ ಧನಸ್ಸನ್ನು ಮುರಿದ ರಾಮನನ್ನು ವರಿಸುತ್ತಾಳೆ. ಕೈಕೇಯಿಯ ಆಶಯದಂತೆ ವನವಾಸದತ್ತ ಹೊರಟ ಪತಿ ರಾಮಚಂದ್ರನನ್ನು ಅನುಸರಿಸುತ್ತಾಳೆ. ಶ್ರೀರಾಮನು ಸೀತೆಯನ್ನು ಕುರಿತು " ನಾನು ತಂದೆಯ ಪ್ರತಿಜ್ಞೆಯನ್ನು ಪಾಲಿಸುವುದಕ್ಕಾಗಿ ಅರಣ್ಯಕ್ಕೆ ಹೊರಡುವೆನು. ನೀನು ಎಲ್ಲರಲ್ಲಿಯೂ ವಿನಯದಿಂದ ಇದ್ದು ವ್ರತೋಪವಾಸಗಳನ್ನು ಆಚರಿಸುತ್ತ ನಿಯಮದಲ್ಲಿರು. ನಾನು ಹದಿನಾಲ್ಕು ವರ್ಷಗಳ ಕಾಲ ದಂಡಕಾರಣ್ಯದಲ್ಲಿರಬೇಕಾಗುತ್ತದೆ. ನೀನು ರಾಜನಾದ ಭರತನನ್ನು ಅನುಸರಿಸಿಕೊಂಡು ಧರ್ಮ ಮಾರ್ಗದಲ್ಲಿ ನಿರತಳಾಗಿರು. ನನ್ನ ತಾಯಂದಿರಾದ ಕೌಸಲ್ಯಾ, ಸುಮಿತ್ರ, ಕೈಕೇಯಿಯರ ಮನಸ್ಸಿಗೆ ನೋವಾಗದಂತೆ ನಡೆದುಕೊಳ್ಳುತ್ತಿರು" ಎಂದೆಲ್ಲಾ ಹೇಳಿದನು.

ಅದಕ್ಕೆ ಉತ್ತರವಾಗಿ ಸೀತೆಯು ಹೀಗೆ ಹೇಳುತ್ತಾಳೆ.



**ಆರ್ಯಪುತ್ರ ಪಿತಾ ಮಾತಾ ಭ್ರಾತಾ ಪುತ್ರ ಸ್ತಥಾ ಸ್ನುಷಾ।**
**ಸ್ವಾನಿ ಪುಣ್ಯಾನಿ ಭುಂಜಾನಾಃ ಸ್ವಂ ಸ್ವಂ ಭಾಗ್ಯಮುಪಾಸತೇ ॥**
**ಭರ್ತುರ್ಭಾಗ್ಯಂ ತು ಭಾರ್ಯೈಕಾ ಪ್ರಾಪ್ನೋತಿ ಪುರುಷರ್ಷಭ**
**ಅತಶ್ಚೈವಾಹಮಾದಿಷ್ಟಾ ವನೇ ವಸ್ತವ್ಯಮಿತ್ಯಪಿ।**

(ವಾಲ್ಮೀಕಿರಾಮಾಯಣ ಅಯೋಧ್ಯಾಕಾಂಡ 27 ನೇ ಸರ್ಗ 3.4 ನೇ ಶ್ಲೋಕ)

ಆರ್ಯಪುತ್ರ ಈ ಲೋಕದಲ್ಲಿ ತಂದೆತಾಯಿ, ಸೋದರ, ಮಗ, ಸೊಸೆ, ಇವರೆಲ್ಲರೂ ತಮ್ಮ ಪುಣ್ಯ ಪಾಪಗಳನ್ನು ತಾವು ಅನುಭವಿಸುತ್ತಾರೆ. ತಮ್ಮ ತಮ್ಮ ಭಾಗ್ಯವನ್ನು ತಾವು ಪಡೆಯುತ್ತಾರೆ. ಆದರೆ ಹೆಂಡತಿಯೊಬ್ಬಳೇ ತನ್ನ ಪತಿಯ ಕರ್ಮಾನುಸಾರವಾದ ಫಲವನ್ನು ಹಂಚಿಕೊಳ್ಳುತ್ತಾಳೆ. ಆದ್ದರಿಂದ ವನದಲ್ಲಿ ವಾಸಮಾಡಬೇಕೆಂದು ನನಗೂ ಆಜ್ಞೆಯಾದಂತೆಯೇ ಸರಿ. ಈ ಲೋಕದಲ್ಲಿ ಆಗಲಿ, ಪರಲೋಕದಲ್ಲಾಗಲಿ ಹೆಂಗಸರಿಗೆ ಗಂಡನೊಬ್ಬನೇ ಗತಿ ಎಂದು ಹೇಳುತ್ತಾಳೆ. ಅಷ್ಟೇ ಅಲ್ಲ ಸೀತೆಯು ತನ್ನ ಮಾತನ್ನು ಮುಂದುವರೆಸಿ


**ಫಲಮೂಲಾಶನಾ ನಿತ್ಯಂ ಭವಿಷ್ಯಾಮಿ ನ ಸಂಶಯಃ।**
**ನ ತೇ ದುಃಖಂ ಕರಿಷ್ಯಾಮಿ ನಿವಸಂತೀ ಸಹ ತ್ವಯಾ॥**
**ಇಚ್ಛಾಮಿ ಸರಿತಃ ಶೈಲಾನ್ಪಲ್ವಲಾನಿ ವನಾನಿ ಚ।**
**ದುಷ್ಟುಂ ಸರ್ವತ್ರ ನಿರ್ಭೀತಾ ತ್ವಯಾ ನಾಥೇನ ಧೀಮತಾ॥**

(ರಾಮಾಯಣ ಅಯೋಧ್ಯಾ 27 ನೇ ಅ. 15-16 ನೇ ಶ್ಲೋಕ.)

ಎಲೈ ರಾಮಚಂದ್ರ ! ನೀನು ತಿನ್ನುವ ಕಾಡುಹಣ್ಣು, ಗೆಡ್ಡೆಗೆಣಸುಗಳನ್ನು ತಿಂದು ಕೊಂಡಿರುತ್ತೇನೆ. ಯಾವ ತೊಂದರೆಯನ್ನು ನಾನು ಕೊಡುವುದಿಲ್ಲ. ನಿನ್ನ ಜೊತೆಯಲ್ಲಿ ನಾನು ಇದ್ದರೆ ಸಾಕು, ನಿನ್ನ ಮುಂದೆಯೇ ತಿರುಗಾಡಿಕೊಂಡಿರುತ್ತೇನೆ. ನಿನಗೆ ಆಹಾರವು ದೊರಕಿದಾಗಲೇ ನಾನು ಆಹಾರ ಸೇವಿಸುವೆ ಎಂದಳು. ಹೀಗೆ ಸೀತೆಯು ಪ್ರತಿಯೊಂದು ವಿಷಯದಲ್ಲೂ ಪತಿವ್ರತಾ ಧರ್ಮದ ಬಗ್ಗೆ ತಿಳಿಸಿರುವುದು ಅಭಿನಂದನೀಯ. ಇದನ್ನು ಎಲ್ಲಾ ಕಾಲಕ್ಕೂ ಎಲ್ಲ ಸತಿಯರೂ ಅನುಸರಿಸಬೇಕಾದುದು ಅತ್ಯವಶ್ಯ.

ಈ ಹಿಂದೆ ಜನಕ ಮಹಾರಾಜನು ಸ್ವಯಂವರದ ಸಂದರ್ಭದಲ್ಲಿ ಹೇಳುವಂತೆ **"ಇಯಂ ಸೀತಾ ಮಮ ಸುತಾ ಛಾಯೇ ವಾನುಗತಾ ಸದಾ ಸೀತೆಯು ಶ್ರೀರಾಮನ ನೆರಳಾಗಿಯೇ ಅನುವರ್ತಿಸಲು ಇಚ್ಛಿಸಿದಳು."** ಕಾಡಿಗೆ ಹೊರಟ ಸೀತೆಯ ಪತಿವ್ರತಾ ಧರ್ಮ ಪ್ರಶಂಸನಿಯವಾದುದೇ ಸರಿ

ಮುಂದೆ ದಂಡಕಾರಣ್ಯದಲ್ಲಿ ಮೈದುನ ಲಕ್ಷ್ಮಣ ಹಾಕಿದ್ದ ಲಕ್ಷ್ಮಣ ರೇಖೆಯನ್ನು ದಾಟಿದ ತಪ್ಪಿಗಾಗಿ ರಾವಣನಿಂದ ಅಪಹರಿಸಲ್ಪಡುತ್ತಾಳೆ.



ಪರದೇಶದಲ್ಲಿ ಪರಪುರುಷನ ಬಂಧನದಲ್ಲಿದ್ದರೂ ತನ್ನ ಪಾವಿತ್ರ್ಯವನ್ನು ಕಾಪಾಡಿಕೊಳ್ಳುತ್ತಾಳೆ. ಶ್ರೀರಾಮ, ರಾವಣನ ಮೇಲೆ ಯುದ್ಧ ಮಾಡಿ ಅವನನ್ನು ಕೊಂದು ಸೀತೆಯನ್ನು ತನ್ನ ಜೊತೆ ಅಯೋಧ್ಯೆಗೆ ಕರೆತರುತ್ತಾನೆ. ಸುಮಾರು ದಶವರ್ಷ ಸಹಸ್ರಾಣಿ, ದಶವರ್ಷಶತಾನಿ ಚ ಎಂದಂತೆ. ಸಹಸ್ರಾರು ವರ್ಷಗಳ ಕಾಲ ಧರ್ಮ ಮಾರ್ಗದಲ್ಲಿಯೇ ರಾಜ್ಯಭಾರ ಮಾಡುತ್ತಾನೆ.

ಒಮ್ಮೆ ಒಬ್ಬ ಅಗಸನ ಅಡ್ಡ ಮಾತಿಗೆ ಬಲಿಪಶುವಾಗಿ ತುಂಬು ಗರ್ಭಿಣಿಯಾಗಿದ್ದರೂ ಸೀತಾದೇವಿಯು ಮತ್ತೆ ಕಾಡಿಗೆ ಹೋಗಬೇಕಾಯಿತು. ವಾಲ್ಮೀಕಿ ಮಹರ್ಷಿಗಳ ಆಶ್ರಮದಲ್ಲಿದ್ದು ಲವಕುಶರಿಗೆ ಜನ್ಮ ನೀಡಿದಳು. ಇವರೇ ಮುಂದೆ ಶ್ರೀರಾಮನ ಆಸ್ಥಾನದಲ್ಲಿ-ರಾಮಾಯಣವನ್ನು ಅಂದರೆ ರಾಮ ನಡೆದು ಬಂದ ದಾರಿಯನ್ನು ಸ್ತುತಿಸುತ್ತಾರೆ. ಪತಿವ್ರತಾ ಧರ್ಮವನ್ನು ಜಗತ್ತಿಗೆ ಸಾರಿದ ಸೀತಾದೇವಿಯು ಪ್ರಾತಃಸ್ಮರಣೀಯಳೇ ಸರಿ.

**ತಾರಾ :**

ಇವಳು ವಾನರ ರಾಜ ವಾಲಿಯ ಪತ್ನಿ. ಇವಳು ಶಾಸ್ತ್ರಜ್ಞಳೂ, ನೀತಿಜ್ಞಳೂ ಆಗಿದ್ದಳು. ನೀತಿ-ನ್ಯಾಯಗಳನ್ನು ನಿಷ್ಪಕ್ಷಪಾತವಾಗಿ ದಿಟ್ಟತನದಿಂದ ಹೇಳುವ ಸ್ವಭಾವ ಅವಳದಾಗಿದ್ದಿತು. ಮಡದಿಯ ಮಾತುಗಳನ್ನು ಕೇಳದೆ ಹೋದ ವಾಲಿಯು ತಮ್ಮ ಸುಗ್ರೀವನಿಂದ ಪರಾಭವಗೊಂಡನು. ಶ್ರೀರಾಮನ ನೆರವಿನಿಂದಾಗಿ ವಾಲಿಯು ಹತನಾಗುತ್ತಾನೆ. ತನ್ನ ಪತಿ ಹತನಾದ ಬಳಿಕ ತಾರಾ ಬಹಳ ದುಃಖಿತಳಾಗಿ ತನ್ನ ಪತಿ ಈ ಹಿಂದೆ ಮಾಡಿದ ದುಷ್ಕೃತ್ಯಗಳ, ಪಾಪಗಳ ಫಲದಿಂದ ದುರ್ಮರಣಕ್ಕೆ ಒಳಗಾಗಬೇಕಾಯಿತು ಎಂದು ಕುಶಲಮತಿಯಾದ ತಾರೆಯು ಮರಣಶಯ್ಯೆಯಲ್ಲಿರುವ ತನ್ನ ಪತ್ನಿಯನ್ನು ಕುರಿತು ಹೀಗೆ ಹೇಳುತ್ತಾಳೆ.

ಸುಗ್ರೀವ ಸ್ಯತ್ವಯಾ ಭಾರ್ಯಾ ಹೃತಾ ಸ ಚ ವಿವಾಸಿತಃ
ಯತ್ತು ತಸ್ಯತ್ವಯಾ ವ್ಯುಷ್ಟಿಃ ಪ್ರಾಪ್ತೇಯಂ ಪ್ಲವಗಾಧಿಪ
ನಿಃ ಶ್ರೇಯಸಪರಾ ಮೋಹಾತ್ತ್ವಯಾ ಚಾಹಂ ವಿಗರ್ಹಿತಾ ।
ಯೈಷಾಬ್ರವಂ ಹಿತಂ ವಾಕ್ಯಂ ವಾನರೇಂದ್ರ ಹಿತೈಷಿಣೀ ॥

(ರಾಮಾಯಣ ಕಿ.ಕಾಂಡ ಸ.20. 11.12 ಶ್ಲೋಕ)

ನೀನು ಸುಗ್ರೀವನ ಮಡದಿ ರುಮೆಯನ್ನು ಅಪಹರಿಸಿ ಅವನನ್ನು ಹೊರಗಟ್ಟಿದೆ. ಈ ಕರ್ಮದ ಪರಿಪಾಕವು ಈ ರೀತಿಯಲ್ಲಿ ನಿನಗೆ ತಟ್ಟಿತು. ನಿನ್ನ ಶ್ರೇಯಸ್ಸನ್ನೇ ಬಯಸಿ ತಾನು ಎಷ್ಟೋ ಹಿತವಾಕ್ಯಗಳನ್ನು ಹೇಳಿದೆನು. ನೀನು ತಿಳಿಯದೆ ನನ್ನನ್ನು ಬೈದು ಕಳಿಸಿದೆ ಎಂದು ಹೇಳುತ್ತಾಳೆ.

ಇಲ್ಲಿ ಬಹುಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ವಾಲಿಯು ಮಾಡಿದ ಅನ್ಯಾಯಗಳನ್ನು ತಿಳಿಯಪಡಿಸಿದ ಧೀರೆ. ಅಂತೂ ಹೇಗೂ ಸುಗ್ರೀವ ತನ್ನ ಅಣ್ಣ ವಾಲಿಯನ್ನು ಪರಾಭವಗೊಳಿಸಿ ಕಿಷ್ಕಿಂದಾರಾಜ್ಯದ ರಾಜನಾಗುತ್ತಾನೆ. ಬುದ್ಧಿಮತಿ, ವ್ಯವಹಾರ ಚತುರೆ, ಕುಶಲಮತಿ, ರಾಜ ನೀತಿಜ್ಞೆಯಾಗಿದ್ದ ತಾರಾ ಮುಂದೆ ಸುಗ್ರೀವನ ಮಡದಿಯಾಗಿ ವಾನರ ಸಾಮ್ರಾಜ್ಯವನ್ನು ಆಳುತ್ತಾಳೆ.

ವೀರ ಚತುರ ನಾರಿಯರು ಸಾಮ್ರಾಜ್ಯಗಳನ್ನು ಸಮರ್ಥವಾಗಿ ನಡೆಸಬಲ್ಲರು ಎಂಬುದಕ್ಕೆ ಉದಾಹರಣೆಯಾಗಿದ್ದಾಳೆ. ತಾರಾ ಈ ಕಾರಣದಿಂದಲೇ ತಾರೆಯು ಪ್ರಾತಃಸ್ಮರಣೀಯ ಕನ್ಯೆಯರ ಪಟ್ಟಿಯಲ್ಲಿ ಇದ್ದಾಳೆ.

**ಮಂಡೋದರಿ :**

ಇವಳು ಲಂಕಾಧಿಪತಿ ರಾವಣನ ಪಟ್ಟ ಮಹಿಷಿ. ಮೊದಲಿನಿಂದಲೂ ರಾವಣನ ದುಷ್ಕೃತ್ಯಗಳನ್ನು ವಿರೋಧಿಸಿದ ದಿಟ್ಟ ಮಹಿಳೆ. ಸೀತೆಯನ್ನು ಅಪಹರಿಸಿ ತಂದಾಗ ಪತಿ ರಾವಣನ ಈ ನಿಂದನೀಯವಾದ ಲಜ್ಜಾಸ್ಪದವಾದ ಕೃತ್ಯವನ್ನು ಪ್ರತಿಭಟಿಸಿದ ಮಹಾಧೀರೆ ಮಂಡೋದರಿ. ಶ್ರೀರಾಮನ ಬಾಣ



ದಿಂದ ಹತಾಶನಾಗಿ ಮರಣ ಶಯ್ಯೆಯಲ್ಲಿ ಮಲಗಿದ್ದ ರಾವಣನನ್ನು ಕಂಡ ಮಂಡೋದರಿಯು ಹೀಗೆ ರೋಧಿಸಿದಳು.

ಪ್ರವಾದಃ ಸತ್ಯ ಏವಾಯಂ ತ್ವಾಂ
ಪ್ರತಿ ಪ್ರಾಯಶೋ ನಾಪ ।
ಪತಿವ್ರತಾನಾಂ ನಾ ಕಸ್ಮಾತ್
ಪತಂತ್ಯಶ್ರೂಣಿ ಭೂತಲೇ ॥
ಕಥಂ ಚ ನಾಮ ತೇ ರಾಜನ್
ಲೋಕಾನಾಕ್ರಮ್ಯ ತೇಜಸಾ।
ನಾರೀ ಚೌರ್ಯಮಿದಂ ಕ್ಷುದ್ರಂ ಕೃತಂ
ಶೌಂಡೀರ್ಯ ಮೌನಿನಾ॥
ಅಪನೀಯಾಶ್ರಮಾದ್ರಾಮಂ ಯನ್ಮೃಗ ಚ್ಛದ್ಮನಾ ತ್ವಯಾ ।
ಆನೀತಾ ರಾಮಪತ್ನೀ ಸಾ ತತ್ತೇ ಕಾತರ್ಯಲಕ್ಷಣಮ್ ।
ಕಾತರ್ಯಂ ಚ ನ ತೇಯುದ್ಧೇ ಕದಾಚಿತ್ ಸಂಸ್ಮರಾಮ್ಯಹಮ್ ।
ತತ್ತು ಭಾಗ್ಯ ವಿಪರ್ಯಾಸಾನ್ನೂನಂ ತೇ ಪಕ್ವಲಕ್ಷಣಮ್॥

(ರಾಮಾಯಣ ಯು.ಕಾಂಡ 114 ನೇ ಸರ್ಗ 67 ರಿಂದ 70 ನೇ ಶ್ಲೋಕದವರೆಗೆ)

ಮಹಾರಾಜ ರಾವಣನೇ **"ಪತಿವ್ರತೆಯರ ಕಣ್ಣೀರು ನಿಷ್ಫಲವಾಗಿ ನೆಲದಲ್ಲಿ ಸುರಿಯುವುದಿಲ್ಲ"** ಎಂಬ ಲೋಕದ ಹೇಳಿಕೆ ನಿನ್ನ ವಿಷಯದಲ್ಲಿ ಸತ್ಯವಾಯಿತು. ಮೂರು ಲೋಕಗಳನ್ನು ಜಯಿಸಿ ತೇಜೋಬಲದಿಂದ ರಾರಾಜಿಸುತ್ತಿದ್ದ ನೀನು ಒಬ್ಬ ಹೆಂಗಸನ್ನು ಕಳ್ಳತನದಿಂದ (ಮುನಿವೇಷಧರಿಸಿ)ತಂದೆಯೇಕೆ? ಶೂರಾ ಗ್ರೇಸರನು ನಾನು ಎಂದು ಹೆಮ್ಮೆ ಪಡುತ್ತಿದ್ದ ನೀನು ಈ ಕ್ಷುದ್ರ ಕಾರ್ಯವನ್ನು ಹೇಗೆ ತಾನೆ ಮಾಡಿದೆ? ಮಾಯಾಮೃಗದ ಕಪಟೋಪಾಯದಿಂದ ರಾಮನನ್ನು ಆಶ್ರಮದಿಂದ ಹೊರಗೆ ಹೋಗುವಂತೆ ಮಾಡಿ, ಅವನ ಮಡದಿ ಸೀತೆಯನ್ನು ಅಪಹರಿಸಿದೆಯಲ್ಲಾ, ಅದೇ ನಿನ್ನ ಹೇಡಿತನಕ್ಕೆ ಗುರುತು! ಯುದ್ಧದಲ್ಲಿ ನೀನು ಹೇಡಿತನವನ್ನು ತೋರಿಸಿದ್ದು ನನಗೆ ನೆನಪಿಲ್ಲ.

ದೌರ್ಭಾಗ್ಯದಿಂದಲೇ ಈಗ ಈ ಬುದ್ಧಿಯುಂಟಾಯಿತು. ಕರ್ಮವು ಅಂದರೆ ಪಾಪಕರ್ಮವು ಪಕ್ವವಾಯಿತು ಎಂಬುದರ ಚಿಹ್ನೆ ಇದು ಎಂದು ಮಂಡೋದರಿ ರೋಧಿಸುತ್ತಾಳೆ. ಅಷ್ಟೇ ಅಲ್ಲ ಶತ್ರುಪಕ್ಷದಲ್ಲಿರುವ ರಾಮನ ಗುಣಗಾನ ಮಾಡುತ್ತಾಳೆ. ಇದರಿಂದ ಮಂಡೋದರಿಯು ಅದೆಷ್ಟು ನಿಷ್ಪಕ್ಷ ಪಾತವಾದಿಯೆಂದೂ ಕಲಶಾಗ್ರಮ ಎಂದು ಸ್ಪಷ್ಟವಾಗುತ್ತದೆ. ರಾವಣನಂತಹ ಮಹಾಬಲಶಾಲಿ ಹಠವಾದಿ, ದುರಹಂಕಾರಿ, ದುಷ್ಟನಿಗೂ ಕಾಲಕಾಲಕ್ಕೆ ಬುದ್ಧಿ ಮಾತುಗಳನ್ನು ಹೇಳಿ ಮಾರ್ಗದರ್ಶನ ಮಾಡಲು ಪ್ರಯತ್ನಿಸಿದ ಮಂಡೋದರಿ ನಿಜವಾಗಿಯೂ ಪ್ರಾತಃಸ್ಮರಣೀಯಳೇ ಸರಿ.

ಈ ಪಂಚಕನ್ಯಾ ರತ್ನಗಳನ್ನು ಸ್ಮರಿಸಿದ ಮಾತ್ರಕ್ಕೆ ಮಹಾಪಾತಕನಾಶನವಾಗುತ್ತದೆ ಎಂಬ ನಂಬಿಕೆ ಅಂದಿನಿಂದ ಇಂದಿನವರೆಗೂ ಜನಮನದಲ್ಲಿ ಸ್ಥಿರವಾಗಿ ನಿಂತಿದೆ ಎಂಬುದರಲ್ಲಿ ತೃಣ ಮಾತ್ರವೂ ಸಂದೇಹವಿಲ್ಲ. ಇಂತಹ ಪಂಚಕನ್ಯೆಯರನ್ನು ನಾವು ಸ್ಮರಿಸಿ ಕೃತಾರ್ಥರಾಗೋಣ.

**ಸರ್ವಂ ಶ್ರೀ ಕೃಷ್ಣಾರ್ಪಣಮಸ್ತು**


## ಪ್ರಕಟನೆ

**ಚಂದಾದಾರರು ತಮ್ಮ ಬದಲಾದ ವಿಳಾಸವನ್ನು ಸಪ್ತಗಿರಿ ಕಾರ್ಯಾಲಯಕ್ಕೆ ಪತ್ರದ ಮುಖಾಂತರ ನಿಮ್ಮ ಬದಲಾದ ವಿಳಾಸವನ್ನು ಬರೆದು ಕಳುಹಿಸಿಕೊಡಬೇಕು. ಚಂದಾದಾರರಿಗೆ ನಿಗದಿತ ಸಮಯದೊಳಗೆ ಪುಸ್ತಕವನ್ನು ತಲುಪಿಸಲಾಗುತ್ತದೆ. ತಮ್ಮ ವಿಳಾಸವನ್ನು ಬದಲಿಸಲು ಈ ಕೆಳಗಿನ ಈ ಮೇಲ್ ಮುಂಖಾಂತರವು ತಿಳಿಸಬಹುದು. ನಮ್ಮ ಈ ಮೇಲ್ ಐಡಿ chiefeditortpt@gmail.com ಅನ್ನು ಸಂಪ್ರದಿಸಬಹುದು.**

**- ಪ್ರಧಾನ ಸಂಪಾದಕರು**

**ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ,**
**ತಿ.ತಿ.ದೇ.,ಪ್ರೆಸ್,**
**2 ನೇ ಅಂತಸ್ತು, ಕೆ.ಟಿ.ರಸ್ತೆ. ತಿರುಪತಿ - 517 507**

ಕರ್ನಾಟಕ ವೈಷ್ಣವ ದೇವಾಲಯಗಳು

59

# ಆಲಂಬಗಿರಿಯ ಶ್ರೀ ಕಲ್ಕಿ ಲಕ್ಷ್ಮೀ ವೆಂಕಟರಮಣ ದೇವಾಲಯ

ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲೂಕಿನಲ್ಲಿರುವ ಸುಪ್ರಸಿದ್ಧ ವೆಂಕಟೇಶ್ವರ ದೇವಾಲಯವನ್ನು ಹೊಂದಿರುವ ದಿವ್ಯಕ್ಷೇತ್ರ ಆಲಂಬಗಿರಿ. ನೆರೆಯ ಆಂಧ್ರಪ್ರದೇಶದ ತಿರುಪತಿಗೆ ಸಮೀಪವಿರುವ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಅನೇಕ ಶ್ರೀನಿವಾಸ ದೇವಾಲಯಗಳಿವೆ. ಮುಳುಬಾಗಿಲು,ಬಂಗಾರ ತಿರುಪತಿ,ಗಡಿದಂ,ದಾಲಿನಾಯಕನಪಾಳ್ಯ, ಆಲಂಬಗಿರಿ ಮುಂತಾದ ಪ್ರದೇಶಗಳಲ್ಲಿ ಸುಂದರವಾದವೆಂಕಟೇಶ್ವರ ದೇವಾಲಯಗಳು ಇರುವುದನ್ನು ಗಮನಿಸಬಹುದು.

ಆಲಂಬಗಿರಿಯ ವೆಂಕಟೇಶ್ವರ ದೇವಾಲಯವು ಒಂದು ಬೃಹತ್ ಆಲಯವಾಗಿದ್ದು ಗರ್ಭಗುಡಿ ಅಂತರಾಳ, ನವರಂಗ ದೊಡ್ಡರಂಗ ಮಂಟಪ, ವಸಂತಮಂಟಪ ಹಾಗೂ ದೊಡ್ಡ ಪ್ರವೇಶ ದ್ವಾರ ಮತ್ತು ಬೃಹತ್ ರಾಜಗೋಪುರಗಳನ್ನು ಒಳಗೊಂಡ ರಚನೆಯಾಗಿದೆ. ಗರ್ಭಗೃಹ ಹಾಗೂ ಅಲ್ಲಿರುವ ದೇವತಾಮೂರ್ತಿಗಳು ವಿಜಯನಗರ ಅರಸರ ಕಾಲಕ್ಕೂ ಪೂರ್ವದ ರಚನೆಯಾಗಿದ್ದಾರೆ, ದೇವಾಲಯವನ್ನು ರಂಗ ಮಂಟಪ, ವಸಂತಮಂಟಪ, ವಿಶಾಲವಾದ ಪ್ರಕಾರ, ಲಕ್ಷ್ಮಿಗಾಗಿ ಪ್ರತ್ಯೇಕವಾದ ಗುಡಿಗಳನ್ನು ರಚಿಸಿ ದೇವಾಲಯವನ್ನು ವಿಸ್ತರಿಸಿದ ಕೀರ್ತಿ ವಿಜಯನಗರದ ಅರಸರಿಗೆ ಸಲ್ಲುತ್ತದೆ.

ಈ ದೇವಾಲಯದ ಗರ್ಭಗುಡಿಯಲ್ಲಿರುವ ವೆಂಕಟೇಶ್ವರ ಸ್ವಾಮಿಯು ಸುಮಾರು ಐದು ಅಡಿ ಎತ್ತರವಿದ್ದು ಶ್ರೀದೇವಿ ಭೂದೇವಿ ಸಹಿತ ವಿರಾಜಮಾನಾಗಿರುವನು. ದೇವನು ಮೇಲಿನ ಕೈಗಳಲ್ಲಿ ಚಕ್ರ, ಶಂಖಗಳನ್ನು ಧರಿಸಿದ್ದು ಕೆಳಗಿನ ಬಲಗೈ ವರದಹಸ್ತ ಹಾಗೂ ಕೆಳಗಿನ ಎಡಗೈ ಕಟಿಹಸ್ತವನ್ನು ಹೊಂದಿದೆ. ಇಲ್ಲಿಯ ಶಿಲಾವಿಗ್ರಹದ ಕೆಳಗೆ ನಿರಾಕಾರವಾಗಿ ಮೂರು ಶಿಲೆಗಳಿದ್ದು ಅದನ್ನೇ ಮೂಲ ಮೂರ್ತಿಗಳೆಂದು ಹೇಳಲಾಗಿದೆ. ಗರ್ಭಗುಡಿಯ ಬಲಭಾಗದಲ್ಲಿ ನವನೀತ ಕೃಷ್ಣನ ಮೂರ್ತಿ ಇದೆ. ಆಲಂಬಗಿರಿಯ ವೆಂಕಟೇಶ್ವರನನ್ನು ಕೈವಾರ ತಾತಯ್ಯನವರ ಪ್ರೇರಣೆಯಿಂದ ಕಲ್ಕಿ ವೆಂಕಟರಮಣ ಎಂತಲೂ ಕರೆಯುವರು. ನವರಂಗದಲ್ಲಿ ನಾಲ್ಕು ಕಂಬಗಳಿವೆ. ಕಂಬದ ಮೇಲೆ ವೇಣುಗೋಪಾಲ, ಕಾಳಿಂಗ ಮರ್ದನಕೃಷ್ಣ, ತ್ರಿವಿಕ್ರಮ, ಲಕ್ಷ್ಮಿನರಸಿಂಹ, ರಾಮಲಕ್ಷ್ಮಣ ಮುಂತಾದ ಉಬ್ಬು ಶಿಲ್ಪಗಳಿವೆ. ರಂಗ ಮಂಟಪದ ಯಾಳಿ ಸ್ತಂಭಗಳು ಬಹಳ





– ಕೆಂಗೇರಿ ಚಕ್ರಪಾಣಿ
94483 86886









ಆಕರ್ಷಕವಾಗಿದ್ದು ದೇವಾಲಯದ ಭವ್ಯತೆಯನ್ನು ಹೆಚ್ಚಿಸಿವೆ. ರಂಗಮಂಟಪದ ಇಕ್ಕೆಲಗಳಲ್ಲಿ ಜಗತಿ ಇದ್ದು ಒಂದು ಕಡೆ ಆಳ್ವಾರರ ಮೂರ್ತಿಗಳನ್ನು ಮತ್ತೊಂದು ಕಡೆ ಉತ್ಸವ ಮೂರ್ತಿಗಳನ್ನು ಇರಿಸಿದ್ದಾರೆ. ರಂಗಮಂಟಪದಿಂದ ನವರಂಗದ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಆಳೆತ್ತರದ ದ್ವಾರಪಾಲಕರಾದ ಜಯ ವಿಜಯರ ಶಿಲ್ಪಗಳು ಆಕರ್ಷಿಸುತ್ತವೆ. ರಂಗಮಂಟಪದ ಮುಂದೆ ಗರುಡನ ಮೂರ್ತಿ ಹಾಗೂ ಬಲಿಪೀಠ ಮತ್ತು ಧ್ವಜಸ್ಥಂಭ ಇದೆ. ವೆಂಕಟೇಶ್ವರನ ದೇವಾಲಯದ ಗರ್ಭಗುಡಿಯ ಮೇಲೆ ಅಂದವಾದ ಶಿಖರವಿದೆ ಹಾಗೂ ದೇವಾಲಯಕ್ಕೆ ಹೊಂದಿಕೊಂಡಂತೆ ಲಕ್ಷ್ಮಿಗಾಗಿ ಪ್ರತ್ಯೇಕ ಗುಡಿ ಇದೆ.

ಆಲಂಬಗಿರಿಯಲ್ಲಿ ಸುಮಾರು 10 ಶಾಸನಗಳು ದೊರೆತಿದ್ದು, ಕ್ರಿಸ್ತಶಕ 1330 ರ ಶಾಸನವೇ ಅತ್ಯಂತ ಪ್ರಾಚೀನ ಶಾಸನವಾಗಿದೆ. ಶಾಸನದಲ್ಲಿ ಮಹಾಮಂಡಳೇಶ್ವರನೆಂಬುವನು ಸ್ವಾಮಿಗೆ ದತ್ತಿ ನೀಡಿದ ಉಲ್ಲೇಖವಿದೆ. ಶಾಸನದಲ್ಲಿ ದೇವನನ್ನು ತಿರುವೆಂಗಳನಾಥ ಎಂದು ಕರೆಯಲಾಗಿದೆ.

ವಿಜಯನಗರದ ಅರಸು ಕೃಷ್ಣದೇವರಾಯನ ಕಾಲದ ಕ್ರಿಸ್ತಶಕ 1527 ರ ಶಾಸನದಲ್ಲಿ ದೊಡ್ಡ ಜನ್ನಪ್ಪ ನಾಯಕನೆಂಬುವನು ಭೂದಾನ ನೀಡಿದರೆ ಮತ್ತೊಂದು ಶಾಸನ (ಕಾಲ ಕ್ರಿ.ಶ. 1527) ದಲ್ಲಿ ಸ್ವಾಮಿಯ ಅಮೃತ ಪಡಿ ನೈವೇದ್ಯ ಹಾಗೂ ಕಾರ್ತಿಕ ಮಾಸದ ದೀಪಾರಾಧನೆಗೆ ದತ್ತಿಬಿಟ್ಟ ಉಲ್ಲೇಖವಿದೆ. ವಿಜಯನಗರದ ಅರಸರಾದ ಅಚ್ಯುತರಾಯ, ರಾಮರಾಯ ವೆಂಕಟಪತಿರಾಯ ಮುಂತಾದವರು ದತ್ತಿಗಳನ್ನು ಬಿಟ್ಟಿದ್ದು ಆಲಂಬಗಿರಿಯ ವೆಂಕಟೇಶ್ವರನಿಗೆ ನಿರಂತರವಾಗಿ ಭಕ್ತಿಯಿಂದ ನಡೆದು ಕೊಂಡಿರುವುದು ಗಮನಾರ್ಹ.

ಮರಾಠ ದೊರೆ ಶಿವಾಜಿಯ ಸಹೋದರ ಸಂಬೋಜಿಯ ಮಗ ಮಲಕೋಜಿಯು ಸಹ ವೆಂಕಟೇಶ್ವರನಿಗೆ ಭೂದಾನ ನೀಡಿರುವನು.

ಹೀಗೆ ಹಲವಾರು ರಾಜವಂಶಗಳ ಸೇವಾ ಕೈಂಕರ್ಯದಿಂದ ವೈಭವಯುತವಾಗಿದ್ದ ದೇವಾಲಯವು ಶಿಥಿಲ ಹಂತವನ್ನು ತಲುಪಿತ್ತು. ದೇವಾಲಯದ ಮೂಲಸ್ವರೂಪಕ್ಕೆ ಧಕ್ಕೆ ಬರದಂತೆ ಜೀರ್ಣೋದ್ಧಾರ ಮಾಡಿದ ಕೀರ್ತಿ ಕೈವಾರದ ಯೋಗಿನಾರಾಯಣ ಮಠದ ಅಧ್ಯಕ್ಷರಾದ ಶ್ರೀ ಎಮ್. ಆರ್ ಜಯರಾಮ್‌ರವರಿಗೆ ಸಲ್ಲುತ್ತದೆ. ಶ್ರೀಯುತರು ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿದ್ದಲ್ಲದೆ ವೆಂಕಟೇಶ್ವರ ಸ್ವಾಮಿಯ ನಿತ್ಯ ಪೂಜೆ, ಪಕ್ಷ ಪೂಜೆ, ವಾರ್ಷಿಕ ಪೂಜೆಗಳು ನಿರಂತರವಾಗಿ ನಡೆಯಲು ಶಿಸ್ತು ಬದ್ಧವಾದ ವ್ಯವಸ್ಥೆಯನ್ನು ಮಾಡಿರುವರು. ಈ ನಿಟ್ಟಿನಲ್ಲಿ ಶ್ರೀಯುತರು ಅಭಿನಂದನಾರ್ಹರು. ಆಲಂಬಗಿರಿಯ ವೆಂಕಟೇಶ್ವರ ಸ್ವಾಮಿಯ ಬ್ರಹ್ಮ ರಥೋತ್ಸವವು ಚೈತ್ರ ಮಾಸದ ರಾಮನವಮಿ ದಿನದಿಂದ ಆರಂಭವಾಗಿ ಏಳು ದಿನ ರಾಜ್ಯ ಸರ್ಕಾರದಿಂದ ಹಾಗೂ ಸ್ಥಳೀಯ ಟ್ರಸ್ಟ್ ವತಿಯಿಂದ ಅತ್ಯಂತ ವೈಭವವಾಗಿ ಭಕ್ತರ ಸಮ್ಮುಖದಲ್ಲಿ ಪ್ರತಿ ವರ್ಷ ಜರುಗುವುದು.

**ಹೀಗೆ ಬನ್ನಿ :**


ಸುಪ್ರಸಿದ್ಧ ಆಲಂಬಗಿರಿಯ ಕಲ್ಕಿ ವೆಂಕಟೇಶ್ವರನನ್ನು ದರ್ಶಿಸಲು ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿಗೆ ಬಂದು ಚಿಂತಾಮಣಿ-ಬೆಂಗಳೂರು ರಸ್ತೆಯಲ್ಲಿ 6 ಕಿ.ಮೀ. ಸಾಗಿದರೆ ಚೆನ್ನಸಂದ್ರ ಎಂಬ ಗ್ರಾಮವಿರುವುದು. ಅಲ್ಲಿ ಎಡಕ್ಕೆ ಮೂರು ಕಿಲೋಮೀಟರ್ ಸಾಗಿ ಶ್ರೀ ಕ್ಷೇತ್ರವನ್ನು ಸೇರಬಹುದು. ಬೆಂಗಳೂರಿನಿಂದ ಬರುವ ಪ್ರವಾಸಿಗರು ಬೆಂಗಳೂರು ಹೊಸಕೋಟೆ, ಕೈವಾರ ಕ್ರಾಸ್, ನಂತರ 14 ಕಿಲೋಮೀಟರ್ ದೂರ ಕ್ರಮಿಸಿ ಅದೇ ಚೆನ್ನಸಂದ್ರ ಕ್ರಾಸಿಗೆ ಬಂದು ಬಲಕ್ಕೆ ತಿರುಗಿ ಆಲಂಬಗಿರಿಗೆ ಬರಬಹುದು.

# ಕತ್ತಲು ಬೆಳಕಿನ ಮಾಸ

– ಡಾ।। ಗುರುರಾಜ ಪೋಶೆಟ್ಟಿ ಹಳ್ಳಿ
97393 69621

ಕಾರ್ತೀಕಮಾಸದಲ್ಲಿ ಕಾರ್ಗತ್ತಲಿನದೇ ಕಾರು ಬಾರು. ಹಾಗಿದ್ದು ಮನೆ ಮನೆಯ ಮುಂದಿನ ಹಣತೆಗಳ ಕಾರಣದಿಂದ ಈ ಮಾಸದಲ್ಲಿ ಬೆಳಕಿನ ದರ್ಬಾರನ್ನು ಕಾಣಬಹುದು.

ಕಾರ್ತೀಕ ಮಾಸ ಪುಣ್ಯದ ಪರ್ವ.ಬೆಳದಿಂಗಲೇ ಈ ಮಾಸಕ್ಕೆ ಹಾಸುಗೆ, ಹಾಗೆಂದೇ ಕೌಮುದೀ ಮಾಸ, ದಾಮೋದರ ಮಾಸ ಎಂದು ಕರೆಯುವ ವಾಡಿಕೆಯಿದೆ. ಕಾರ್ತೀಕಮಾಸದ ಸಂದರ್ಭದಲ್ಲಿ ಚಂದ್ರನು ಭೂಮಿಯ ಕಕ್ಷೆಯ ಸಮೀಪ ಇರುತ್ತಾನೆ. ಬೇರೆ ಮಾಸಗಳಿಗಿಂತ ಈ ಮಾಸದಲ್ಲಿ ಶೇಕಡ 7 ರಷ್ಟು ಸೂರ್ಯನ ಬೆಳಕನ್ನು ಹೆಚ್ಚಿಗೆ ಪ್ರತಿಫಲಿಸುತ್ತಾನೆ. ಹಾಗೆಂದೇ ಕಾರ್ತೀಕ ಮಾಸದ ಬೆಳದಿಂಗಳು ಅಷ್ಟೊಂದು ಪ್ರಖರವಾಗಿರುತ್ತದೆ.



### ದೀಪ ಆನಂದದ ರೂಪ

ಕಾರ್ತೀಕ ಮಾಸವು ಬಹು ಶ್ರೇಷ್ಠವೂ, ಶಿವ ಕೇಶವರಿಬ್ಬರಿಗೂ ಅತಿಶಯ ಪ್ರೀತಿಕರ ಮಾಸವೆನಿಸಿದೆ. ಕಾರ್ತೀಕ ದೀಪಾರಾಧನೆಯನ್ನು ಎರಡು ವಿಧವಾಗಿ ಆಚರಿಸಬಹುದು. 1)ದೀಪ ಪ್ರಜ್ವಲನ, 2) ದೀಪದಾನ, ಕಾರ್ತೀಕ ದೀಪ ಪ್ರಜ್ವಲನವನ್ನು ಸೂರ್ಯೋದಯಕ್ಕೆ ಮುನ್ನವೇ ಅಂದರೆ ನಕ್ಷತ್ರಗಳು ಇನ್ನೂ ಕಾಣುತ್ತಿರುವಾಗಲೇ, ಕತ್ತಲು ಇರುವಂತೆಯೇ ಹಚ್ಚಬೇಕು. ಶುದ್ಧವಾಗಿ ಸ್ನಾನ ಮಾಡಿ, ಶುಚಿಯಾದ ಒಗೆದ ವಸ್ತ್ರಗಳನ್ನಿಟ್ಟು ದೇವರ ಮನೆಯಲ್ಲಿ ದೇವರ ಮುಂದೆ, ತುಳಸೀ ಬೃಂದಾವನದ ಮುಂದೆ ಅಥವಾ ದೇವಸ್ಥಾನಗಳಲ್ಲಿ ಹಚ್ಚಬೇಕು. ದೇವರ ದೀಪದಲ್ಲಿ ಭಗವಂತನ 13 ರೂಪಗಳಿರುತ್ತವೆ. ಬೆಳ್ಳಿಯ ಹಿತ್ತಾಳೆಯ ಅಥವಾ ಮಣ್ಣಿನ ಪ್ರಣತಿಗಳನ್ನು ದೀಪಗಳನ್ನು ಬಳಸಬಹುದು. ತುಪ್ಪ ಮತ್ತು ಎಳ್ಳೆಣ್ಣೆಗಳು ದೀಪ ಬೆಳಗಲು ಶ್ರೇಷ್ಠ ಅವಿಲ್ಲದಿದ್ದರೆ ಕಡಲೇಕಾಯಿ ಎಣ್ಣೆ ಬಳಸಬಹುದು. ನಂತರ ದೇವರಿಗೆ ನಮಸ್ಕರಿಸಿ ದೀಪ ಪ್ರಜ್ವಲನವನ್ನು ಅರ್ಪಿಸಬೇಕು.

ದೀಪದ ಸ್ತಂಭದಲ್ಲಿ 27 ನಕ್ಷತ್ರಾಭಿಮಾನಿ ದೇವತೆಗಳೂ ನಾಳದಲ್ಲಿ ವಾಸುಕೀ ದೇವತೆ, ಪಾದದಲ್ಲಿ ಚಂದ್ರಸೂರ್ಯರು ಧೂಪ ದೀಪ ಪಾತ್ರೆಯಲ್ಲಿ ಅಗ್ನಿದೇವತೆ ಇರುತ್ತಾರೆ. ಇನ್ನೊಂದು ಪುರಾಣದ ಪ್ರಕಾರ ದೀಪದ ತುದಿಯಲ್ಲಿ ಲಕ್ಷ್ಮೀ, ಮಧ್ಯದಲ್ಲಿ ಶಾರದೆ, ಬುಡದಲ್ಲಿ ಗೌರಿ ಉಪಸ್ಥಿತರಿರುತ್ತಾರೆ. ಹೀಗಾಗಿ ದೀಪವು ದೇವತಾ ಸಾನ್ನಿಧ್ಯಯಮಯವಾದುದು. ಇಷ್ಟು ಮಹಿಮಾನ್ವಿತವಾದ ಶ್ರೇಷ್ಠವಾದ ದೀಪಗಳನ್ನು ಭಗವಂತನ ಮುಂದೆ ಬೆಳಗುವುದೇ ದೀಪಾರಾಧನೆ, ಕಾರ್ತೀಕ ಮಾಸವು ದೀಪಾರಾಧನೆಗೆ ಬಹು ಪ್ರಶಸ್ತವೂ, ಮಹತ್ಪುಣ್ಯದಾಯಕವೂ ಆದ ಮಾಸವಾಗಿದೆ.

**ಹೆಚ್ಚು ದೀಪ:** ದೀಪ ಸಂಖ್ಯೆಯನ್ನು ಪ್ರತಿದಿನವೂ ಹೆಚ್ಚಿಸುತ್ತಾ ಹೋಗುವುದು ಕಾರ್ತೀಕದ ಪಾಡ್ಯದ ದಿನ ಎರಡು ದೀಪ ಬಿದಿಗೆ 4, ತದಿಗೆ 6 ಹೀಗೆ ಹುಣ್ಣಿಮೆಯ ತನಕ ದಿನಕ್ಕೆ ಎರಡು ದೀಪಗಳಂತೆ ಹೆಚ್ಚಿಸುತ್ತಾ ಹೋಗುವುದು, ಹುಣ್ಣಿಮೆಯಂದು 30 ದೀಪಗಳನ್ನು ಹಚ್ಚುವುದು. ಮಾರನೆಯ ದಿನವೂ 30 ದೀಪಗಳನ್ನು ಹಚ್ಚಿ ಬಿದಿಗೆಯಿಂದ ದಿನಕ್ಕೆ ಎರಡು ದೀಪಗಳನ್ನು ಕಡಿಮೆ ಮಾಡುತ್ತಾ ಬಂದು ಅಮಾವಾಸ್ಯೆಯಂದು 2 ದೀಪ ಹಚ್ಚುವುದು, ನಂತರ ವ್ರತವನ್ನು ದೇವರಿಗೆ ಅರ್ಪಿಸುವುದು.

ಕಾರ್ತೀಕಮಾಸವು ಜ್ಞಾನ ಸಾಧನೆಗೆ ತುಂಬ ಪ್ರಶಸ್ತವಾದ ತಿಂಗಳು ಎಂಬ ನಂಬಿಕೆಯಿದೆ. ಸಾಮಾನ್ಯವಾಗಿ ಜ್ಞಾನಕ್ಕೂ ಬೆಳಕಿಗೂ ನಂಟನ್ನು ಕಲ್ಪಿಸುವುದು ಉಂಟು. ಹೀಗಾಗಿ ಕಾರ್ತೀಕಮಾಸದಲ್ಲಿ ಆಚರಿಸುವ ದೀಪಾರಾಧನೆಗೆ, ದೀಪೋತ್ಸವಕ್ಕೆ ಮಹತ್ವವಿದೆ. ಕಾರ್ತೀಕಮಾಸದ ಸೋಮವಾರಗಳು ಶಿವನಿಗೆ ಅತ್ಯಂತ ಇಷ್ಟ ಎಂದೂ ಹೇಳುವುದುಂಟು. ಶಿವನು ಜ್ಞಾನಕ್ಕೂ ವೈರಾಗ್ಯಕ್ಕೂ ಸಂಕೇತ.



ಹೀಗಾಗಿ ಕಾರ್ತೀಕದಲ್ಲಿ ನಡೆಸುವ ಶಿವನ ದೀಪಾರಾಧನೆ ಎಂದರೆ ನಾವು ಕತ್ತಲನ್ನು ಓಡಿಸಿ ಬೆಳಕನ್ನು ಆಹ್ವಾನಿಸುವುದು, ಎಂದರೆ ಅಜ್ಞಾನವನ್ನು ದೂರ ಮಾಡಿ, ಅರಿವನ್ನು ತುಂಬಿಸಿಕೊಳ್ಳುವುದು. ಜ್ಞಾನ ಇದ್ದರೆ ಸುಖವನ್ನೂ ದುಃಖವನ್ನೂ ಸಮಾನವಾಗಿ ಸ್ವೀಕರಿಸುವ ಪ್ರಬುದ್ಧತೆ ಒದಗುತ್ತದೆ. ಇಂಥ ವಿವೇಕವೇ ವೈರಾಗ್ಯಕ್ಕೂ ಮೂಲ, ಜೀವನದ ಸಾರ್ಥಕತೆಗೂ ಮೂಲ. ನಮ್ಮ ಮೂಲಚೈತನ್ಯವನ್ನೂ ಭಗವಂತ ಸ್ವರೂಪವನ್ನೂ ಬೆಳಕಿನ ರೂಪದಲ್ಲಿ ಆರಾಧಿಸುವ, ಅರ್ಚಿಸುವ ಕಾರ್ತೀಕ ದೀಪೋತ್ಸವ ನಮ್ಮ ಸಂಸ್ಕೃತಿಯ ಸೌಂದರ್ಯಕ್ಕೂ ಸಂಕೇತವಾಗಿದೆ. ಸಾಯಂಕಾಲ-ರಾತ್ರಿಗಳಲ್ಲಿ ದೇವಾಲಯಗಳಲ್ಲೂ ಮನೆಗಳಲ್ಲೂ ದೀಪಾರಾಧನೆ ನಡೆಯುತ್ತದೆ. ಮನೆಯ ಒಳಗೂ ಹೊರಗೂ ಬೆಳಗುವ ಈ ದೀಪಗಳು ನಮ್ಮ ಅಂತರಂಗ ಬಹಿರಂಗಗಳ ಸಾಮರಸ್ಯಕ್ಕೂ ಸಾಧನೆಗೂ ಸಂತಸಕ್ಕೂ ಸೌಂದರ್ಯಕ್ಕೂ ಪ್ರತೀಕವಾಗಿದೆ.

ಶೈವತಂತ್ರಗಳಲ್ಲಿಯೂ ಕೃತ್ತಿಕಾ ದೀಪೋತ್ಸವ ವಿಧಿಯನ್ನು ವಿವರಿಸಲಾಗಿದೆ. ಕಾರ್ತಿಕ ಹುಣ್ಣಿಮೆಯ ಸಂಜೆ ದೀಪೋತ್ಸವವನ್ನು ಮಾಡಿದರೆ ಶಿವನು ಸುಪ್ರಸನ್ನನಾಗುವನು ಎಂದು ಅಜಿತ ತಂತ್ರ (ಅಧ್ಯಾಯ 68) ದಲ್ಲಿದೆ. ತಮಿಳುನಾಡಿನ ಪಂಚ ಶಿವಕ್ಷೇತ್ರಗಳಲ್ಲಿ ಅಗ್ನಿಕ್ಷೇತ್ರವೆಂದು ಸುಪ್ರಸಿದ್ಧವಾದ ತಿರುವಣ್ಣಾಮಲೈಯಲ್ಲಿ ಶೈವಾಗಮೋಕ್ತ ವಿಧಿಯಂತೆ ದೀಪೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಅದನ್ನು ವೀಕ್ಷಿಸಲು ಲಕ್ಷಾಂತರ ಜನರು ಅಲ್ಲಿ ಸೇರುತ್ತಾರೆ.

### ದೀಪಕ್ಕೊಂದು ಮಹತ್ವ

**ಕಲ್ಪಕೋಟಿ ಸಹಸ್ರಾಣಿ ಪಾತಕಾನಿ ಬಹೂನ್ಯಪಿ**
**ನಿಮೇಷ ಅರ್ಧೇನ ದೀಪಸ್ಯ ವಿಲಯಂತು ಕಾರ್ತೀಕೇ॥**

ಎನ್ನುತ್ತದೆ ಸ್ಕಾಂದಪುರಾಣ. ಅಂದರೆ, ಕಾರ್ತೀಕ ಮಾಸದಲ್ಲಿ ಅರೆ ನಿಮಿಷವಾದರೂ ಆಲಯದಲ್ಲಿ ದೀಪ ಬೆಳಗುವುದರಿಂದ ಕೋಟೀ ಕಲ್ಪಗಳಿಂದ ಮಾಡಿದ ಪಾಪವೂ ನಾಶವಾಗುತ್ತದಂತೆ. ಅಂದ ಮೇಲೆ ಕಾರ್ತೀಕಮಾಸದಲ್ಲಿ ನಡೆಯುವ ದೀಪಾರಾಧನೆಯನ್ನು ಮಣ್ಣಿನ ಹಣತೆಯಲ್ಲಿ ಮಾಡುವ ಪದ್ಧತಿಯಿದೆ. ದೀಪ ಬೆಳಗುವುದಕ್ಕೆ ಹಸುವಿನ ತುಪ್ಪ ಅಥವಾ ಎಳ್ಳೆಣ್ಣೆಯನ್ನು ಬಳಸುತ್ತಾರೆ. ವೈಜ್ಞಾನಿಕ ದೃಷ್ಟಿಯಲ್ಲಿ ನೋಡುವುದಾದರೆ, ಕಾರ್ತೀಕಮಾಸದ ದೀಪಾರಾಧನೆಗೂ ವಾತಾವರಣಕ್ಕೂ ಸಂಬಂಧವಿದೆ. ಹೇಳಿ ಕೇಳಿ ಕಾರ್ತೀಕಮಾಸ ಚಳಿಗಾಲ. ಚಳಿಗಾಲ ಸೋಂಕು ಹರಡುವುದಕ್ಕೆ ಹೇಳಿ ಮಾಡಿಸಿದ ಕಾಲ.

ಈ ಕಾಲದಲ್ಲಿ ಕ್ರಿಮಿ, ಕೀಟಗಳ ಸಂತಾನೋತ್ಪತ್ತಿಯೂ ಹೆಚ್ಚಿರುತ್ತದೆ. ದೀಪ ಹಚ್ಚುವುದರಿಂದ ವಾತಾವರಣ ಬಿಸಿಯಾಗುವುದರಿಂದ ಸೋಂಕು ಹರಡುವಿಕೆಯನ್ನು ತಡೆಗಟ್ಟಬಹುದು. ದೀಪ ಬೆಳಗಲು ತುಪ್ಪ ಅಥವಾ ಎಳ್ಳೆಣ್ಣೆ ಬಳಕೆಯೂ ಇದಕ್ಕೆ ವೈರಾಣುಗಳ ನಿಯಂತ್ರಣಕ್ಕೆ ಪೂರಕವಾಗಿದೆ. ಆಯುರ್ವೇದ ಶಾಸ್ತ್ರದ ಪ್ರಕಾರ ತುಪ್ಪವು ಎಂಥಹ ದೋಷವನ್ನು ಹೀರಿಕೊಳ್ಳುವ ಗುಣವನ್ನು ಹೊಂದಿದೆ.

ಚಂದ್ರನ ಚಲನೆಗೂ ನಮ್ಮ ಮನಸ್ಥಿತಿಗೂ ಸಂಬಂಧವಿದೆ ಎಂಬ ಮಹಾಶಾಸ್ತ್ರಜ್ಞ ಮಾತನ್ನು ನಾವು ಒಪ್ಪುವುದಾದರೆ, ಕತ್ತಲು, ಬೆಳಕಿನ ತಾಳಮೇಳದಲ್ಲಿ ಬದುಕಿನ ಮೇಲಾಗುವ ಪರಿಣಾಮಗಳನ್ನು ಸುಲಭವಾಗಿ ಅರ್ಥೈಸಿಕೊಳ್ಳಬಹುದು. ಅಂತಯೇ ಹುಣ್ಣಿಮೆ, ಅಮಾವಾಸ್ಯೆಗಳಲ್ಲಿ ನಮ್ಮ ಮನಸ್ಸಿನ, ದೇಹದ ಪ್ರಕೃತಿಯ ಮೇಲಾಗುವ ಪರಿಣಾಮಗಳನ್ನು ಅರ್ಥಮಾಡಿಕೊಳ್ಳಬಹುದು.

ನಮ್ಮ ಋಷಿ ಮುನಿಗಳ ಪ್ರಕಾರ ಯಾವಾತನ ದೇಹ ಪ್ರಕೃತಿಯಲ್ಲಿ ವ್ಯತ್ಯಾಸವಾಗುತ್ತದೋ ಆತ ಜ್ಞಾನಾರ್ಜನೆಯ ದಾರಿಯಲ್ಲಿ ಸಾಗಲಾರ. ಬಹುಶಃ ಆ ಕಾರಣಕ್ಕೆ ಏನೋ ನಮ್ಮ ಋಷಿ, ಮುನಿಗಳು ಹುಣ್ಣಿಮೆ, ಅಮಾವಾಸ್ಯೆ, ಗ್ರಹಣ ಕಾಲದ ದಿನಗಳನ್ನು ಅನಧ್ಯಯನ ತ್ರಯವೆಂದು ವಿಂಗಡಿಸಿದ್ದಾರೆ. ಎಷ್ಟೋ ವೈದಿಕ ಆಶ್ರಮಗಳಲ್ಲಿ ಇಂದಿಗೂ ಆ ಪರಂಪರೆ ಮುಂದುವರೆದಿದೆ.

ಕಾರ್ತೀಕಮಾಸದುದ್ದಕ್ಕೂ ಬರುವ ನಾಲ್ಕು ಸೋಮವಾರಗಳಲ್ಲಿ ಜನ ಶಿವಾರಾಧನೆ ಮಾಡುತ್ತಾರೆ. ಅಂದು ಉಪವಾಸವಿದ್ದು ಸೋಮವಾರದಂದು ಸಪ್ತಮಿ ತಿಥಿ ಇದ್ದು, ಶ್ರವಣ ನಕ್ಷತ್ರವೂ ಕೂಡಿ ಬಂದರೆ ಆ ದಿನ ಆಚರಿಸುವ ವ್ರತಕ್ಕೆ ಕೋಟಿ ಸೋಮವಾರ ವ್ರತ ಎಂದು ಕರೆಯುತ್ತಾರೆ. ಕಾರ್ತೀಕ ಮಾಸದ ಉದ್ದಕ್ಕೂ ಏಕಭುಕ್ತ (ಒಪ್ಪೊತ್ತಿನ) ಊಟ ಮಾಡುವ ಸಂಪ್ರದಾಯವಿದೆ, ಮತ್ತೆ ಕೆಲವರು ಹಣ್ಣು, ಹಂಪಲುಗಳನ್ನು ತಿಂದುಕೊಂಡೇ ವ್ರತಾಚರಣೆ ಮಾಡುತ್ತಾರೆ. ಇಡೀ ಮಾಸದಾದ್ಯಂತ ವ್ರತ ಮಾಡಲು ಶಕ್ಯವಿಲ್ಲದವರು ಕಡೇ ಪಕ್ಷ ಕಾರ್ತೀಕಮಾಸದ ಸೋಮವಾರ ವ್ರತವನ್ನಾದರೂ ಆಚರಿಸುತ್ತಾರೆ.



# ಧಾರಾವಾಹಿ

# ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯ

– ಡಿ॥ ಬಿ.ಎನ್.ಶ್ರೀನಿವಾಸನ್

**ಕಳೆದ ಸಂಚಿಕೆಯಿಂದ**

7. ನಿಜವೆಂದರೆ ಸ್ವಾಮಿಗೆ ಶುಕ್ರವಾರದಂದು ಹರಿಷಿಣದ ಸ್ನಾನ ಮಾಡಿಸುವುದಿಲ್ಲ. ಹರಿಷಿಣದ ಹುಡಿಯನ್ನು ನೀರಿನಲ್ಲಿ ಬೆರಸಲಾಗುತ್ತದೆ. ಎಲ್ಲ ವಿಷ್ಣುಮೂರ್ತಿಗಳ ಸ್ನಪನ ತಿರುಮಂಜನದಲ್ಲಿಯೂ ಹರಿಷಿಣ ಒಂದು ಅವಿಭಾಜ್ಯ ಅಂಗ. ಹೀಗಾಗಿ ಈ ಆಲಯದಲ್ಲಿ ಮಾತ್ರವೇ ಕಂಡುಬರುವ ವಿಶೇಷವಲ್ಲ. ತಿರುಮಂಜನವಾದ ನಂತರ ವಡೆಯ ಅಥವಾ ಪಾಯಸದ ನೈವೇದ್ಯ ಎರಡನೆಯ ಗಂಟೆಯಲ್ಲಿ ಹೋಳಿಗೆಯನ್ನು ಅರ್ಪಿಸುವರು. ಆದರೆ ಈ ಸಂಪ್ರದಾಯವೂ ತೀರ ಈಚಿನದೇ ಆಗಿ ಪ್ರಾಚೀನತೆಯನ್ನೇನೂ ಹೊಂದಿಲ್ಲ.

8.ಆಗಮಶಾಸ್ತ್ರಗಳು ಹೇಳುವಂತೆ ಧ್ರುವಬೇರದೊಡನೆಯೇ ಒಂದು ಕಿರಿಯ ಭೋಗಮೂರ್ತಿಯ ಅಗತ್ಯವುಂಟು. ಕಾರಣ ಧ್ರುವ ಬೇರಕ್ಕೆ ಪರ್ಯಂಕಾಸನ,ನಿತ್ಯ ಅಭಿಷೇಕ ಮೊದಲಾದುವು ಸಾಧುವಲ್ಲ,ಸಾಧ್ಯವೂಅಲ್ಲ.

ಶಾಸನಗಳು ತಿಳಿಸುವಂತೆ ಶುಕ್ರವಾರಾಭಿಷೇಕವು ಪ್ರಾಚೀನ ಪರಂಪರೆಯೆನ್ನಬಹುದಾದರೂ,ಭೋಗ ಮೂರ್ತಿಯು ಆಲಯದಲ್ಲಿರುವುದೇ ಧ್ರುವಬೇರಕ್ಕೆ ಬದಲಾಗಿ, ಅದಕ್ಕೆ ಅಭಿಷೇಕ ಮಾಡಬಹುದು ಎಂಬುದಕ್ಕಾಗಿ. ಈ ಆಲಯದಲ್ಲಿ ಮೊದಲಿಗೆ ಭೋಗಮೂರ್ತಿಯ ಪ್ರತಿಷ್ಠಾಪನೆ (ಮಣವಾಳಪ್ಪೆರುಮಾಳ್) ಆದಾಗ ಮೂಲಮೂರ್ತಿಗೂ (ಅದೊಂದು ಐತಿಹಾಸಿಕ ಉತ್ಸವವಾದದ್ದರಿಂದ) ಅಭಿಷೇಕ ನಡೆದಿರಬಹುದು. ಹೀಗೆ ನಡೆದದ್ದು ಪ್ರಾಯಶಃ ಶುಕ್ರವಾರವಾದದ್ದರಿಂದ ಎಲ್ಲ ನಂತರದ ಶುಕ್ರವಾರಗಳಲ್ಲಿಯೂ ಮೂಲಮೂರ್ತಿಗೆ ವಿಧಿವತ್ತಾದ ಅಭಿಷೇಕದ ಆಚರಣೆ ಆರಂಭವಾಗಿರಬೇಕು. ಹೀಗಾಗಿ ಶುಕ್ರವಾರದ ಅಭಿಷೇಕವೆಂಬುದು ವಿಷ್ಣುಮೂರ್ತಿಯ ಅರ್ಚನೆಯ ವಿಧಾನದಲ್ಲಿಯೇ ಹೊಂದಿಕೊಂಡಿದ್ದು, ಕ್ರಿ.ಶ.9 ನೇ ಶತಕದಲ್ಲಿ ಭೋಗ ಶ್ರೀನಿವಾಸಮೂರ್ತಿಯ ಪ್ರತಿಷ್ಠಾಪನೆಯ ನಂತರ ಆಲಯದ ನಿತ್ಯ ಅರ್ಚನಾ ವಿಧಾನದಲ್ಲಿ ಸ್ಥಳ ಪಡೆದಿರುವುದು ಸ್ಪಷ್ಟವಾಗಿಯೇ ಇದೆ.

9. ತೋಮಾಲೆ ಸೇವೆಯೆಂಬುದು ಅಲಂಕರಿಸಿದ ಪುಷ್ಪಗಳ ಹಾರವೆಂಬ ಅರ್ಥದ ತಮಿಳಿನ ತೊಡುತ್ತ ಮಾಲೈ ಯೆಂಬುದರ ಅಪಭ್ರಂಶವಾಗಿದೆ. ಈ ರೀತಿಯ ಅಲಂಕಾರ ವಿಷ್ಣುಮೂರ್ತಿಯಿರುವ ಆಲಯಗಳಲ್ಲಿನ ಧ್ರುವ ಮೂರ್ತಿಗೆ ಸರ್ವಸಾಮಾನ್ಯ. ತೋಮಾಲೆ ಸೇವೆಯೆಂಬ ಪದವು ಪೂಜೆಯ ಕೊನೆಯಲ್ಲಿ ಬರುವ ಪುಷ್ಪಾಲಂಕಾರ ದತ್ತ ಭಕ್ತರನ್ನು ಆಕರ್ಷಿಸುವ ಪದವಾಗಿದೆ. ಆಲಯದಲ್ಲಿನ ಪೂಜೆಯಲ್ಲಿ ಕಾಲಯಾಪನೆಯಾಗದಂತೆ ಹಲವು ರೀತಿಯಲ್ಲಿ ಹೂವನ್ನು ಕಟ್ಟಿ ಅದನ್ನು ತೊಡಿಸುವಾಗ ಒಂದೇ ಹಾರವಾಗುವಂತೆ ಸೇರಿಸಲಾಗುತ್ತದೆ. ಭಗವದಾರಾಧನೆ ಎಂಬುದರ ಇನ್ನೊಂದು ರೂಪವೇ-ಅದರ ಬಗ್ಗೆ ಎಲ್ಲಿಯೂ ಉಲ್ಲೇಖವಿಲ್ಲದಿದ್ದರೂ ಇದು ಭಗವದ್ ಆರಾಧನೆಯೇ ಅಪಭ್ರಂಶವಾಗಿ ಕೆಲವರು ಹೇಳುವ ಭಗವತೀ ಆರಾಧನೆಯಾಗಿದೆಯಷ್ಟೆ.

10. ಈ ವಿಗ್ರಹವು ಸ್ವಯಂಭು ಎಂದು ಈಗಾಗಲೇ ಹೇಳಿಯಾಗಿದೆ. ಇಲ್ಲಿನ ದೇವರು ಎಲ್ಲ ದೇವತೆಗಳ ಎಲ್ಲ ಗುಣಗಳನ್ನೂ ತನ್ನಲ್ಲಿ ಹೊಂದಿದ್ದಾನೆ. ಹೀಗಾಗಿಯೇ ಶ್ರೀಸೂಕ್ತವೊಂದೇ ಅಲ್ಲದೆ ಪುರುಷಸೂಕ್ತವೂ, ಮತ್ತಿತರ ಮೂರು ಸೂಕ್ತಗಳೂ ಪಾರಾಯಣ ಹೊಂದುತ್ತವೆ.

ಅಭಿಷೇಕ ಕಾಲದಲ್ಲಿ ಪಠಿಸಲ್ಪಡುವ ಐದು ಸೂಕ್ತಗಳಲ್ಲಿ ಪುರುಷಸೂಕ್ತವಾದ ಮೇಲೆ ಬರುವ ಶ್ರೀಸೂಕ್ತದ ಪಠನೆಯಿಂದ ಮಾತ್ರವೇ ಈ ವಿಗ್ರಹ ಹಿಂದೆಂದೋ ಶಕ್ತಿಯದಾಗಿತ್ತು ಎನ್ನಬರುವುದಿಲ್ಲ. ಇದರಿಂದಾಗಿ ಹಿಂದಿನ ಯಾವುದೇ ಕಾಲದಲ್ಲೂ ವಿಗ್ರಹವು ಶಕ್ತಿ ವಿಗ್ರಹವೆಂದು ಪರಿಕಲ್ಪಿತವಾಗಿಲ್ಲ ಎಂಬುದು ಖಚಿತವಾಗುವುದು.



ಇದಕ್ಕೆ ಪ್ರತಿಯಾಗಿ ಶಕ್ತಿ ವಿಗ್ರಹಲಕ್ಷಣಗಳಾದ ಉನ್ನತ ಸ್ತನವೇ ಮುಂತಾದ ಶಕ್ತಿ ವಿಗ್ರಹ ಲಕ್ಷಣಗಳಾವುವೂ ಈ ವಿಗ್ರಹ ದಲ್ಲಿ ಕಂಡುಬರುವುದಿಲ್ಲ. ಹೀಗಾಗಿಯೂ ಹಿಂದೆ ಯಾವುದೇ ಕಾಲದಲ್ಲಿಯೂ ಈ ವಿಗ್ರಹವು ಶಕ್ತಿ ವಿಗ್ರಹವೆಂದು ಪೂಜೆ ಗೊಂಡಿರಲಿಲ್ಲ ಎನ್ನಲುಂಟು.

**ಸುಬ್ರಹ್ಮಣ್ಯ ವಿಗ್ರಹ ಜಿಜ್ಞಾಸೆ :**

ಈ ಆಲಯವು ಸುಬ್ರಹ್ಮಣ್ಯಸ್ವಾಮಿಯದಿರಬೇಕು ಎಂದು ಸೂಚಿಸಲಾಗುತ್ತದೆ. ಕಾರಣವೆಂದರೆ -ಸ್ವಾಮಿ ಪುಷ್ಕರಿಣಿ- ಯಲ್ಲಿನ ಸ್ವಾಮಿ ಪದವು ಕುಮಾರಸ್ವಾಮಿಗೆ ಪ್ರತೀಕವಾದದ್ದು.

ಇದು ವಾದವೇ ಅಲ್ಲವೆನ್ನಲು ಕಾರಣ -ಸ್ವಾಮಿ- ಪದವು ಕುಮಾರಸ್ವಾಮಿಗೆ ಮಾತ್ರವೇ ಅನ್ವಯವಾಗುವುದಿಲ್ಲ ಎಂಬ ಒಂದೇ ಪ್ರತಿವಾದ ಸಾಕು. ಸ್ವಾಮಿ ಪುಷ್ಕರಿಣಿ ಎಂಬುದನ್ನು ಎಲ್ಲ ಪವಿತ್ರ ತೀರ್ಥಗಳಲ್ಲಿ ಅತಿಶ್ರೇಷ್ಠ ಎಂಬರ್ಥದಲ್ಲಿ ಬಳಸ ಲಾಗಿದೆ. ಜೊತೆಗೇ ಕುಮಾರಸ್ವಾಮಿಯ ಸಂಬಂಧ ಪಡೆದ ತೀರ್ಥಗಳನ್ನು ಪುಷ್ಕರಿಣಿ ಎಂದು ಕರೆಯದೆ ಕುಮಾರಧಾರಾ ಎಂದು ಕರೆಯುವರು. ಸಾಕ್ಷಾತ್ ವಿಷ್ಣುವೇ ಸ್ವಾಮಿಪುಷ್ಕರಿಣಿ ಯನ್ನು ವೈಕುಂಠದಿಂದ ತಂದನೆಂಬುದಾಗಿ ವರಾಹ ಪುರಾಣ ಅಧಿಕಾರದಿಂದ ಘೋಷಿಸುತ್ತಿದೆ. ಎಲ್ಲ ಪುರಾಣಗಳೂ ಹೇಳು ವಂತೆ ತಿರುಮಲೆಗೆ ಸ್ಕಂದಸ್ವಾಮಿಯು ವೆಂಕಟೇಶನನ್ನು ಅರ್ಚಿಸಲು ಬಂದ ಎಂಬುದು ನಿಜವಾದದಲ್ಲಿ ಸೇವೆಗಾಗಿ ಬಂದ ಭಕ್ತನೇ ಕ್ಷೇತ್ರದೇವತೆಯಾದ ಎಂಬುದು ಊಹಿಸ ಲಾಗದ ಅಂಶವಾಗುತ್ತದೆ. ಜೊತೆಗೇ ಇಲ್ಲಿನ ದೇವರಿಗೆ ಒಂದು ಮುಖ ಹಾಗೂ ನಾಲ್ಕು ಕೈಗಳಿವೆ. ಸಾಮಾನ್ಯವಾಗಿ ಕುಮಾರ ಸ್ವಾಮಿಗೆ ಆರುಮುಖ ಹನ್ನೆರಡು ಕೈಗಳು.

ಮೇಲಿನ ಎಲ್ಲ ಅಧ್ಯಯನಗಳ ಫಲಿತಾಂಶದಿಂದ ಮನ ದಟ್ಟಾಗುವ ಸತ್ಯವೆಂದರೆ ಇಲ್ಲಿನ ವಿಗ್ರಹ ಮೊದಲಿನಿಂದಲೂ ವೈಷ್ಣವ ವಿಗ್ರಹವೇ ಆಗಿದೆ.

ಕ್ರಿ.ಶ.8 ನೆಯ ಶತಮಾನ ಮೊದಲಿಗೆ ಆಳ್ವಾರರುಗಳ ಅನುಭಾವ ಸಾಹಿತ್ಯ ನಮಗುಂಟು. ಇವರೆಲ್ಲರೂ ಬೆಟ್ಟದ ದೇವರನ್ನು ವಿಷ್ಣುವೆಂದೇ ತಿಳಿದು ಹಾಡಿದ್ದಾರೆಯಾಗಿ ಇಡೀ ಕಾಲಮಾನದಲ್ಲೆಲ್ಲ ಈ ವಿಗ್ರಹವನ್ನು ವಿಷ್ಣುವಿಗ್ರಹವಾಗಿಯೇ ಗುರುತಿಸಲಾಗಿದೆಯೆಂದು ಹೇಳಬಹುದು.

**ಗರ್ಭಗೃಹದ ವಿಗ್ರಹಗಳು:**

ಇಲ್ಲಿಯೇ ಸ್ಪಷ್ಟವಾಗಿ ಖಚಿತವಾಗುವ ವಿಷಯವೆಂದರೆ ತಿರುಮಲೆಯ ದೇವರಲ್ಲಿ ಕಾಣುವ ಬಹಿರಂಗ ಲಕ್ಷಣಗಳೆಲ್ಲವೂ ವಿಷ್ಣುವಿನದೇ ಆಗಿದೆಯೆಂಬುದು. ಆದರೆ ಆತನನ್ನು ಸರ್ವ ಭೂತಾಂತರಾತ್ಮ ಎಂಬುದರಿಂದ ಶೈವರು ಶಿವನೆಂದೂ ಸುಬ್ರಹ್ಮಣ್ಯಸ್ವಾಮಿಯನ್ನು ಆರಾಧಿಸುವವರು ಸ್ಕಂದನೆಂದೂ ಪೂಜಿಸಲೂ, ದೇವಿ/ಶಕ್ತಿ ಪೂಜಕರು ದುರ್ಗೆಯೆಂದೂ ಪೂಜಿ ಸಲು ಮನ ಮಾಡಬಹುದು. (ಯಂ ಶೈವಾ: ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ.., 'ಎಂತ ಮಾತ್ರಮುನ ಎವ್ವರು, ತಲಚಿನ ಅಂತ ಮಾತ್ರಮೇ ನೀವು' ಅನ್ನಮಾ ಚಾರ್ಯರ ಕೀರ್ತನೆಯನ್ನು ನೆನಯಬೇಕು - ಅನುವಾದಕ)

ತಿರುಮಲೆಯ ದೇವರು ಪಂಥೀಯ ದೇವರಲ್ಲ- ಬಹಿರ್ಗತ ರೂಪ ಮಾತ್ರ ವಿಷ್ಣುವಿನದೇ, ಆತ ಶಿವ, ಸ್ಕಂದ, ಸರಸ್ವತಿ, ಕಾಳಿ, ಭಗವತಿ, ಬ್ರಹ್ಮ ಅಥವಾ ಭಕ್ತರು ಅಪೇ ಕ್ಷಿಸುವ ಮತ್ತಾವ ರೂಪವೂ ಆಗಬಹುದು. ಈ ದೇವರಿಗೆ ಮಾಡಿದ ಎಲ್ಲ ಸೇವೆ ಉಪಚಾರಗಳೂ, ನಿತ್ಯಸತ್ಯ ಚಿದಾನಂದ ಮೂರ್ತಿಗೆ ಮಾಡಿದ ಸೇವೆಯೇ ಆಗುತ್ತದೆ ಎಂಬುದೇ ತಿರು ಮಲೆಯ ದೇವರ ರಹಸ್ಯವೂ ಹೌದು.

(ಮುಂದುವರೆಯುತ್ತದೆ)



# ತಿರುಚಾನೂರು, ಶ್ರೀ ಪದ್ಮಾವತಿ ಅಮ್ಮನವರ ಬ್ರಹ್ಮೋತ್ಸವಗಳು

## 17-11-2025 ರಿಂದ 25-11-2025 ರ ವರೆಗೆ

| ದಿನಾಂಕ | ವಾರ | ಹಗಲು ಉತ್ಸವ | ರಾತ್ರಿ ಉತ್ಸವ |
|---|---|---|---|
| 17-11-2025 | ಸೋಮವಾರ | ತಿರುಚ್ಚಿ ಉತ್ಸವ, ಧ್ವಜಾರೋಹಣ | ಚಿಕ್ಕಶೇಷವಾಹನ |
| 18-11-2025 | ಮಂಗಳವಾರ | ದೊಡ್ಡಶೇಷವಾಹನ | ಹಂಸವಾಹನ |
| 19-11-2025 | ಬುಧವಾರ | ಮುತ್ತಿನಚಪ್ಪರವಾಹನ | ಸಿಂಹವಾಹನ |
| 20-11-2025 | ಗುರುವಾರ | ಕಲ್ಪವೃಕ್ಷವಾಹನ | ಹನುಮದ್ವಾಹನ |
| 21-11-2025 | ಶುಕ್ರವಾರ | ಪಲ್ಲಕಿಯಲ್ಲಿ ಉತ್ಸವ ಸಾ॥ ವಸಂತೋತ್ಸವ | ಗಜವಾಹನ |
| 22-11-2025 | ಶನಿವಾರ | ಸರ್ವಭೂಪಾಲವಾಹನ, ಸ್ವರ್ಣ ರಥೋತ್ಸವ | ಗರುಡವಾಹನ |
| 23-11-2025 | ಭಾನುವಾರ | ಸೂರ್ಯಪ್ರಭವಾಹನ | ಚಂದ್ರಪ್ರಭವಾಹನ |
| 24-11-2025 | ಸೋಮವಾರ | ರಥೋತ್ಸವ | ಅಶ್ವವಾಹನ |
| 25-11-2025 | ಮಂಗಳವಾರ | ಪಲ್ಲಕಿ ತಿರುಚ್ಚಿ ಉತ್ಸವ,ತೀರ್ಥವಾರಿ, ಅವಭೃಥ, ಚಕ್ರಸ್ನಾನ, ಪಂಚಮೀ ತೀರ್ಥ | ತಿರುಚ್ಚಿ ಉತ್ಸವ, ಧ್ವಜಾವರೋಹಣ |







# ಗಜವಾಹನದಲ್ಲಿ ಗಜಲಕ್ಷ್ಮೀ

**"ಗಜಲಕ್ಷ್ಮೀ"** ಎಂದರೆ ಆನೆಯೆಂಬ ಸಂಪತ್ತು ಎಂಬುದು ಮೇಲ್ಮೈ ಅರ್ಥ. **"ಅಶ್ವ ಪೂರ್ವಾಂ ರಥಮಧ್ಯಾಂ ಹಸ್ತಿನಾದ ಪ್ರಬೋಧಿನೀಂ"** ಎಂಬುದು ಶ್ರೀಸೂಕ್ತದ ಒಂದು ಹನಸ್. ಸಮುದ್ರಮಂಥನ ಕಾಲದಲ್ಲಿ ಐರಾವತವೆಂಬ ಗಜವೂ ಪ್ರಾಪ್ತಿಯಾಗುತ್ತದೆ. ಅದೂ ಒಂದು ಸಂಪತ್ತು. **"ಗಜಗಾಂಭೀರ್ಯ"** ಎಂಬಂತೆ, ಗಂಭೀರ ಸ್ವಭಾವಕ್ಕೆ ಆನೆಯು ಹೆಸರುವಾಸಿ. ಲೋಕಹಿತೈಶಿನಿಯೂ ಹಾಗೂ ಶ್ರೀಮನ್ಮಹಾವಿಷ್ಣುವಿನ ಹೃದಯೇಶ್ವರಿಯೂ ಆದ ಶ್ರೀದೇವಿಯೇ! ನಿನ್ನ ಪಾದಾರವಿಂದಗಳಿಗೆ ಭಕ್ತಿಯೆಂಬ ನವ ಮಲ್ಲಿಕಾಪುಷ್ಪವನ್ನು ಸಲ್ಲಿಸಿ ಪ್ರೀತಿಯಿಂದ ಆರಾಧಿಸುತ್ತೇನೆ.

**ಗ** ಎಂದರೆ ಗತಿ, ಚಲನೆ ಇತ್ಯಾದಿ ಅರ್ಥಗಳು. **ಜ** ಎಂದರೆ ಜನಿಸುವುದು. ನಮ್ಮ ಜೀವನದ ಗತಿಯು ಹಾಗೂ ತನ್ಮೂಲಕ ಪ್ರಾಪ್ತವಾಗುವ ಸಚ್ಚಿಂತನೆಗಳ ಜನನಗಳು ನಗೆ ಪಾಟಲಾಗದೇ ಗಂಭೀರವಾಗಿದ್ದು ನಮಗೂ ಮತ್ತು ನಮ್ಮ ಮೂಲಕ ಇತರರಿಗೂ ಆನಂದವನ್ನುಂಟು ಮಾಡುವಂತಿರಬೇಕಾದರೆ, ಶ್ರೀ ಲಕ್ಷ್ಮಿಯ ದಿವ್ಯಕಟಾಕ್ಷವು ಬೇಕೇ ಬೇಕು. ಅದು ಪ್ರಾಪ್ತವಾಗಬೇಕೆಂದರೆ, ನಾವು ಆ ಮಹಾತಾಯಿಯ ಚರಣಾಂಬುಜಗಳನ್ನು ಶ್ರದ್ಧಾಭಕ್ತಿಗಳಿಂದ ನಿತ್ಯಾರಾಧನೆಯನ್ನು ಮಾಡಬೇಕು.



## ವಾಲ್ಮೀಕಿಪುರಂ (ವಾಯಲ್ಪಾಡು) ಶ್ರೀ ಪಟ್ಟಾಭಿರಾಮಸ್ವಾಮಿಯವರ ಪವಿತ್ರೋತ್ಸವ

**04-10-2025 ರಿಂದ 07-10-2025 ರ ವರೆಗೆ**

| | | |
|---|---|---|
| 04-10-2025 | ಶನಿವಾರ | ಅಂಕುರಾರ್ಪಣೆ |
| 05-10-2025 | ಭಾನುವಾರ | ಪವಿತ್ರ ಪ್ರತಿಷ್ಠ |
| 06-07-2025 | ಸೋಮವಾರ | ಪವಿತ್ರ ಸಮರ್ಪಣೆ |
| 07-07-2025 | ಮಂಗಳವಾರ | ಪೂರ್ಣಾಹುತಿ |

## ಹೃಷಿಕೇಶ್ ಶ್ರೀ ಕಲ್ಯಾಣ ವೆಂಕಟೇಶ್ವರಸ್ವಾಮಿಯವರ ಪವಿತ್ರೋತ್ಸವಗಳು

**05-10-2025 ರಿಂದ 08-10-2025 ರ ವರೆಗೆ**

| | | |
|---|---|---|
| 05-10-2025 | ಭಾನುವಾರ | ಅಂಕುರಾರ್ಪಣೆ |
| 06-10-2025 | ಸೋಮವಾರ | ಪವಿತ್ರ ಪ್ರತಿಷ್ಠ |
| 07-10-2025 | ಮಂಗಳವಾರ | ಪವಿತ್ರ ಸಮರ್ಪಣೆ |
| 08-10-2025 | ಬುಧವಾರ | ಪೂರ್ಣಾಹುತಿ |





## ಜೂಬ್ಲಿಹಿಲ್ಸ್ (ಹೈದರಾಬಾದ್) ಶ್ರೀನಿವಾಸಮಂಗಾಪುರಂ ಶ್ರೀ ವೆಂಕಟೇಶ್ವರ ಸ್ವಾಮಿಯವರ ಪವಿತ್ರೋತ್ಸವಗಳು

**16-10-2025 ರಿಂದ 19-10-2025 ರ ವರೆಗೆ**

| | | |
|---|---|---|
| 16-10-2025 | ಗುರುವಾರ | ಅಂಕುರಾರ್ಪಣೆ |
| 17-10-2025 | ಶುಕ್ರವಾರ | ಪವಿತ್ರ ಪ್ರತಿಷ್ಠ |
| 18-07-2025 | ಶನಿವಾರ | ಪವಿತ್ರ ಸಮರ್ಪಣೆ |
| 19-07-2025 | ಭಾನುವಾರ | ಪೂರ್ಣಾಹುತಿ |

# ಬೆಳಕಿನ ಮಾಸ ಭುವಿಜನ – ಭಗವಂತನಿಗೂ ಪ್ರಿಯವಾದ ಮಾಸ


– ಶ್ರೀಮತಿ. ವಾರುಣಿ ಹೊನ್ನಾಳಿ
99160 22982




"ತಮಸೋಮಾ ಜ್ಯೋತಿರ್ಗಮಯ-ಕತ್ತಲಿನಿಂದ ಬೆಳಕಿನ ಕಡೆ ಎಲ್ಲರೂ ಸಾಗೋಣ ಎಂಬ ಉದಾತ್ತ ಸಂದೇಶವನ್ನು ಲೋಕಕ್ಕೆ ಸಾರುವ ತಿಂಗಳೇ ಕಾರ್ತಿಕ.

ನಮ್ಮ ಬದುಕನ್ನು ಜ್ಞಾನ, ಸುಖ,ಸಮೃದ್ಧಿ ಮತ್ತು ನೆಮ್ಮದಿ ಯೆಂಬ ಬೆಳಕುಗಳಿಂದ ಬೆಳಗಬೇಕು ಎನ್ನುವ ಧ್ಯೇಯವನ್ನು ಪ್ರತಿ ಬಿಂಬಿಸುತ್ತದೆ ಈ ಮಾಸ. ನಿಸರ್ಗ ಸಹಜವೇ ಆದ ಅಭಿವೃದ್ಧಿ ಮತ್ತು ಅಭ್ಯುದಯಗಳು ಈ ಮಾಸದ ಸಂಕೇತ. ಹಾಗಾಗಿ ಕಾರ್ತಿಕ ಎಂಬುದು ಭುವಿಯೊಳಗಿನ ಎಲ್ಲರ ಪಾಲಿಗೆ ಬಹು ದೊಡ್ಡ ಹಬ್ಬ. ಅದಕ್ಕಾಗಿಯೇ ದೀಪಾವಳಿಯನ್ನು "ಹಬ್ಬಗಳ ರಾಜ" ಎಂದರು ಪೂರ್ವಿಕರು. ಮನಕ್ಕೆ ಅಭಿಮಾನಿ ದೇವತೆ ರುದ್ರ, ಮನೋನಿಯಾ ಮಕ ಮತ್ತು ಮಂಗಳಕರ-ಶಿವ. ಮತಿ ಮತಿಯಲ್ಲೂ ಮಂಗಳ ಮೂಡ ಬೇಕು ಎಂದರೆ ಆತನ ಅನಂತ ಕೃಪೆ ಇದ್ದರೆ ಮಾತ್ರ ಸಾಧ್ಯ. ಹಾಗಾಗಿ ಮಾಸ ಪರ್ಯಂತ ಶಿವನ ಪೂಜೆಗೆ ಪ್ರಾಚೀನರು ಮಹತ್ವ ನೀಡಿದರು. ರುದ್ರಾಭಿಷೇಕ, ಭಸ್ಮಾರ್ಚನೆ, ಬಿಲ್ವಾರ್ಚನೆ ಇಲ್ಲಿ ಪ್ರಮುಖವಾಗಿದೆ.

ಅಂದಹಾಗೆ ಈ ಮಾಸವು ಹಿಂದೂ ಪಂಚಾಂಗದಲ್ಲಿ 8 ನೇ ತಿಂಗಳು. ಪ್ರತಿ ಮಾಸಕ್ಕೆ ಒಬ್ಬೊಬ್ಬ ದೇವರು ನಿಯಾಮಕರಾಗಿರು ತ್ತಾರೆ. ಅಂತೆಯೇ ಕಾರ್ತಿಕ ಮಾಸಕ್ಕೆ ರುದ್ರದೇವ (ಶಿವ) ನಿಯಾ ಮಕ. ಶಿವ ಎಂದರೆ ಮಂಗಳ. ಹಾಗಾಗಿ ಎಲ್ಲರಿಗೂ ಜೀವನದಲ್ಲಿ ಶುಭವೇ ಆಗಲಿ ಎಂಬ ಕಾರಣಕ್ಕೆ ಮಾಸ ಪರ್ಯಂತ ಶಿವ ವಿಷ್ಣು ದೀಪೋತ್ಸವಗಳು ವಿವಿಧ ಸನ್ನಿಧಿಗಳಲ್ಲಿ ನೆರವೇರುತ್ತದೆ.

ವಿಷ್ಣು (ದಾಮೋದರ)ನೊಂದಿಗೆ ತುಳಸಿ ಕಲ್ಯಾಣವೂ ನಡೆಯುತ್ತದೆ. ಶೈವ-ವೈಷ್ಣವ ಪರಂಪರೆಯ ಸಮನ್ವಯ ಮಾಸವು ಕಾರ್ತಿಕವೇ ಆಗಿರುವುದು ಬಹು ವಿಶೇಷ. ವಿಶ್ವಾ ವಸು ಸಂವತ್ಸರದಲ್ಲಿ ಅಕ್ಟೋಬರ್ 22 ರಿಂದ ನವೆಂಬರ್ 20 ರ ವರೆಗೆ ಕಾರ್ತಿಕ ಮಾಸದ ಆಚರಣೆ ಇರುತ್ತದೆ.

**ದಾಸ ಶ್ರೇಷ್ಠರನ್ನು ಸ್ಮರಿಸುವ ಮಾಸ :**

ಗೋ ಪಾಡ್ಯದಿನವು ವಿಕ್ರಮ ಸಂವತ್ಸರ ಆರಂಭ ದಿನ. ಶುಕ್ಲ ನವಮಿಯು ಕೃತಯುಗ ಆರಂಭವಾದ ದಿನವೂ ಹೌದು. ಪ್ರಬೋಧಿನೀ ಏಕಾದಶಿಯಂದು ಭೀಷ್ಮಪಂಚಕ ವ್ರತ ಆರಂಭವಾದರೆ ಅಂದೇ ಯತಿ ಗಳ ಚಾತುರ್ಮಾಸವ್ರತ ಸಮಾರೋಪ. ದ್ವಿದಳ ವ್ರತಕ್ಕೂ ಮಂಗಲ ಹಾಡಲಾಗುತ್ತದೆ. ಉತ್ಥಾನ ದ್ವಾದಶಿಯಂದು ತುಲಸೀ ವಿವಾಹ. ಕಾರ್ತಿಕ ಸ್ನಾನವು ಶುಕ್ಲ ಹುಣ್ಣಿಮೆಯೆಂದು ಸಮಾಪ್ತಿ ಆಗುತ್ತದೆ. ಕೃಷ್ಣ ದ್ವಿತೀಯದಂದು ಹುತ್ತರಿ ಹಬ್ಬ. ದಾಸಸಾಹಿತ್ಯಕ್ಕೆ ಅಗ್ರಮಾನ್ಯ ಕೊಡುಗೆ ನೀಡಿ ಕನ್ನಡದ ನುಡಿ ತೇರನ್ನು ಭಕ್ತಿ ಪಂಥದಲ್ಲೂ ಎಳೆದ ಕೀರ್ತಿಗೆ ಭಾಜನರಾದ ಕನಕದಾಸಜಯಂತಿ, ವಿಜಯದಾಸರು, ಮಹಿಪತಿ ದಾಸರ ಪುಣ್ಯಸ್ಮರಣೆ ಈ ಮಾಸದಲ್ಲೇ ಎಂಬುವುದು ವಿಶೇಷ ದಲ್ಲಿ ವಿಶೇಷ.

**ಬೆಳಕು ಇರುವಲ್ಲಿ ಕತ್ತಲೆಗೆ ಸ್ಥಳವೇ ಇಲ್ಲ :**

ಎಲ್ಲಿ ಬೆಳಕು ಇರುವುದೋ ಅಲ್ಲಿ ಕತ್ತಲೆಗೆ ಸ್ಥಳವೇ ಇಲ್ಲ ಎಂಬುದು ಎಲ್ಲರಿಗೂ ತಿಳಿದೇ ಇದೇ. ಆದ ಕಾರಣದಿಂದ 11 ಮಾಸ ಗಳಿಗಿಂತ ಕಾರ್ತಿಕವು ಅತ್ಯಂತ ಶುಭಕರ. ಇದು ಎಲ್ಲರ ಮನೆ-ಮನ ಗಳಿಗೆ ಮಾರ್ಗದರ್ಶಿಮಾಸ. ಅಭ್ಯುದಯ ಕಡೆಗಿನ ಮಹಾಮಾರ್ಗ. ಒಟ್ಟಾರೆ ಒಳಗಣ್ಣನ್ನೂ ತೆರೆಸಿ ಅಲ್ಲಿಯೂ ಹಣತೆಯ ಬೆಳಕಿನ ಕಿರಣ ಪಸರಿಸಿ ಅಂತರಂಗ-ಬಹಿರಂಗ ಶುದ್ಧಿಯನ್ನು ಮಾಡುವ ತಿಂಗಳು.

ಅಭಿವೃದ್ಧಿಯ ಸಂಕೇತವೇ ಆದ ಬೆಳಕಿನ ಗುಚ್ಛ. ಯಾವುದೇ ಕೆಲಸ ಮೊದಲುಗೊಳ್ಳಬೇಕು ಎಂದರೆ ಅದಕ್ಕೆ ಮುಖ್ಯವಾಗಿ ಮನಸ್ಸು ಬೇಕು. ಅಲ್ಲಿ ಮೊದಲು ಮೂಡುವುದೇ ನಂತರ ವಾಸ್ತವದಲ್ಲಿ ಘಟಿಸುತ್ತದೆ. ಇದಕ್ಕೆ ಮನದಲ್ಲಿ ಬೆಳಕು ಬೇಕು. ಮನ ಬೆಳಗಿದರೆ ಮನೆ ಬೆಳಗುತ್ತದೆ. ದೇಶವೂ ಬೆಳವಣಿಗೆ ಕಾಣುತ್ತದೆ. ಹಾಗಾಗಿ ಈ ಮಾಸ ಲೋಕದ ಉದ್ಧಾರಕ್ಕೂ ಪೂರಕವಾಗಿದೆ. ಯುಗ, ಯುಗಗಳ ಹಿಂದಿನಿಂದಲೂ ನಮ್ಮ ಹಿರಿಯರ ಸಂಪ್ರದಾಯ-ಚಿಂತನೆ-ಆಲೋಚನೆ ಮತ್ತು ಅನುಷ್ಠಾ ನಗಳು ಎಷ್ಟು ಶ್ರೇಷ್ಠ ಎಂದು ಇದರಿಂದ ತಿಳಿಯುತ್ತದೆ.

**ಪುರಾಣಗಳ ಉಲ್ಲೇಖ :**

ಪುರಾಣಗಳ ಪ್ರಕಾರ, ಈ ತಿಂಗಳಲ್ಲಿ ಕುಮಾರ ಕಾರ್ತಿಕೇಯನು ತಾರಕಾಸುರನನ್ನು ಸಂಹಾರ ಮಾಡಿದ. ಕಾರ್ತಿಕೇಯನ ಪರಾಕ್ರಮ ಗೌರವಿಸಲು ಈ ಮಾಸಕ್ಕೆ ಕಾರ್ತಿಕ ಎನ್ನುತ್ತಾರೆ. ಕಾರ್ತಿಕದಲ್ಲಿ ಸೋಮ ವಾರ ಬಹು ವಿಶೇಷ. ಸೋಮವಾರ ಶಿವನಿಗೆ ಪ್ರಿಯವಾದವಾರ. ಸೋಮವಾರದ ಅಧಿಪತಿ ಚಂದ್ರ. ಚಂದ್ರನು ಮನೋಕಾರಕ. ಮನಸ್ಸಿನ ಮೇಲೆ ಹಿಡಿತ ಸಾಧಿಸಿ ನಮ್ಮ ಉನ್ನತಿ ಮೂಡಿಸುವಾತ. ಮನೋನಿಗ್ರಹ ಉಳ್ಳವರು ಉನ್ನತೋನ್ನತ ಸ್ಥಾನಕ್ಕೆ ಏರುತ್ತಾರೆ. ಕಾರ್ತಿಕ ಮಾಸದಲ್ಲಿ ಪ್ರತಿನಿತ್ಯ ಭಗವದ್ಗೀತೆ ಪಠಿಸಿದರೆ ನರಕದಿಂದ ಮುಕ್ತಿ. ಮಾಸ ಪೂರ್ಣ ಅನ್ನದಾನ ಮಾಡಿದರೆ ಸಕಲ ಪಾಪ ನಾಶ ಎಂದಿದೆ ಸ್ಕಂದ ಪುರಾಣ.



### ಅಂತರಂಗ ಶುದ್ಧಿಗೊಳಿಸುವ ಸ್ನಾನ..

ಈಶ್ವರನು ತನ್ನ ಮಗ ಕಾರ್ತಿಕೇಯನಿಗೆ ಹೀಗೆ ಹೇಳಿದ್ದಾನೆ.

ಏಕತಃ ಸರ್ವತೀರ್ಥಾನಿ
ಸರ್ವದಾನಾನಿ ಚೈಕತಃ
ಏಕತೋ ಗೋಪ್ರದಾನಾನಿ
ಸರ್ವೇ ಯಜ್ಞಾಃ ಸದಾಕ್ಷಿಣಾಃ
ಏಕತಃ ಪುಷ್ಕರೇ ವಾಸಂ
ಕುರುಕ್ಷೇತ್ರೇ ಹಿಮಾಲಯೇ
ಏಕತೋ ಮಥುರಾತೀರ್ಥೇ
ವಾರಾಣಸ್ಯಾಂ ಚ ಶೂಕರೇ
ಏಕತಃಕಾರ್ತಿಕೋ ವತ್ಸ
ಸರ್ವದಾ ಕೇಶವಪ್ರಿಯಃ-

ಎಲ್ಲಾ ತೀರ್ಥ ಸ್ನಾನ, ಯಜ್ಞ ದಾನ ಇತ್ಯಾದಿಗಳು ಒಂದೆಡೆಯಾದರೆ ಇವುಗಳ ಎಲ್ಲ ಪುಣ್ಯ ಏಕತ್ರ ಲಭಿಸುವುದು ಎಂದರೆ ಅದು ಕಾರ್ತಿಕ ಮಾಸದ ವ್ರತ,ನಿಯಮ ಆಚರಣೆಯಿಂದ ಮಾತ್ರ ಏಕೆಂದರೆ ಇದು ಕೇಶವನಿಗೆ (ವಿಷ್ಣುವಿಗೆ) ಅತಿ ಪ್ರಿಯವಾದ ತಿಂಗಳು ಎಂದು.


ಕಾರ್ತಿಕ ಮಾಸದಲ್ಲಿ ಪವಿತ್ರ ಸ್ನಾನ ಬಹು ಪುಣ್ಯದಾಯಕ. ಸ್ನಾನ ಎಂಬುದು ಹೊರಗಿನ ಕೊಳೆಯನ್ನು ತೊಳೆದು, ಅಂತರಂಗವನ್ನು (ಮನ) ಶುದ್ಧಿ ಕಾರ್ಯಕ್ಕೆ ಅಣಿಗೊಳಿಸುವ ಪ್ರಕ್ರಿಯೆ. ಒಳಗಿರುವ ಕೋಪ, ತಾಪ, ಮದ, ಮತ್ಸರ ಸೇರಿದಂತೆ ನಕಾರಾತ್ಮಕ ಚಿಂತನೆಗಳನ್ನು ನಿರ್ಮೂಲನೆ ಮಾಡಿ ಪರಿಶುದ್ಧವಾಗಿರಿಸಿಕೊಳ್ಳಲು ಪ್ರೇರಕ. ಇದಕ್ಕಾಗಿ ಪವಿತ್ರ ನದೀ ತೀರಗಳಲ್ಲಿ ಕಾರ್ತಿಕ ಮಾಸದಲ್ಲಿ ಮಾಡುವ ಸ್ನಾನವನ್ನು ಜಲ ಚಿಕಿತ್ಸೆ ಎನ್ನುತ್ತಾರೆ ಆಯುರ್ವೇದ ಆಚಾರ್ಯರು. ಸ್ನಾನವು ದೇಹ ಶುದ್ಧಿ ಮಾಡಿದರೆ ಧ್ಯಾನ ಮನವನ್ನು ಶುದ್ಧಿ ಮಾಡುತ್ತದೆ.

ಕಾಶಿಯ ಗಂಗಾನದಿಯಲ್ಲಿ ಪುಷ್ಕರ ಅಥವಾ ನಮಗೆ ಹತ್ತಿರದ ನದಿಗಳಲ್ಲಿ ಕಾರ್ತಿಕ ಪೂರ್ಣಿಮೆ ದಿನ ಪುಣ್ಯ ಸ್ನಾನ ಮಾಡಿದರೆ ಅನಂತ ಫಲ ಲಭ್ಯವೆಂದು ನಂಬಲಾಗಿದೆ.ಧಾರ್ಮಿಕ ಚೌಕಟ್ಟಿನಲ್ಲಿ ಮಾಡುವ ಆಚರಣೆಗಳು ಆರೋಗ್ಯವನ್ನೂ ವರ್ಧಿಸುತ್ತವೆ ಎಂಬುದಕ್ಕೆ ಇದೇ ಸಾಕ್ಷಿ ಈ ಮಾಸದಲ್ಲಿ ನಿತ್ಯ 3 ಬಾರಿ ಸ್ನಾನವನ್ನು ಶಾಸ್ತ್ರದಲ್ಲಿ ಹೇಳಿದೆ. ಪುರಾಣಗಳ ಪ್ರಕಾರ ಈ ಮಾಸದಲ್ಲಿ ಭಗವಾನ್ ಶ್ರೀ ವಿಷ್ಣುವು ನಾರಾಯಣ ಎಂಬ ರೂಪದಲ್ಲಿ ಜಲದಲ್ಲಿ ವಾಸ ಮಾಡಿರುತ್ತಾನೆ ಎನ್ನಲಾಗಿದೆ. (ಕಾರ್ತಿಕ ಮಾಸವು ಶಿವನ ಆರಾಧನೆಯೊಂದಿಗೆ ವಿಷ್ಣು ಪೂಜೆಯ ಮಹತ್ವವನ್ನೂ ಬಿಂಬಿಸಿ ಸಮನ್ವಯ ಪಾಲಿಸಿದೆ) ಹಾಗಾಗಿ ಅಶ್ವಯುಜ ಕೃಷ್ಣ ಪ್ರತಿಪದೆಯಿಂದ ಕಾರ್ತಿಕ ಹುಣ್ಣಿಮೆವರೆಗೆ ಸೂರ್ಯೋದಯಕ್ಕೆ ಮೊದಲೇ ನದಿ, ಸಮುದ್ರ, ಬಾವಿ, ಕಲ್ಯಾಣಿಗಳಲ್ಲಿ ಮಾಡುವ ಸ್ನಾನ ಕಾರ್ತಿಕ ಸ್ನಾನವೆಂದೇ ಹೆಸರಾಗಿದೆ. ಈ ಸ್ನಾನದಿಂದ ಅಕ್ಷಯ ಪುಣ್ಯ ಪ್ರಾಪ್ತಿ ಎನ್ನಲಾಗಿದೆ. ದೇಹ ಹಾಗೂ ಧ್ಯಾನ ಮನವನ್ನು ಶುದ್ಧವಾಗಿಸುವ ಕಾಲವಿದು. ವಿಷ್ಣು ಸ್ಥಿತಿಕಾರಕ.ರುದ್ರ ಪ್ರಜ್ಞೆಯ ಸಂಕೇತ ಮತ್ತು ಲಯ. ಲೋಕವು ಸ್ಥಿತಿ ಮತ್ತು ಪ್ರಜ್ಞೆಯಿಂದ ಇದ್ದರೆ ನಾವು ಅಧ್ಯಾತ್ಮ ಸಾಧನೆಯತ್ತ ಹೆಜ್ಜೆ ಹಾಕಲು ಸಹಕಾರಿ. ಹಾಗಾಗಿ ಶಿವ ಮತ್ತು ವಿಷ್ಣು ಭಕ್ತರನ್ನೂ ಈ ಮಾಸವು ಸಮನ್ವಯಿಸಿ ಭಕ್ತಿ ಮಾರ್ಗಕ್ಕೆ ಕೊಂಡೊಯ್ಯುವಲ್ಲಿ ಅಗ್ರಗಣ್ಯವಾಗಿದೆ.

### ಉನ್ನತೋನ್ನತ ಜನ್ಮ ಪಡೆಯಿರಿ :

ಕಾರ್ತಿಕ ಸೋಮವಾರಗಳಂದು ಶಿವ ಸನ್ನಿಧಾನಗಳಲ್ಲಿ ನಡೆಯುವ ದೀಪೋತ್ಸವ ಹೊಸ, ಹೊಸ ಆಲೋಚನೆಗಳಿಗೆ, ಚಿಂತನೆಗಳಿಗೆ, ಶುಭ ಕಾರ್ಯಗಳಿಗೆ ದಾರಿಯನ್ನು ತೋರಿಸುವಲ್ಲಿ ಪ್ರಧಾನವಾಗಿದೆ. ಕೀಟ, ಸಸ್ಯ, ಸೇರಿದಂತೆ ವಿಶ್ವದ ಎಲ್ಲ ಜೀವಿ, ವಸ್ತುಗಳೂ ಶಿವನ ಕೃಪೆಯಿಂದ ಬೆಳಕನ್ನು ನೋಡಿ ಉನ್ನತೋನ್ನತ ಜನ್ಮ ಪಡೆಯಲಿಕ್ಕಾಗಿಯೇ ಮುಂದೆ ಮುಂದೆ ಸಾಗುತ್ತವೆ. ಇದನ್ನು ಈ ಶ್ಲೋಕ ಧ್ವನಿಸುತ್ತದೆ.

ಕಾರ್ತಿಕ್ಯಾಂ ಪೂರ್ಣಿಮಾಯಾಂ
ತು ಕುರ್ಯಾತ್ರ್ಯೈ ಪುರುಮುತ್ಸವಂ
ದೀಪೋ ದೇಯೋಯವಶ್ಯಮೇವ
ಸಾಯಂಕಾಲೇ ಶಿವಾಲಯೇ
ದದದ್ದೀಪಂ ಪೂರ್ಣಿಮಾಯಾಂ
ಸರ್ವಪಾಪೈಃ ಪ್ರಮುಚ್ಯತೇ



### ದೀಪಾರಾಧನೆ ಮಾಡಿದರೆ ಸಕಲ ಸಂಪತ್ತು ಲಭ್ಯ :

ಚಂದ್ರನು ಕೃತ್ತಿಕಾ ನಕ್ಷತ್ರದಲ್ಲಿ ಇರುವುದರಿಂದ ಈ ಮಾಸಕ್ಕೆ ಕಾರ್ತಿಕಮಾಸ ಎಂದೇ ಹೆಸರು ಬಂತು.ಬೆಳಕಿನ ಮಾಸವು ಇಡೀ ವರ್ಷದಲ್ಲಿ ಅತ್ಯಂತ ವೈಭವದ ತಿಂಗಳು. ಹತ್ತು ಹಲವು ಪೂಜೆಗಳು. ವ್ರತ-ಕತೆ, ಆಚರಣೆಗಳು ಉಪವಾಸ ಮತ್ತು ವನ ಭೋಜನಗಳು (ಧಾತ್ರಿ ಹವನ) ಇಡೀ ಮಾಸವನ್ನು ಗರಿಷ್ಠ ಭಕ್ತಿ ಭಾವದಲ್ಲಿ ಮಿಂದೇಳಿಸುತ್ತವೆ. ಹಾಗಾಗಿ ಸಕಲ ರೀತಿಯಲ್ಲಿ ಕಾರ್ತಿಕಮಾಸ ಸಾಧನೆಯ ಮಾರ್ಗದತ್ತ ಸಾಗಲು ರಹದಾರಿಯಾಗಿದೆ.

ಈ ಸಂದರ್ಭದಲ್ಲಿ ದೀಪಾರಾಧನೆ ಮಾಡಿದರೆ ಐಶ್ವರ್ಯ, ಸಂಪತ್ತು, ಆರೋಗ್ಯ ಭಾಗ್ಯ, ನಮಗೆ ಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆಯಿದೆ. ಈ ಕಾರಣಕ್ಕೆ ಮಠ, ದೇವಾಲಯ, ಮಂದಿರಗಳಲ್ಲಿ ಮನೆ ಮನೆಗಳಲ್ಲಿ ಕಾರ್ತಿಕ ದೀಪೋತ್ಸವ ಅತ್ಯಂತ ವಿಜೃಂಭಣೆಯಿಂದ ಸಂಪನ್ನಗೊಳ್ಳುತ್ತದೆ.

### ಕಣ್ಣಿಗೆ ಕಾಣುವ ದೊಡ್ಡ ಹಬ್ಬ

ಕತ್ತಲು ಎಂದರೆ ತಮೋಗುಣ. ಕತ್ತಲು ಎಂದರೆ ಅಜ್ಞಾನ. ಬೆಳಕು ಎಂದರೆ ಸತ್ವಗುಣ

ಬೆಳಕು ಎಂದರೆ ಜ್ಞಾನ ಕತ್ತಲನ್ನು ಮನೆಯಿಂದ ಓಡಿಸಬೇಕು, ಮನದಿಂದಲೂ ಈ ಎರಡೂ ಕತ್ತಲನ್ನು ಓಡಿಸುವ ಹಬ್ಬವೇ ದೀಪಾವಳಿ.

ಎಲ್ಲ ಹಬ್ಬಗಳೂ ಒಂದಿಲ್ಲೊಂದು ಧಾರ್ಮಿಕ ಆಚರಣೆ ಮೂಲಕ ಗಮನ ಸೆಳೆದರೆ ಹಬ್ಬಗಳ ರಾಜನಾದ ದೀಪಾವಳಿ ಎಲ್ಲ ವಯೋಮಾನದವರಿಗೂ ಕಣ್ಣಿಗೆ ಕಾಣುವ ಹಬ್ಬ. ನಾಡಿನ ಸಂಸ್ಕೃತಿ ಮತ್ತು ದೀಪಾವಳಿ ಹಬ್ಬದ ಮಧುರ ಸಂಬಂಧವನ್ನು ವಿವೇಚಿಸ ಹೊರಟರೆ ನಮ್ಮ ಅರಿವಿಗೆ ಬರುವುದೇ ಮಾನವ ಸಂಸ್ಕೃತಿ ಒಳಗೊಂಡ ಜಾನಪದ ಸೊಗಸಿನ ಹಲವು ಮುಖ. ಪ್ರಾದೇಶಿಕವಾಗಿ ಒಂದಿಷ್ಟು ವ್ಯತ್ಯಾಸ ಅಲ್ಲಲ್ಲಿ ಕಂಡುಬಂದರೂ ನಾಡಿನಾದ್ಯಂತ ಈ ಮುಖಗಳ ನಡುವೆ ಸಮಾನ ಬಂಧುತ್ವವಿದೆ. ಎಲ್ಲ ಕಡೆ ಇದು ನೆಲದ ಹಬ್ಬ. ಹೊಲದ ಹಬ್ಬ. ಕುಲದ ಹಬ್ಬ. ಎಲ್ಲ ಕಡೆ ಇದು ಲಕುಮಿಯನ್ನು ಪೂಜಿಸುವ ಹಬ್ಬ. ಲಕ್ಷ್ಮೀ ಎಂದರೆ ಸಂಪತ್ತು. ಸೌಭಾಗ್ಯ ಮತ್ತು ಸಂಭ್ರಮಗಳನ್ನು ಬದುಕಿನ ಎಲ್ಲದರಲ್ಲೂ ಕಾಣುವ ಹಬ್ಬ. ಪುಟ್ಟ ಹಣತೆ ಹಬ್ಬ ಬೆಳಕಿಗೆ ನಾಂದಿಯಾಗಲಿ ಎಂಬ ಸಾಂಸ್ಕೃತಿಕ ಸಂದೇಶ ಗಳನ್ನು ಹೊತ್ತು ಬರುವ ದೀಪಾವಳಿ ಒಂದು ಒಳ ನೋಟದ ಸಂಭ್ರಮದ ಆಚರಣೆಯೇ ಆಗಿದೆ.

### ದೇವರು ಏಳುವ ಸಂದರ್ಭ:

ಆಷಾಢ ಶುಕ್ಲ ಏಕಾದಶಿಯಂದು (ಶಯನೀ) ಮಹಾವಿಷ್ಣು ನಿದ್ರೆಗೆ ಜಾರುತ್ತಾನೆ. ಕಾರ್ತಿಕ ಏಕಾದಶಿಯಂದು ಏಳುತ್ತಾನೆ ಎನ್ನುವುದು ಪುರಾಣ ಪ್ರಣೀತ ನಂಬಿಕೆ. ದೇವರು ನಿದ್ರೆಯಿಂದ ಎಚ್ಚರವಾಗುವುದನ್ನು ಸೂಚಿಸುವ ಕಾರಣಕ್ಕಾಗಿ ಈ ದಿನವನ್ನು ಪ್ರಬೋಧಿನಿ ಏಕಾದಶಿ ಎಂದು ಕರೆಯುತ್ತಾರೆ. ಪ್ರಬೋಧಿನಿ ಏಕಾದಶಿಯಂದು ಪ್ರಾರಂಭವಾಗುವ ಬಹುತೇಕ ಜಾತ್ರೆ-ಉತ್ಸವಾದಿಗಳು ಕಾರ್ತಿಕ ಹುಣ್ಣಿಮೆಯಂದು ಸಮಾಪನಗೊಳ್ಳುತ್ತವೆ. ಕಾರ್ತಿಕ ಮಾಸದಲ್ಲಿ ವಿಷ್ಣು ನಿದ್ರೆಯಿಂದ ಎಚ್ಚೆತ್ತು ಸೃಷ್ಟಿಯ ಮೇಲೆ ಕೃಪೆ ತೋರುತ್ತಾನೆ. ಈತನೊಂದಿಗೆ ಲಕ್ಷ್ಮಿಯೂ ಭಕುತರ ಮನೆ ಮನೆಗೆ ಆಗಮಿಸಿ ಅನುಗ್ರಹಿಸುತ್ತಾಳೆ. ಸುಖ-ಸಂಪತ್ತು ನೀಡುತ್ತಾಳೆ. ಶಿವ-ವಿಷ್ಣು ಪೂಜೆಯೊಂದಿಗೆ ಲಕ್ಷ್ಮೀ ಆರಾಧನೆಯೂ ಕಾರ್ತಿಕದಲ್ಲಿ ವರಪ್ರದ.

### ಹುಣ್ಣಿಮೆ ಬಹು ಪ್ರಧಾನ

ಕಾರ್ತಿಕ ಪೂರ್ಣಿಮಾ (ಕಾರ್ತಿಕ ಹುಣ್ಣಿಮೆ) ದಿನವು ಈ ಮಾಸದ 15 ನೇ ದಿನ. ಇದು ಸಮಸ್ತ ಹಿಂದೂಗಳ ಪವಿತ್ರ ದಿನ. ಇದನ್ನು ತ್ರಿಪುರ ಹುಣ್ಣಿಮೆ ಎಂದೂ ಕರೆಯುತ್ತಾರೆ. ಇಂದು ಚಂದ್ರನ ಬೆಳಕು ಎಂದಿಗಿಂತಲೂ ಪ್ರಕಾಶಮಾನ. ಚಂದ್ರ ಭೂಮಿಗೆ ಸಮೀಪದಲ್ಲಿರುತ್ತಾನೆ. ಶಿವನ ಆರಾಧನೆಗೆ ಮೀಸಲಾಗಿರುವ ಹಬ್ಬಗಳಲ್ಲಿ ಮಹಾಶಿವರಾತ್ರಿಯ ನಂತರದ ಏಕ ಮಾತ್ರ ಹಬ್ಬ ಎಂದರೆ ಅದು ತ್ರಿಪುರ ಪೂರ್ಣಿಮೆ. ಶಿವನು ತ್ರಿಪುರಾಸುರ ಎಂಬ ರಾಕ್ಷಸನನ್ನು ಸಂಹಾರ ಮಾಡಿದ ದಿನ. ಈ ರಾಕ್ಷಸ ಸಕಲ ದೇವತೆಗಳನ್ನು ಸೋಲಿಸಿ ಅಂತರಿಕ್ಷದಲ್ಲಿ 3 ನಗರ (ತ್ರಿಪುರ ) ನಿರ್ಮಿಸಿದ್ದ. ಶಿವನು ರಾಕ್ಷಸನನ್ನು ವಧಿಸಿ ತ್ರಿಪುರಗಳನ್ನೂ ನಾಶ ಮಾಡಿದ ದಿನದಂದು ದೇವತೆಗಳು ಬೆಳಕಿನ ಹಬ್ಬವಾಗಿ ಸಂಭ್ರಮಿಸಿದರು. ಅಂದಿನ ಆಚರಣೆಯನ್ನು ದೇವ-ದೀಪಾವಳಿ ಎಂದೇ ಕರೆಯುತ್ತಾರೆ. ಕಾರ್ತಿಕ ಹುಣ್ಣಿಮೆ ದಿನವೇ ವಿಷ್ಣುವು ಮತ್ಸ್ಯ ಅವತಾರ ಮಾಡಿದ. ಶಿವನ ಪುತ್ರನಾದ ಕಾರ್ತಿಕೇಯನ ಜನ್ಮದಿನವೂ ಆಗಿದೆ. ರಾಧಾ-ಕೃಷ್ಣರು ರಾಸ ನೃತ್ಯ ಆಡಿದ ದಿನವೆಂದು ನಂಬಲಾಗಿದೆ. ವಿಶ್ವದೆಲ್ಲೆಡೆ ದೇವಸ್ಥಾನಗಳಲ್ಲಿ ಇಂದು ರಾತ್ರಿ ಪೂರ್ಣ ದೀಪೋತ್ಸವ. ದೀಪದಾನ ನೀಡುವ ಸಂಪ್ರದಾಯವೂ ಇದೆ. ಇದರಿಂದ ಮಾನವರು ಮಾತ್ರವಲ್ಲ,ಸಕಲ ಜೀವಿಗಳೂ ಜಲಚರಗಳೂ ಮೋಕ್ಷ ಹೊಂದುತ್ತವೆ ಎಂದು ನಂಬಲಾಗಿದೆ.

### ಬೆಳಗುವುದೇ ಮುಖ್ಯ ಧ್ಯೇಯ :

ದೀಪಗಳ ಒಡಲಲ್ಲಿ ಅಡಗಿರುವುದೇ ಬೆಳಕೆಂಬ ಸಂಭ್ರಮ. ಸಂಭ್ರಮದೊಂದಿಗೆ ಬೆರೆತು ಬೆಳೆಯುವುದೆ ನಾಡಿನ ಸಂಸ್ಕೃತಿ. ಹಾಗಾಗಿ ದೀಪಾವಳಿ ಸಂಸ್ಕೃತಿ-ಸಂಭ್ರಮಗಳ ಸಂಗಮ. ಹಣತೆಯ ಅಂತರಂಗದಲ್ಲೂ ಬೆಳಕೆಂಬ ಸಂಭ್ರಮ ಅಡಗಿದೆ. ಇಂತಹಾ ಸಂಭ್ರಮವನ್ನು ನಮ್ಮ ಅಂತರಾಳದಲ್ಲೂ ಚಿಗುರಿಸಿಕೊಂಡು ಪ್ರಗತಿ ಹೊಂದುವುದು ಸಂಸ್ಕೃತಿ ಪ್ರತೀಕ ಸಂಸ್ಕೃತಿಯ ಸರಳ ಸೌಂದರ್ಯವನ್ನು ಇನ್ನಷ್ಟು ಬೆಳಗಿಸುವುದು ಅರಳಿಸುವುದು, ಸೊಬಗಾಗಿಸುವುದೇ ಕಾರ್ತಿಕ ಮಾಸದ ಧ್ಯೇಯವಾಗಿದೆ.



### ಸಾಲು ಸಾಲು.... ಆಚರಣೆಗಳು :

ಅಜ್ಞಾನವೆಂಬ ಕತ್ತಲನ್ನು ಹೊಡೆದೋಡಿಸುವ ದೀಪಾವಳಿ ಬಂತೆಂದರೆ ಎಲ್ಲರಿಗೂ ಸಡಗರ ಸಂಭ್ರಮ. ದೊಡ್ಡವರು ಅಭ್ಯಂಗ ಸ್ನಾನ, ಸಿಹಿ ತಿನಿಸುಗಳನ್ನು ಸವಿದು ಸಂಭ್ರಮಿಸಿದರೆ ಪುಟಾಣಿ ಮಕ್ಕಳಿಗೆ ಪಟಾಕಿ ಹೊಡೆದು ಸಂಭ್ರಮಿಸುವ ಆನಂದ. ನೂತನ ದಂಪತಿಗಳಿಗಂತೂ ಮಾವನ ಮನೆಯಲ್ಲಿ ಆದರಾತಿಥ್ಯ. ನರಕಚತುರ್ದಶಿಯಿಂದ ಬಲಿಪಾಡ್ಯಮಿಯವರೆಗೆ ಮೂರು ದಿನ ಹಬ್ಬ. ನಂತರ ಭಾವನ ಬಿದಿಗೆ, ಅಕ್ಕನ ತದಿಗೆ. ಹೀಗೆ ತುಳಸೀ ಕಾರ್ತೀಕದವರೆಗೂ ಒಂದಿಲ್ಲೊಂದು ಹಬ್ಬವೋ ಹಬ್ಬ.

### ಅಭ್ಯಂಗ ಸ್ನಾನ ಪ್ರಧಾನ:

ಶ್ರೀ ಕೃಷ್ಣನು ನರಕಾಸುರನನ್ನು ಸಂಹರಿಸಿ 16 ಸಾವಿರ ನಾರಿಯರನ್ನು ಸಂರಕ್ಷಿಸಿದ ಹಿನ್ನೆಲೆಯಲ್ಲಿ ಆಚರಿಸುವ ನರಕ ಚತುರ್ದಶಿ ಇದು ಜ್ಞಾನಕ್ಕೂ-ಧರ್ಮಕ್ಕೂ ಜಯ ದೊರೆತ ದಿನ.



ಅಂದು ನಸುಕಿನಲ್ಲೆ ಎದ್ದು ಅಭ್ಯಂಗ ಸ್ನಾನ ಮಾಡಿ ದೇವರಿಗೆ ಭಕ್ತಿಯಿಂದ ನಮಿಸುತ್ತಾರೆ. ಯತಿಗಳು ಸಹಾ ಅಂದು ಅಭ್ಯಂಗ ಮಾಡುವುದು ವಿಶೇಷ. **"ಉಂಡಿದ್ದೇ ಉಗಾದಿ, ಮಿಂದದ್ದೇ ದೀಪಾವಳಿ"** ಎಂಬ ಗಾದೆ ಮಾತಿನಂತೆ ಇಲ್ಲಿ ಅಭ್ಯಂಜನಕ್ಕೆ ಪ್ರಥಮಾದ್ಯತೆ. ಚಳಿಗಾಲವಾದರಿಂದ ಚರ್ಮಒಡೆಯುವ ಪ್ರಸಂಗವೇ ಹೆಚ್ಚು. ತೈಲ ಲೇಪನದಿಂದ ದೇಹ ಕಾಂತಿಯುತವಾಗುತ್ತದೆ. ಮನಸ್ಸುಪ್ರಫುಲ್ಲವಾಗುತ್ತದೆ. ಹಾಗಾಗಿ ಎಣ್ಣೆ ಸ್ನಾನ ಮಾಡುವುದರ ಹಿಂದೆ ಆರೋಗ್ಯಪಾಲನೆಯ ಸೂತ್ರವೂ ಅಡಗಿದೆ.

### ವ್ಯಾಪಾರಿಗಳಿಗೆ ಹೊಸ ಲೆಕ್ಕದ ಆರಂಭ :

ದೀಪಾವಳಿಯ ಎರಡನೇ ದಿನವಾದ ಅಮಾವಾಸ್ಯೆಯಂದು ಎಲ್ಲೆಡೆ ಲಕ್ಷ್ಮಿ ಪೂಜೆ ಸಂಭ್ರಮ. ಅಂಗಡಿ ಮುಂಗಟ್ಟುಗಳ ಮಾಲೀಕರು ಅಂಗಡಿಯನ್ನು ಸಿಂಗರಿಸಿ ಸಂಭ್ರಮ ಸಡಗರದಿಂದ ಲಕ್ಷ್ಮೀಪೂಜೆ ಮಾಡುತ್ತಾರೆ.

ಗೋಧೂಳಿ ಲಗ್ನದಲ್ಲಿ ಲಕ್ಷ್ಮೀ ಪೂಜೆ ಮಾಡುವ ಮೂಲಕ ಸಿರಿ ಸಂಪತ್ತು ಸಮೃದ್ಧಿಗೆ ಲಕ್ಷ್ಮೀದೇವಿಯಲ್ಲಿ ಪ್ರಾರ್ಥನೆ ಮಾಡುತ್ತಾರೆ. ವ್ಯಾಪಾರಿಗಳ ಹೊಸ ಲೆಕ್ಕಾಚಾರ ಆರಂಭವಾಗುವುದೇ ದೀಪಾವಳಿಯಿಂದ.

### ತ್ಯಾಗದ ಸಂಕೇತ ಬಲಿಪಾಡ್ಯಮಿ :

ದಾನಶೂರ ಬಲಿ ಚಕ್ರವರ್ತಿಯ ಬಳಿ ಬಂದ ವಾಮನ ಸ್ವರೂಪಿ ಪರಮಾತ್ಮ ಮೂರು ಪಾದಗಳಷ್ಟು ಜಾಗ ಕೇಳಿದಾಗ ಒಂದು ಹೆಜ್ಜೆಯನ್ನು ಭೂಮಿಯ ಮೇಲೂ, ಇನ್ನೊಂದು ಹೆಜ್ಜೆಯನ್ನು ಆಕಾಶದ ಮೇಲೂ ಇಟ್ಟಾಗ ಉಳಿದೊಂದು ಹೆಜ್ಜೆಯನ್ನು ತನ್ನ ತಲೆಯ ಮೇಲೆ ಇರಿಸಿಕೊಂಡ ಹೆಗ್ಗಳಿಕೆ ಬಲಿ ಚಕ್ರವರ್ತಿಯದು. ಬಲಿಯ ತ್ಯಾಗದ ಸಂಕೇತವಾಗಿ ಆಚರಿಸಲಾಗುವ ಬಲಿಪಾಡ್ಯಮಿಯನ್ನು ಆಚರಿಸುವುದೇ ಬಲಿಪಾಡ್ಯ. ಆ ಮೂಲಕ ಅವರನ್ನು ಸ್ಮರಿಸುವುದು ಸಂಪ್ರದಾಯ.

ಪ್ರತಿ ಮನೆಗಳಲ್ಲೂ ಸಗಣಿಯಲ್ಲಿ ಆ ಮೂಲಕ ಬಲೀಂದ್ರನನ್ನು ಸ್ಮರಿಸುವುದು ಸಂಪ್ರದಾಯವಾಗಿದೆ. ಇಟ್ಟು ಪೂಜಿಸುವ ಮೂಲಕ ಬಲಿ ಚಕ್ರವರ್ತಿಗೆ ಗೌರವಾದರ ಸಮರ್ಪಿಸಲಾಗುತ್ತದೆ. ವರ್ಷವಿಡೀ ನಮಗಾಗಿ ದುಡಿಯುವ ದನಕರುಗಳಿಗೂ ಕೃತಜ್ಞತೆ ಸಲ್ಲಿಸಲು ದೀಪಾವಳಿಯಂದು ಅವುಗಳಿಗೆ ಸಿಂಗರಿಸಿ, ಪೂಜೆ ಮಾಡಲಾಗುತ್ತದೆ.

### ಗ್ರಾಮೀಣ ಪ್ರದೇಶದಲ್ಲಿ ದನ ಬೆದರಿಸುವ ಆಚರಣೆ :

ಗ್ರಾಮೀಣ ಪ್ರದೇಶದಲ್ಲಿ ಕಿಚ್ಚು ಹಾಯಿಸುವ ಮೂಲಕ ದೀಪಾವಳಿಯನ್ನು ಸಂಭ್ರಮಿಸಲಾಗುತ್ತದೆ. ಉತ್ತರ-ಮಧ್ಯಕರ್ನಾಟಕದ ಅನೇಕ ಕಡೆ ಪಾಡ್ಯದ ನಂತರ 15-20 ದಿನದವರೆಗೂ ದನ ಬೆದರಿಸುವ ಹಬ್ಬ ಅಥವಾ ಹೋರಿ ಹಬ್ಬವು ವಿವಿಧ ಕೇರಿಗಳಲ್ಲಿ ಸಂಭ್ರಮಿಸುತ್ತದೆ. ಬಲವಾದ ಹೋರಿಯನ್ನು ಸ್ಪರ್ಧೆಯಲ್ಲಿ ಹಿಡಿದು ನಿಲ್ಲಿಸಿದವರಿಗೆ ಹಣ,ಬೆಳ್ಳಿ, ಬಂಗಾರ, ಜಮೀನು ಇತ್ಯಾದಿಗಳನ್ನು ಬಹುಮಾನವಾಗಿ ನೀಡುವ ಸಂಪ್ರದಾಯವಿದೆ.

# ತಿರುಮಲ ತಿರುಪತಿ ದೇವಸ್ಥಾನಗಳು, ತಿರುಪತಿ

## ತಿರುಮಲೆಯಲ್ಲಿ ಭಕ್ತರು ಮಾಡಬೇಕಾದವು :

☑ ತಿರುಮಲೆಗೆ ಬರುವ ಮುನ್ನ ನಿಮ್ಮ ಇಷ್ಟ ಅಥವಾ ಕುಲದೈವವನ್ನು ಪೂಜಿಸಿರಿ.
☑ ಶ್ರೀ ವೆಂಕಟೇಶ್ವರ ಸ್ವಾಮಿಯನ್ನು ದರ್ಶಿಸುವ ಮೊದಲು ಸ್ವಾಮಿಪುಷ್ಕರಿಣಿಯಲ್ಲಿ ಸ್ನಾನಮಾಡಿ, ಅಲ್ಲಿಯೇ ಇರುವ ಶ್ರೀ ವರಾಹಸ್ವಾಮಿಯನ್ನು ದರ್ಶಿಸಿರಿ.
☑ ಆಲಯದ ಒಳಗಡೆ ಗಂಭೀರ ಮೌನವನ್ನು ಪಾಲಿಸಿರಿ ಮತ್ತು ಮನಸ್ಸಿನಲ್ಲಿ "ಓಂ ನಮೋ ವೇಂಕಟೇಶಾಯ" ಎಂದು ಜಪಿಸಿರಿ.
☑ ಆಲಯದ ಒಳಗಡೆ ಸ್ವಾಮಿಯಲ್ಲಿ ಮನಸ್ಸನ್ನು ಕೇಂದ್ರೀಕರಿಸಿ.
☑ ತಿರುಮಲೆಯಲ್ಲಿ ಪಾಪನಾಶಿನಿಯಲ್ಲೂ, ಆಕಾಶಗಂಗೆಯಲ್ಲೂ ಸ್ನಾನಮಾಡಿರಿ. ಮತ್ತು ಅಂಜನಾದ್ರಿ ಆಂಜನೇಯ ಸ್ವಾಮಿಯವರ ದರ್ಶನ ಪಡೆಯಿರಿ.
☑ ತಿರುಮಲೆಗೆ ಬಂದಾಗ ಸನಾತನ ಸಂಪ್ರಾದಯಗಳನ್ನು, ಆಚಾರ ವ್ಯವಹಾರಗಳನ್ನು ಗೌರವಿಸಿ.
☑ ತಮ್ಮ ಕಾಣಿಕೆಗಳನ್ನು ಹುಂಡಿಯಲ್ಲಿ ಮಾತ್ರವೇ ಸಮರ್ಪಿಸಿ.
☑ ತಿರುಮಲೆಯನ್ನು ಶುಭ್ರವಾಗಿ ಶುದ್ಧವಾಗಿ ಇಡಲು ಸಹಕರಿಸಿ.ಬಯೋಡಿಗ್ರೇಡಬಲ್ ಪ್ಲಾಸ್ಟಿಕ್ ಕವರಗಳನ್ನು ಮಾತ್ರವೇ ಬಳಸಿರಿ.

## ತಿರುಮಲೆಯಲ್ಲಿ  ಭಕ್ತರು ಮಾಡಬಾರದವು :

☒ನಾಲ್ಕು ಮಾಢಬೀಧಿಗಳಲ್ಲಿ ಪಾದರಕ್ಷೆಗಳನ್ನು ಧರಿಸಿ ಓಡಾಡಬಾರದು.
☒ತಮ್ಮೊಂದಿಗೆ ಹೆಚ್ಚಿನ ಹಣ, ಆಭರಣಗಳನ್ನು ತರಬೇಡಿ.
☒ದೇವರನ್ನು ಸೇವಿಸುವುದರ ಹೊರತು ಬೇರೆ ಯಾವ ಕಾರಣಕ್ಕೂ ತಿರುಮಲೆಗೆ ಬಾರದಿರಿ.
☒ದೇವರ ದರ್ಶನಕ್ಕಾಗಿ ನೂಕುನುಗ್ಗುಲು ಮಾಡದಿರಿ.
☒ಸಂಪ್ರದಾಯದಂತೆ ಆಲಯ ಪ್ರವೇಶ ನಿಷೇಧವಿದ್ದಲ್ಲಿ ಆಲಯ ಪ್ರವೇಶ ಮಾಡದಿರಿ.
☒ತಿರುಮಲೆಯಲ್ಲಿ ಹೂವು ಮುಡಿಯದಿರಿ.ಎಲ್ಲ ಹೂವುಗಳೂ ದೇವರಿಗೇ.
☒ನೀರು, ವಿದ್ಯುತ್‌ಗಳು ಪೋಲು ಮಾಡದಿರಿ.
☒ಅಪರಿಚಿತರಿಗೆ ನಿಮ್ಮ ಕೋಣೆಯ ಬೀಗದ ಕೈಗಳನ್ನು ನೀಡದಿರಿ, ಅವರನ್ನು ನಿಮ್ಮ ಕೊಠಡಿಗೆ ಸೇರಿಸದಿರಿ.
☒ಪ್ಲಾಸ್ಟಿಕ್ ನೀರಿನ ಬಾಟಲ್‌ಗಳನ್ನು ಮತ್ತು ಕವರ್‌ಗಳನ್ನು ಬಳಸಬಾರದು.

## ತಿರುಮಲೆಯಲ್ಲಿ ಭಕ್ತರು ನಿಷೇಧಿತ ಪದಾರ್ಥಗಳು : ( ನಿಷೇಧಿಸಿದವು)

✖ ತಿರುಮಲೆಯಲ್ಲಿ ಧೂಮಪಾನ,ಮಧ್ಯಪಾನ,ಮಾಂಸಾಹಾರ ಮೊದಲಾದವುಗಳನ್ನು ನಿಷೇಧಿಸಲಾಗಿದೆ.
✖ ಸ್ವಾಮಿಯವರ ದರ್ಶನಕ್ಕಾಗಿ, ವಸತಿಗಾಗಿ, ಪ್ರತ್ಯೇಕ ಪ್ರವೇಶಕ್ಕಾಗಿ ದಳ್ಳಾಳಿಗಳನ್ನು ಆಶ್ರಯಿಸಬೇಡಿರಿ.
✖ ಬೀದಿವ್ಯಾಪಾರಿಗಳಿಂದ  ನಕಲೀ ಪ್ರಸಾದ ಕೊಳ್ಳಬೇಡಿ.
✖ ದೇವಾಲಯದಲ್ಲಿ ಉಗುಳುವುದು ಮುಂತಾದವುಗಳನ್ನು ಮಾಡಬಾರದು.
✖ ಅನ್ಯಮತ ಪ್ರಚಾರ ನಿಷೇಧಿಸಲಾಗಿದೆ.
✖ ವಿವಿಧ ರಾಜಕೀಯ ಸಭೆ, ಬ್ಯಾನರು, ಧರಣಿ, ರಾಸ್ತಾರೋಕೋ, ಹರತಾಳ -  ಮೊದಲಾದವುಗಳನ್ನು ನಿಷೇಧಿಸಲಾಗಿದೆ.
✖ ಯಾವುದೇ ರೂಪದಲ್ಲಿ ಜೂಜಾಡುವುದನ್ನು ನಿಷೇಧಿಸಲಾಗಿದೆ.
✖ ಆಲಯದಲ್ಲಿ ಸೆಲ್‌ಫೋನ್, ಕ್ಯಾಮರಾ, ಮತ್ತಿತರ ವಿದ್ಯುತ್ ಚಾಲಿತ ಉಪಕರಣಗಳನ್ನು ನಿಷೇಧಿಸಲಾಗಿದೆ.
✖ ಜಂತುವಧೆ ನಿಷೇಧ.
✖ ಭಿಕ್ಷುಕರನ್ನು ಪ್ರೋತ್ಸಾಹಿಸದಿರಿ.

**ಕಾರ್ಯನಿರ್ವಹಣಾಧಿಕಾರಿ**

# ಶ್ರೀ ವೆಂಕಟಾಚಲ ಮಹಾತ್ಮ್ಯ

ತೆಲುಗು ಮೂಲ – ಆಚಾರ್ಯ ಕೆ. ಸರ್ವೋತ್ತಮ ರಾವ್
ಅನುವಾದ – ಶ್ರೀಮತಿ. ಎನ್. ಪಾರ್ವತಿ

ಕಳೆದ ಸಂಚಿಕೆಯಿಂದ

"ಓ ದೇವಾ! ನಿನ್ನ ಚಕ್ರಾಯುಧದ ಮಹಿಮೆಯನ್ನು ವರ್ಣಿಸಲು ಬ್ರಹ್ಮದೇವರು ಕೂಡ ಅಶಕ್ತನು ಅಂಬರೀಷಾದಿಯರು ರಕ್ಷಿಸಿದವನು ನೀನೇ ಅದಲ್ಲದೆ ಚಕ್ರಾಯುಧದಿಂದ ಕೊಲ್ಲಲ್ಪಟ್ಟವರಿಗೆ ಪುನರ್ಜನ್ಮ ಇಲ್ಲವೆಂದು ಕೇಳಿದ್ದೇನೆ. ಆದ್ದರಿಂದ ನಿನ್ನ ಚಕ್ರಾಯುಧದಿಂದ ನನ್ನ ದೇಹವನ್ನು ತುಂಡರಿಸುವುದೇ ಉತ್ತಮ. ಆದರೂ, ಸ್ವಾಮಿ! ನನ್ನದೊಂದು ಸಣ್ಣ ವಿನಂತಿ ಇದೆ".

ಈ ಪರ್ವತವೇ ನನ್ನ ಸರ್ವಸ್ವವೆಂದು ತಿಳಿದು ಇಲ್ಲಿ ವಾಸಿಸುತ್ತಿದ್ದೆ. ಈ ಪರ್ವತದ ಸುತ್ತಲಿನ ಪವಿತ್ರ ನೀರಿನಲ್ಲಿ ಪವಿತ್ರ ಸ್ನಾನ ಮಾಡಿದ್ದೇನೆ. ಇಲ್ಲಿ "ಕರಾಳನಾರಸಿಂಹ" ಮಂತ್ರ ಜಪವನ್ನೂ ಮಾಡುತ್ತಿದ್ದೆ. ಕೊನೆಗೆ ನಾನು ನಿಮ್ಮೊಂದಿಗೆ ಹೋರಾಡಿದೆ ಭೌತಿಕವಾಗಿ ನಾನು ದೇಹ ತ್ಯಾಗ ಮಾಡಿದ ಮೇಲೆ ಈ ಪರ್ವತವು ನನ್ನ ಹೆಸರಿನಲ್ಲಿ ಪ್ರಸಿದ್ಧವಾಗಬೇಕೆಂದು ನನ್ನ ಆಸೆ.ಎಂದು ಹೇಳಿದನು. ಭಗವಂತ ಒಪ್ಪಿ ವೃಷಭಾಸುರನಿಗೆ ಮುಕ್ತಿ ನೀಡಿದನು. ಆ ಸಮಯದಲ್ಲಿ ದೇವತೆಗಳು ಹೂ ಮಳೆಯನ್ನು ಸುರಿಸಿದರು. ಗುಹೆಗಳಲ್ಲಿ ಅಡಗಿಕೊಂಡಿದ್ದ ಋಷಿಗಳು ಹೊರಬಂದು ಭಗವಂತನನ್ನು ಸ್ತುತಿಸಿದರು ಆಗ ಸ್ವಾಮಿಯು,



"ಮುನಿಗಳೇ ಈಗ ನೀವು ಪರ್ವತ ಪ್ರದೇಶಗಳಲ್ಲಿ ನಿರ್ಭಯದಿಂದ ಓಡಾಡಬಹುದು. ನಿಮ್ಮ ಜಪತಪಾದಿಗಳಿಗೆ ಯಾವುದೇ ಅಡೆತಡೆಗಳು ಇರುವುದಿಲ್ಲ." ಎಂದು ಅವರಿಗೆ ಅಭಯವನ್ನಿತ್ತು ಅಂತರ್ಧಾನನಾದನು.

ಶತಾನಂದರು ಈ ಕಥೆಯನ್ನು ಜನಕನಿಗೆ ಹೇಳಿದಾಗ, ಅವರು ತುಂಬಾ ಕುತೂಹಲದಿಂದ "ಋಷಿವರ್ಯರೇ! ವೃಷಭಾದ್ರಿ ಎಂಬ ಹೆಸರಿನ ಕಾರಣ ತಿಳಿಯಿತು. ಈ ಬೆಟ್ಟಕ್ಕೆ ಅಂಜನಾದ್ರಿ ಎಂಬ ಹೆಸರು ಬರಲು ಕಾರಣವೇನು?" ಎಂದು ಕೇಳಿದನು. ಋಷಿ ಸಂತೋಷದಿಂದ "ನಾನು ನಿಮಗೆ ಅದನ್ನೂ ಹೇಳುತ್ತೇನೆ"ಎಂದನು.

ಕೇಸರಿಯ ವನಚರೋತ್ತಮನು. ಈತನ ಪತ್ನಿ ಅಂಜನಾ ಆ ತಾಯಿಯು ಮಾತಂಗಮುನಿಯ ಬಳಿಗೆ ಹೋಗಿ "ಋಷಿಗಳೇ! ಪುತ್ರರಿಲ್ಲದವರಿಗೆ ಯಾವುದೇ ಸದ್ಗತಿಯಿಲ್ಲ ಎಂದು ಹೇಳಲಾಗುತ್ತದೆ. ನಾನು ಪುತ್ರ ವಿರಹಿತಳು. ಒಬ್ಬ ವರಕುಮಾರನಿಗೆ ತಾಯಿಯಾಗಬೇಕೆಂಬುದು ಚಿರ ಕಾಲ ಬಯಕೆಯಾಗಿದೆ. ಈ ಆಸೆಯನ್ನು ಪೂರೈಸಲು ನಾನು ಯಾವ ರೀತಿಯ ತಪಸ್ಸು ಮಾಡಬೇಕು?" ಎಂದು ಕೇಳಿದಳು, ಮಾತಂಗ ಮುನಿಯು ಅಂಜನಾಳಿಗೆ...

"ಓ ತಾಯಿ, ಮಗನನ್ನು ಹೊಂದುವ ನಿನ್ನ ಬಯಕೆ ನ್ಯಾಯಯುತವಾಗಿದೆ. ನಾನು ಹೇಳುವುದನ್ನು ಕೇಳು ಇಲ್ಲಿಂದ ಐವತ್ತು ಯೋಜನೆಗಳಷ್ಟು ದೂರದಲ್ಲಿ ಪಂಪಾಸರೋವರದ ಪೂರ್ವಕ್ಕೆ ನರಸಿಂಹ ಆಶ್ರಮವಿದೆ. ಆ ಆಶ್ರಮದ ದಕ್ಷಿಣಕ್ಕೆ ನಾರಾಯಣಾದ್ರಿ ಇದೆ, ಮತ್ತು ಆ ಅದ್ರಿಯ ಬಳಿ ಸ್ವಾಮಿ ಪುಷ್ಕರಿಣಿ ಇದೆ. ಆ ಪುಷ್ಕರಿಣಿಯ ಉತ್ತರಕ್ಕೆ ಎರಡು ಕ್ರೋಸು ದೂರದಲ್ಲಿ ಆಕಾಶಗಂಗೆ ಇದೆ. ಆ ಸ್ಥಳವನ್ನು ತಲುಪಿ, ಆ ಗಂಗೆಯಲ್ಲಿ ಮೂರು ದಿನಗಳ ಕಾಲ ಸ್ನಾನ ಮಾಡಿ, ಮತ್ತು ಹನ್ನೆರಡು ವರ್ಷಗಳ ಕಾಲ ಜಪತಪಾದಿಗಳನ್ನು ಮಾಡುತ್ತಿರು. ನಿನಗೆ ಖಂಡಿತವಾಗಿಯೂ ಪುತ್ರ ಪ್ರಾಪ್ತಿಯಾಗುತ್ತದೆ." ಎಂಬ ಉಪಾಯ ಹೇಳಿದರು.



ಮಾತಂಗ ಮುನಿಯ ಸಲಹೆಯಂತೆ ಅಂಜನಾ ದೇವಿಯು ನಾರಾಯಣಾದ್ರಿಯನ್ನು ತಲುಪಿದಳು. ಸ್ವಾಮಿ ಪುಷ್ಕರಿಣಿಯಲ್ಲಿ ಸ್ನಾನ ಮಾಡಿದಳು. ಪವಿತ್ರ ಸ್ಥಳದ ಬಳಿ ಇರುವ ಅಶ್ವತ್ಥ ವೃಕ್ಷವನ್ನು ಪ್ರದಕ್ಷಿಣೆ ಮಾಡಿದಳು. ಅಲ್ಲಿನ ವರಾಹ ಸ್ವಾಮಿಯನ್ನು ಪ್ರಾರ್ಥಿಸಿದಳು. ನಂತರ ಮಾತಂಗಮುನಿ ಹೇಳಿದಂತೆ ಆಕಾಶಗಂಗಾ ಪ್ರದೇಶಕ್ಕೆ ತೆರಳಿ ಮೂರು ಹೊತ್ತೂ ಸ್ನಾನ ಮಾಡುತ್ತಾ ಉಪವಾಸ ಆಚರಿಸುತ್ತಾ ಒಂದು ವರ್ಷ ತಪಸ್ಸು ಮಾಡುತ್ತಾ ಇದ್ದಳು. ಅಂಜನಾ ದೇವಿಯ ತಪಸ್ಸನ್ನು ಗಮನಿಸಿದ ವಾಯುದೇವನು ಸಂತುಷ್ಟನಾಗಿ ಅವಳಿಗೆ ಮಧುರ ಫಲವನ್ನು ಕೊಟ್ಟನು. ಅದೇ ರೀತಿ, ಅಂಜನಾದೇವಿ ತನ್ನ ಹನ್ನೊಂದು ವರ್ಷಗಳ ಕಠಿಣ ವ್ರತವನ್ನು ಪೂರ್ಣಗೊಳಿಸಿದಳು. ವಾಯು ದೇವನು ಸತ್ವೀರ್ಯ ಗರ್ಭ ಫಲವನ್ನು ದಯಪಾಲಿಸಿದ ನಂತರ ಅಂಜನಾ ದೇವಿಯು ಗರ್ಭವತಿಯಾದಳು.

ಈ ಇಡೀ ದೃಶ್ಯವು ಅಲ್ಲಿದ್ದ ತಪಸ್ವಿಗಳಿಗೆ ಕನಸಿನಲ್ಲಿ ಸಾಕ್ಷಾತ್ಕರಿಸಿದಂತೆ ಭಾಸವಾಗಿ, ಅಂಜನಾಳನ್ನು ಎಂದಿನಂತೆ ಗೌರವಿಸುತ್ತಾ ತಮ್ಮ ತಪಸ್ಸನ್ನು ಮುಂದುವರೆಸಿದರು. ಹತ್ತನೇ ತಿಂಗಳ ನಂತರ, ಅಂಜನಾ ಗಂಡು ಮಗುವಿಗೆ ಜನ್ಮ ನೀಡಿದಳು. ಒಬ್ಬ ಮಹಾಬಲನ ಜನನವಾಗುತ್ತಿದ್ದಂತೆ ಎಲ್ಲಾ ದೇವತೆಗಳು ಹೂ ಮಳೆ ಸುರಿಸಿದರು.

ಅಂಜನಾಳಿಗೆ ವಜ್ರದೇಹನು ಜನಿಸಿದನು. ಅವನಿಗೆ ದೊಡ್ಡ ಬಾಲವಿತ್ತು, ವಿಶಿಷ್ಟ ಕಾಂತಿಯಿಂದ ಹೊಳೆಯುತ್ತಿದ್ದನು. ಇದಲ್ಲದೆ, ಅವನು ಬಲಶಾಲಿ ಮತ್ತು ಧೈರ್ಯಶಾಲಿಯಾಗಿದ್ದ ಕಾರಣ ಋಷಿಗಳು “ಈ ಮಗನು ಜಗತ್ತಿನಲ್ಲಿಯೇ ಮಹಾನಾಯಕನಾಗುತ್ತಾನೆ.” ಎಂದು ಹೇಳಿ ಮಗುವಿಗೆ ಹನುಮಂತ ಎಂದು ಹೆಸರಿಟ್ಟರು. ಇದೆಲ್ಲವೂ ತ್ರೇತಾಯುಗದಲ್ಲಿ ನಡೆದ ಸನ್ನಿವೇಶ. ಅಂಜನಾ ತಪಸ್ಸು ಮಾಡಿ ಒಳ್ಳೆಯ ಮಗನನ್ನು ಪಡೆದ ಸ್ಥಳವಾದ್ದರಿಂದ ಈ ಬೆಟ್ಟವನ್ನು “ಅಂಜನಾದ್ರಿ” ಎಂದು ಕರೆಯಲಾಗುತ್ತದೆ.

“ಮಹಾರಾಜ! ಅದಲ್ಲದೆ ಸರ್ಪರಾಜನಾದ ಆದಿಶೇಷನು ವಾಯುದೇವನಿಂದ ಸೋತು ಆಕಾಶದಲ್ಲಿ ಸ್ತಂಭದ ರೂಪವಾದ ಕಾರಣ ಈ ಪರ್ವತವು ಶೇಷಾದ್ರಿ ಎಂದು ಪ್ರಸಿದ್ಧವಾಯಿತು.” ಎಂದು ಶತಾನಂದರು ಹೇಳುತ್ತಿದ್ದಂತೆ, ಜನಕ ಮಹಾರಾಜ ಆದಿಶೇಷನನ್ನು ಸೋಲಿಸುವುದೋ ವಾಯುವು ವಿಜೇತನಾಗುವುದೋ ಅವರಿಬ್ಬರೂ ಕಾಯಾಳ ಕಾಲು ತಳ್ಳುವುದು ಅವರ ಜಗಳಕ್ಕೆ ಕಾರಣವೇನೆಂದು ಕೇಳಿದಾಗ ಶತಾನಂದನು ಶೇಷ ಮತ್ತು ಮಾರುತನ ಸಂವಾದದ ಬಗ್ಗೆ ವಿವರಿಸಿದನು. ವೈಕುಂಠದಲ್ಲಿ ಆದಿಶೇಷನು ಹರಿಮಂದಿರದ ದ್ವಾರಪಾಲಕನಾಗಿ ತನ್ನ ಕರ್ತವ್ಯವನ್ನು ನೆರವೇರಿಸುತ್ತಿದ್ದನು. ಒಂದು ದಿನ ವಾಯುದೇವನು ವಿಷ್ಣು ಮಂದಿರದ ಪ್ರವೇಶ ದ್ವಾರದವರೆಗೂ ಬಂದು ಒಳಗೆ ಪ್ರವೇಶಿಸಲು ಉತ್ಸುಕನಾಗಿದ್ದಾಗ ಶೇಷನು....

“ವಾಯುದೇವ! ನಿನಗೆ ಮಂದಿರದೊಳಗೆ ಪ್ರವೇಶವಿಲ್ಲ. ಅಲ್ಲಿಯೇ ನಿಲ್ಲು! ನಿಲ್ಲು!” ಎಂದು ಗದರಿಸಿದನು. ಆ ಗದರಿಕೆಯಿಂದ ವಾಯುದೇವನು ದಿಗ್ಭ್ರಮೆಗೊಂಡನು. “ಶೇಷ! ನಾನು ವನಜಾಕ್ಷನ ದರ್ಶನ ಪಡೆಯಲು ಹೋಗುತ್ತಿದ್ದೇನೆ. ನನ್ನನ್ನು ಏಕೆ ತಡೆಯುತ್ತೀಯಾ? ನನ್ನನ್ನು ತಡೆಯುವಷ್ಟು ದೊಡ್ಡವನೋ ನೀನು? ನಾನೇನು ಕಡಿಮೆ ಎಂದು ತಿಳಿದ್ದೀಯಾ ಸರಿ, ನಾನು ತಕ್ಷಣ ರಮಾಪತಿಯ ದರ್ಶನ। ಮಾಡಬೇಕು,” ಎಂದು ಅವನು ಹೇಳಿ ಶೇಷನನ್ನು ತಳ್ಳಿ ಹೊರಟನು. ಆಗ, ಶೇಷನು ಬುಸುಗುಡುತ್ತಾ ವಾಯುದೇವನ ಕುತ್ತಿಗೆಯನ್ನು ಹಿಡಿದು, ಎಳೆದನು.

“ವಾಯುದೇವನು ಇದನ್ನು ನಿರೀಕ್ಷಿಸಿರಲಿಲ್ಲ. ಆದರೂ ಸಾವರಿಸಿಕೊಂಡು “ನಾಗಕುಲಾಧಮಾ! ನನ್ನ ಕುತ್ತಿಗೆ ಹಿಡಿದು ತಳ್ಳುತ್ತೀಯಾ? ನಾನು ನಿನಗೆ ಅದೇ ರೀತಿ ಮಾಡಿದರೆ ಏನಾಗುತ್ತದೆ ಎಂದು ಊಹಿಸು, ಹೋಗಲಿ ಬಿಡು ಇನ್ನಾದರೂ ಪಕ್ಕಕ್ಕೆ ಹೋಗು” ಎಂದು ಗದರಿಸಿದನು.

“ಅನಿಲಾ! ಇದು ಹರಿಯ ಅಂತಃಪುರ. ನೀನು ಅನ್ಯನು. ನಿನ್ನನ್ನು ಒಳಗೆ ಬಿಡುವುದಿಲ್ಲ. ಹೋಗದಿದ್ದಲ್ಲಿ ನಿನ್ನ ಬಗ್ಗೆ ಸ್ವಾಮಿಗೆ ಹೇಳುತ್ತೇನೆ. ಹರಿ ಅನುಮತಿ ನೀಡಿದರೆ ನಾನೇ ನಿನ್ನನ್ನು ಕರೆದುಕೊಂಡು ಹೋಗುತ್ತೇನೆ ಹೊರತು ಈಗ ನಿನ್ನನ್ನು ಒಳಗೆ ಬಿಡುವುದಿಲ್ಲ ಎಂದು ಅವನು ಖಡಾಖಂಡಿತವಾಗಿ ಹೇಳಿದನು.

**- ಮುಂದುವರೆಯುತ್ತದೆ.**



# ಆಳ್ವಾರುಗಳು ಕಂಡ ತಿರುವೇಂಗಡ

– ಎಂ. ಆರ್. ನರಸಿಂಹನ್

**ಕಳೆದ ಸಂಚಿಕೆಯಿಂದ**

ಇದರಿಂದಲೇ ತಿರುಪ್ಪಾವೈನ ನಿಗಮನ ಪಾಶುರವೆನಿಸುವ 'ವಂಗಕ್ಕಡಲ್ ಕಡೈಂದ' ಮಾತ್ರವೇ ಅಲ್ಲದೆ ಇಡೀ 'ತಿರುಪ್ಪಾವೈ' ಕೂಡಾ ತಿರುವೇಂಗಡ ಮುಡಿಯಾನ್‌ಗೇ ಮಂಗಳಾಶಾಸನವೆಂದು ಹಿರಿಯರು ತೀರ್ಮಾನಿಸಿ ತಿರುಪ್ಪಾವೈನ ಪ್ರಶಂಸಾ ಪಾಶುರ (ತನಿಯನ್‌ನಲ್ಲಿ) ದಲ್ಲಿ,

ಶೂಡಿಕ್ಕುಡುತ್ತ ಶುಡರ್‌ಕೊಡಿಯೇ ತೊಲ್‌ಪಾವೈ
ಪಾಡಿಯರುಳ ವಲ್ಲಪಲ್‌ವಳೆಯಾಯ್- ನಾಡಿನೀ
'ವೇಂಗಡವರ್‍ಕ್ಕ ಎನ್ನೈವಿಧಿ' ಎನ್ನ ವಿಮ್ಮಾಟ್ರಂ
ನಾಂ ಕಡವಾ ವಣ್ಣ ಮೇನಲ್‌ಕು

ಎಂದು ಪ್ರಮಾಣೀಕರಿಸಿದ್ದಾರೆ.

ಇದೇ ರೀತಿ ನಮ್ಮಾಳ್ವಾರ್‌ರವರ 'ತಿರುವಾಯ್ಮೊಳಿ'ಯನ್ನು ಇಡೀ ಪ್ರಬಂಧವು ವೇಂಗಡದವನನ್ನು ಕುರಿತೇ ಹಾಡಲ್ಪಟ್ಟಿರುವುದು ಎನ್ನುವ ಪಂಥವೂ ಇಲ್ಲದೇ ಇಲ್ಲ. ಈ ವಾದವನ್ನೇ ಮುಂದಿಟ್ಟುಕೊಂಡು ಮತ್ತೆ ಕೆಲವರು ತಿರುವಾಯ್ಮೊಳಿಯು ಶ್ರೀರಂಗದ ರಂಗನಾಥನನ್ನು ಕುರಿತದ್ದು, ಕಂಚೀವರದ ರಾಜನನ್ನು ಕುರಿತದ್ದು, ಮೇಲುಕೋಟೆಯ ತಿರುನಾರಾಯಣನನ್ನೂ ಕುರಿತದ್ದು ಎಂದು ಹೇಳುವಂತೆಯೇ, ತಿರುಮಲೆಯ ಒಡೆಯನಿಗೆ ಅಂಕಿತವಾದದ್ದು ಎಂದೂ ವಾದಿಸುತ್ತಾರೆ. ಇದಕ್ಕೆ ಪ್ರಮಾಣ ಪದ್ಯ ಈ ಕೆಳಗಿನದು

ತಿಲದಮುಲಹುಕ್ಕಾನ ತಿರುವೇಂಗಡತ್ತಾನ್ನೈ
ಅಲಹಿಲ್‌ಪುಗಳಂದಾದಿಯಾಯಿರಮುಂ
ಉಲಹಿಲುರೈತ್ತಾನ್ ಶಡಗೋಪನ್ -
ಉತ್ತಮರ್‌ಗಳ್‌ನೆಂಜಿಲ್
ವಿರಿತ್ತಾನ್ ಪೆರಂಬೂರ್‌ವೇಂದು

ಈ ರೀತಿ ಅರ್ಥ ಮಾಡುತ್ತಾ ಹೋದರೆ ಶ್ರೀನಿವಾಸನು ವಿಷ್ಣು ರೂಪ. ಆದ್ದರಿಂದ ನಾಲ್ಕು ಸಾವಿರ ಪಾಶುರಗಳೂ ಶ್ರೀನಿವಾಸನದೇ ಎಂದು ಹೇಳಬಹುದು, ಹೇಳಿದರೂ ತಪ್ಪಿಲ್ಲ. ಇದೇ ರೀತಿ ಪೆರಿಯಾಳ್ವಾರ್ ಅವರ ಶೆನ್ನಿಯೋಂಗು ಎಂಬ ದಶಕದ ಪ್ರಾರಂಭ ಪದ್ಯಕ್ಕೂ ಹಿಂದೆ ನಾವು ವಿವರಣೆ ನೀಡಿದ್ದೇವೆ. ಆದರೆ ನಾವು ವೇಂಗಡದೊಡೆಯನನ್ನು ವಾಚ್ಯವಾಗಿ ಹೇಳಿರತಕ್ಕ ಪಾಶುರಗಳಷ್ಟನ್ನೇ ನಮ್ಮ ದೃಷ್ಟಿಗೆ ಸೀಮಿತಗೊಳಿಸಿ ಅಧ್ಯಯನ ಮಾಡಬೇಕೆಂದು ಅಭಿಪ್ರಾಯ ಪಡುತ್ತೇನೆ. ಆದ್ದ

ರಿಂದ ತಿರುವಾಯ್ಮೊಳಿಯಲ್ಲಿ ಬರುವ 55 ಪಾಶುರಗಳಿಗೇ ನಮ್ಮ ದೃಷ್ಟಿಯನ್ನು ಪರಿಮಿತಿಗೊಳಿಸಿ ಅಧ್ಯಯನ ಮಾಡಬೇಕಾಗಿದೆ. ಈ ದೃಷ್ಟಿಯಿಂದಲೇ ಪಲ್ಲಾಂಡ್, ತಿರುಪ್ಪಾವೈಯನ್ನು ನಮ್ಮ ಪ್ರಬಂಧಕ್ಕೆ ವಸ್ತುವಾಗಿ ಆರಿಸಿಲ್ಲದಿರುವುದು.

ನಮ್ಮಾಳ್ವಾರ್ ಅವರ 'ತಿರುವಿರುತ್ತಂ' ಒಂದು ಅದ್ಭುತವಾದ ಶೃಂಗಾರಕಾವ್ಯವೆಂಬುದಾಗಿ ಪರಿಗಣಿಸಲ್ಪಟ್ಟಿದೆ. ತಿರು ಎಂದರೆ ಶ್ರೇಷ್ಠವಾದ, ವಿರುತ್ತಂ ಎಂದರೆ ಛಂದಸ್ಸು ಎಂಬುವುದು ಒಂದು ಸಾಮಾನ್ಯಾರ್ಥವಾದರೆ, ಸಂಘಟನೆ, ವಾರ್ತೆ, ವೃತ್ತ, ಸಂದೇಶ ಎಂಬುದಾಗಿ ಮತ್ತೊಂದು ಅರ್ಥ ವೆನಿಸಲ್ಪಡುತ್ತದೆ. ಕಾವ್ಯ ವಸ್ತು ಈ ಎರಡನೇ ಅರ್ಥವನ್ನು ಪ್ರಸ್ತುತಗೊಳಿಸುತ್ತದೆ. ಆಂಧ್ರಪ್ರದೇಶದ ಕೃಷ್ಣಾ ಜಿಲ್ಲೆಯ ಮುಸುನೂರಿನ ಶ್ರೀ ಗೋದಾ ಗ್ರಂಥಮಾಲೆಯವರ ಕುಸುಮವಾದ "ತಿರುವಿರುತ್ತಮು" "ಅನುಶ್ರೀ ಶಠಾರಿ ಸೂಕ್ತಿ ಸುಧಾ" ಎನ್ನುವ ತೆಲುಗು ಪುಸ್ತಕದಲ್ಲಿ ಇದನ್ನೇ ಗ್ರಂಥ ಕರ್ತರು ಒತ್ತಿ ನುಡಿದಿದ್ದಾರೆ. ಇದು ಸಮಂಜಸವಾದ ವ್ಯಾಖ್ಯಾನ ಎಂದು ತಿಳಿಯುತ್ತೇನೆ. ಇದರಲ್ಲಿ ಸಂಘಟನೆಯಿದೆ. ಒಂದು ವೃತ್ತಾಂತ ವಿದೆ. ಸಂದೇಶವನ್ನೂ ಕಳುಹಿಸುವ ಕಥನವಿದೆ. ಇದು ರೂಪಕ ಪದ್ಧತಿಯಲ್ಲಿ ಬರೆಯಲ್ಪಟ್ಟ ಶ್ರವ್ಯ ಕಾವ್ಯವೆಂಬುದಾಗಿ ಅವರು ವಿವರಿಸುತ್ತಾರೆ.ಇದರಲ್ಲಿ ನಾಟಕ ರೂಪಕ್ಕೆ ಅಳವಡಿಸಲೋಸುಗ ಕೆಲವು ಪಾತ್ರಗಳು ಬಳಸಲ್ಪಟ್ಟು ಅವುಗಳ ಸಂಭಾಷಣೆಯ ಮೂಲಕವೇ ನಾಟಕವು ಮುಂದುವರಿಯುತ್ತದೆ. ಪಾತ್ರಗಳ ಸಂಭಾಷಣೆಯ ಮೂಲಕವೇ ನಾಟಕವು ಮುಂದುವರಿಯುತ್ತದೆ. ಪಾತ್ರಗಳ ಸಂಭಾಷಣೆಗಳಿಲ್ಲ; ಆದರೆ ಪಾತ್ರಗಳ ಹೇಳಿಕೆ ಇದೆ. ಈ ಹೇಳಿಕೆಗಳೂ ಒಂದಾದ ಮೇಲೆ ಮತ್ತೊಂದು ಬರುವುದರಿಂದ ಇದು ಸಂಭಾಷಣೆಯಂತೆಯೇ ನಾಟಕ ಮುಂದುವರಿಯುವ ಪರಿಣಾಮ ಬೀರುತ್ತದೆ. ಇದೊಂದು ಚಮತ್ಕಾರಿಕವಾದ ಕಾವ್ಯ ಸಂವಿಧಾನ ಇದರ ಕವಿ ಚತುರನಿರಬೇಕು. ಹೇಳಿಕೆಗಳ ಮೂಲಕವೇ ನಾಟಕ ಮುಂದುವರಿಯುವ ಕಲೆ ಉತ್ತಮ ಮನೋಧರ್ಮದ್ದು. ಇದರಲ್ಲಿನ ಪಾತ್ರಗಳೂ ಕೂಡ ವಿಶುದ್ಧವಾದದ್ದು, ಭಗವತ್ಕಾಮಪ್ರವಿಷ್ಟವಾದದ್ದೂ ಸ್ತ್ರೀ ಪುರುಷರ ಮಧ್ಯೆ ಇರುವ ಪ್ರೇಮ ವಿಶೇಷವೇ ಕಾಮ, ಆದರೆ ಜೀವಾತ್ಮ ಪರಮಾತ್ಮರ ಮಧ್ಯೆ ಇದು ಬೆಳೆದಾಗ ಭಗವತ್ಕಾಮ ಎಂದು ಭಾವಿಸಲ್ಪಡುತ್ತದೆ. "ಉತ್ತಮಃ ಪುರುಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ" ಎನ್ನುವಂತೆ ಪರಮಾತ್ಮನೇ ಆ ಪುರುಷ. 'ಸ್ತ್ರೀ ಪ್ರಾಯ ಮಿತರಂ ಜಗತ್' ಎನ್ನುವಂತೆ ಈ ಪ್ರಪಂಚದ ಜಂತು ಜಾಲವೆಲ್ಲಾ ಸ್ತ್ರೀಯರೇ! ಈ ನ್ಯಾಯದ ಪ್ರಕಾರ ನಮ್ಮಾಳ್ವಾರ್ ಕೂಡಾ ಸ್ತ್ರೀಯೇ! ಈ ಕವಿ-ಎಂದರೆ ನಮ್ಮಾಳ್ವಾರ್-ಈ ಕೃತಿಯಲ್ಲಿ ಒಂದು ಕಡೆ ತಮ್ಮನ್ನು ನಾಯಕಿಯಾಗಿಯೂ ಮತ್ತೊಮ್ಮೆ ನಾಯಕಿಯ ಸಖಿಯಾಗಿಯೂ ಮಗದೊಮ್ಮೆ ನಾಯಕಿಯ ತಾಯಿಯಾಗಿಯೂ ಭಾವಿಸಿಕೊಂಡು ಅವರವರ ಅವಸ್ಥಾಂತರದ ಹೇಳಿಕೆಯ ಮೂಲಕ ಅಥವಾ ನಿರೂಪಣೆಯ ಮೂಲಕ ಈ ರೂಪಕವನ್ನು ಮುಂದುವರೆಸುವ ಕಾವ್ಯಚಾತುರ್ಯವನ್ನು ಪ್ರದರ್ಶಿಸುತ್ತಾರೆ. ನಾಯಕಿಯ ಸಖಿಯೂ, ನಾಯಕಿಯ ತಾಯಿಯೂ ಹೇಳುವ ಹೇಳಿಕೆ ನಾಯಕಿಯನ್ನು ಕುರಿತದ್ದೇ, ನಾಯಕಿಯ ಮಾತು ನಾಯಕನನ್ನು ಕುರಿತದ್ದೇ. ಹೀಗಾಗಿ ನಾಯಕನೇ, ಅವನ ಕಾರ್ಯವೇ ಎಲ್ಲರ ಮಾತಿನಲ್ಲೂ ವ್ಯಕ್ತಗೊಳ್ಳುತ್ತದೆ. ಇವರು ತಮ್ಮ ಪ್ರಿಯತಮನಲ್ಲಿ ಪ್ರದರ್ಶಿಸುವ ಕಾಮೋತ್ಕಂಠ ಭಾವ-ಸ್ತ್ರೀ ಪುರುಷರ ಮೂಲಕ ಈ ಲೋಕದ ದೃಷ್ಟಿಯಿಂದ ಸಾಮಾನ್ಯಕಾಮಕ್ಕಿಂತ ಎಲ್ಲ ರೀತಿಯಿಂದಲೂ ಭಿನ್ನಗೊಂಡದ್ದು. ಇದರಲ್ಲಿ ಅನುಭವವಿದೆ. ತಪಸ್ಯ ಇದೆ, ಸ್ತೋತ್ರವಿದೆ. ಆತ್ಮನಿವೇದನೆ ಇದೆ. ಆತ್ಮಾರ್ಪಣೆಯಿದೆ. ಇದನ್ನೇ ಶ್ರೀ ವೈಷ್ಣವರ ದೇವನನ್ನು ಕುರಿತ ಭಕ್ತನ ಪ್ರಪತ್ತಿ ಮಾರ್ಗ ಎಂಬುದಾಗಿ ವ್ಯಾಖ್ಯಾನಿಸುತ್ತಾರೆ. ಈ ಕೃತಿಯಲ್ಲಿ ಬರುವ ವಿರಹದ ವರ್ಣನೆ ಮಜಲು ಮಜಲಾಗಿ ಮುಂದುವರೆಯುತ್ತಾ ಅದರ ಔನ್ನತ್ಯವನ್ನು ತಲುಪುವ ರೀತಿ ಅದ್ಭುತ. ಆ ವಿರಹದಲ್ಲೇ ಪರಮಾತ್ಮನನಿಂದನೆ ಇದೆ. ಪ್ರಶಂಸೆ ಇದೆ, ಮಹಿಮೆ ಇದೆ,ಭಕ್ತಿ ಇದೆ, ಮುಕ್ತಿ ಇದೆ. ಆಸಕ್ತಿ ಇದೆ.

**- ಮುಂದುವರೆಯುತ್ತದೆ.**

**ವೃಕ್ಷೋ ರಕ್ಷತಿ ರಕ್ಷಿತಃ**

**ಗಿಡವೊಂದ ನೆಡುವವನು**
**ದೇವರಾ ಸೇವಕನು**
**ನೆನೆವರವನನು ಜನರು**
**ಅವನೆಂದು ನೋಡದರು**

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್.ಸಿ.ವಿ. ನರಸಿಂಹಾಚಾರ್ಯ
- ಅನುವಾದ : ಶ್ರೀಮತಿ

**ಕಳೆದ ಸಂಚಿಕೆಯಿಂದ**

ಲಕ್ಷ್ಮೀನಾರಾಯಣ ಸ್ವಾಮಿಯನ್ನು ಆಳ್ವಾರರ ಮೂಲ ವಿಗ್ರಹವಿಲ್ಲದಿರುವೆಡೆ ನದಿ ತೀರದಲ್ಲಿ ಅಭೇದ್ಯವಾಗುವಂತೆ ಗೋಪುರ, ಪ್ರಾಕಾರ-ಮಂಟಪಗಳನ್ನೊಳಗೊಂಡ ದೇವಾಲಯವನ್ನು ನಿರ್ಮಿಸಿ ತಿರುಮಲೆಯ ಬೆಟ್ಟವನ್ನು, ಶ್ರೀವೇಂಕಟಾಚಲಪತಿಯನ್ನು ಮಂಗಳಾಶಾಸನವನ್ನು ಮಾಡುವಂದದಿ ಪಶ್ಚಿಮಾಭಿಮುಖವಾಗಿ ಶ್ರೀಮುಖಮಂಡಲದಲ್ಲಿ ಶ್ರೀ ಪ್ರತಿಷ್ಠೆ ಮಾಡಿಸಿ, ಶ್ರೀಗೋವಿಂದರಾಜುಸ್ವಾಮಿ ಸನ್ನಿಧಿಯಲ್ಲಿ ವಿಜಯವನ್ನು ಮಾಡಿ, ಆಳ್ವಾರ್ ತೀರ್ಥವೆಂದು ತೀರ್ಥಕ್ಕೆ ನಾಮಕರಣ ಮಾಡಿ ಶ್ರೀಗೋವಿಂದರಾಜು ಸ್ವಾಮಿಯವರ ಅಧ್ಯಯನೋತ್ಸವಾದಿಗಳನ್ನು ಆಚರಿಸುವಂತೆ ಕಡ್ಡಾಯ ಮಾಡಿ ಉತ್ಸವವಿಗ್ರಹದೊಡ್ಡನಿದ್ದ ಆಳ್ವಾರರನ್ನು ತೀರ್ಥ ತೀರದಲ್ಲಿ ಮೂಲ ವಿಗ್ರಹದೊಂದಿಗೆ ವಿಜಯವನ್ನು ಮಾಡಿ, ಈ ಆಳ್ವಾರರು ತೀರ್ಥದಲ್ಲಿ ಗೋವಿಂದರಾಜು ಸ್ವಾಮಿಯವರ ಉತ್ಸವದ ಸಮಯದಲ್ಲಿ ಅವಬೃಥ ಮಾಡಲು ಕಾರ್ತಿಕಮಾಸದಲ್ಲಿ ವನಭೋಜನೋತ್ಸವ, ತೀರ್ಥಾದಿಗಮನೋತ್ಸವ ಜರುಗಿಸುವಂತೆ ಮೇಷ (ಚೈತ್ರ) ಮಾಸದ ಪೂರ್ಣಿಮೆ ದಿನದಂದು ಸ್ವರ್ಣಮುಖಿ ನದಿಯಲ್ಲಿ ತಾವು ಮುಳುಗಿದ ತಿರುಪೂರಲ್ (ಶೈತ್ಯೋಪಚಾರವನ್ನು) ಉತ್ಸವವನ್ನು ಜರುಗಿಸಲು ಭೂಪಾಲನು ಕಟ್ಟಳೆ ಹಾಕಿದ್ದಾನೆ.

ಹೀಗೆ ಸ್ವಲ್ಪ ಕಾಲ ಶ್ರೀಗೋವಿಂದರಾಜು ಸ್ವಾಮಿ ಸಮಸ್ತೋತ್ಸವಗಳನ್ನು ಸ್ವೀಕರಿಸುವ ವೇಳೆಯಲ್ಲಿ ಮ್ಲೇಚ್ಛ ದಂಡಯಾತ್ರೆ ಪ್ರಸರಣಗೊಂಡು ಗೋವಿಂದರಾಜಸ್ವಾಮಿ ತಿರುಮಲೆಯ ಮೇಲೆ ವಿಜಯವನ್ನು ಮಾಡಿ ತಾವು ನಿತ್ಯರಾದ (ಅನಂತ,ಗರುಡ, ಶೇಷ, ವಿಷ್ವಕ್ಸೇನಾದಿಗಳು), ಆಳ್ವಾರರು, ಭಗವದ್ರಾಮಾನುಜರನ್ನು ಮೊದಲುಗೊಂಡು ಭಕ್ತ ಪರಿಗ್ರಹರೊಡಗೂಡಿ ವರ್ಷಕಾಲ ಪೂಜೆಗಳನ್ನು ಸ್ವೀಕರಿಸಲು, ದುರಾಕ್ರಮಣ ಮುಕ್ತಾಯಗೊಂಡ ನಂತರ ಶ್ರೀಗೋವಿಂದರಾಜಸ್ವಾಮಿ ನಿತ್ಯಸೂರರೇ ಮೊದಲಾದರೊಂದಿಗೆ ತಿರುಪತಿಗೆ ಪಾದಗ್ರಹಣ ಮಾಡಿದಾಗ ಸ್ಥಳಾಭಿಮಾನಿಯಾದ ಶ್ರೀಮದ್ರಾಮಾನುಜರ ನೇಮಕ ಪ್ರಕಾರ ಶ್ರೀವೇಂಕಟಾಚಲ ಕ್ಷೇತ್ರದಲ್ಲಿ ಕರ್ಮ ಕರ್ತನಾದ ಸೇನಾಪತಿ ಜಿಯ್ಯರೆಂಬ ಒಬ್ಬ ಆಗಿನ ಮಲೈ ಕುನಿಯನಿರ್ನಾರ್ ಅರೈಯರ್, ಹಿಂದೆ ಬಿಂಬಾಧರ ಸಂತತಿ ಸಂಜಾತರಾದ ಶ್ರೀನಿವಾಸಯ್ಯಂಗಾರ್ ಎಂಬ ಹೆಸರಿನ ಅರ್ಚಕರು, ನಂತರ ಹಿರಿಯರಿಗೆ ಸ್ವಪ್ನದಲ್ಲಿ ಅವರ



ವರಿಗೆ ಆಯಾ ಕಾಲದಲ್ಲಿ ಸೇವೆಯನ್ನು ಅನುಗ್ರಹಿಸಿರಲು (ಸಾಕ್ಷಾತ್ಕಾರವಾಗಿ) "ಮೊದಲು ನಾವು ತಿರುಮಲೆಯಲ್ಲಿರುವ ಶ್ರೀ ವೇಂಕಟಾಚಲಪತಿಯದೇ ಗುಣಾನುಭವವನ್ನು ಮಾನಸಿಕವಾಗಿ ದಿವ್ಯಮಂಗಳ ವಿಗ್ರಹಾನುಭವವನ್ನು ಮಾಡುವುದೊಂದೇ ಅಲ್ಲದೇ ಯಾದೃಚ್ಛಿಕವಾಗಿ ನಾವೀಗ ಇಲ್ಲಿ ಬಂದೆವು. ಈ ಜಾಗದಲ್ಲಿ ನಿತ್ಯವೂ ವಿಗ್ರಹಾನುಭವವನ್ನು ಮಾಡಿಕೊಂಡಿದ್ದೇವೆ. ನಮಗೆ ನೀವು ಮನೋ ಕ್ಲೇಶವನ್ನುಂಟು ಮಾಡಬಹುದೆ?ಎಂದು ಶ್ರೀ ವೇಂಕಟಾಧೀಶನ ಶ್ರೀ ಪಾದಾಬ್ಜವನ್ನು ಹೊಂದಿ (ಶ್ರೀನಮ್ಮಾಳ್ವಾರರು) ಆಜ್ಞಾಪಿಸಿದ್ದೆಲ್ಲವನ್ನು ಕೇಳಿ ಭಯ ಹೊಂದಿ ಅವರನ್ನು ತಿರುಮಲೆಯ ಮೇಲೆ ಅವರಿಗೆ ಅಭಿಮತವಾದ ಭಗವದ್ರಾಮಾನುಜರ ಸನ್ನಿಧಿಯಲ್ಲೇ ವಿಜಯವನ್ನು ಮಾಡಿ ಅವರ ದಶಾವತಾರದಲ್ಲಿ ಅಪ್ರಾಕೃತವಾದ ತಿರುಮಲ ಗಿರಿಯನ್ನು ಪ್ರಾಕೃತ ಶರೀರದೊಂದಿಗೆ ತುಳಿದಿರುವೆಂದು ಅನುಸಂಧಾನ ಮಾಡಿಕೊಳ್ಳಲು ಅದಕ್ಕನುಗುಣವಾಗ ಪ್ರಚಾರ ಮಾಡಲೋಲ್ಲದೆ ಗೌಪ್ಯವಾಗಿಟ್ಟಿರುವುದರಿಂದ ಅಲ್ಲಿ ವಿಜಯವನ್ನು ಮಾಡಿ ಭಗವದ್ರಾಮಾನುಜರನ್ನು ಮಾತ್ರವೇ ವಿಜಯವನ್ನು ಮಾಡಿಕೊಂಡು ಬಂದ ವೇಳೆಯಲ್ಲಿ ಕಂದಾಡೈರಾಮಾನುಜಯ್ಯಂಗಾರ್ ಸ್ಥಳದಲ್ಲಿ ಅನೇಕ ಕೈಂಕರ್ಯಗಳನ್ನು ಮಾಡಿಸಿಕೊಳ್ಳುವ ನಿಟ್ಟಿನಲ್ಲಿ ಆ ಸ್ಥಳಕ್ಕೆ ಆಳ್ವಾರ್ ಉತ್ಸವ ಮೂರ್ತಿಯೊಂದನ್ನು ಪ್ರತಿಷ್ಠಾಪನೆ ಮಾಡಿ,ಉತ್ಸವವನ್ನು ಅನುಷ್ಠಾನಕ್ಕೆ ತಂದು, ತೀರ್ಥ ತೀರದಲ್ಲಿ ಮೂಲ ವಿಗ್ರಹದ ಜೊತೆಗೆ ವಿಜಯವನ್ನು ಮಾಡಿಸಿದ ನಿಟ್ಟಿನಲ್ಲಿ ಆರಾಧನೆಯನ್ನು ಸ್ವೀಕರಿಸುವುದರಂತೆಯೇ ಗೋವಿಂದರಾಜಸ್ವಾಮಿಯ ಉತ್ಸವವನ್ನು ನಿರ್ವಹಿಸಲು (ಕಂದಾಡೈರಾಮಾನುಜ ಅಯ್ಯಂಗಾರ್) ಸಂಕಲ್ಪಿಸಿದರು. ಹೀಗೆ ತಿರುಮಲೆ -ತಿರುಪತಿಯಲ್ಲಿ ಶ್ರೀವೇಂಕಟಾಚಲಪತಿ ಶ್ರೀ ಗೋವಿಂದರಾಜ ಸ್ವಾಮಿ ಮುಂತಾದವರಿಗೆ ಉಚಿತವಾದ ಕೈಂಕರ್ಯಗಳನ್ನು ಸೂಕ್ತ ಕಾಲದಲ್ಲಿ ಜರುಗಿಸುವಂತೆ ತಾವು ಪೂರ್ಣವರ್ಣಸೂಕ್ತರಾಗಿ ಪರಮ ಭಕ್ತಿ ನಿಷ್ಠರಾಗಿ ಪರಮ ವಿರಕ್ತರಾಗಿ ಒಬ್ಬರನ್ನು ಒಂದು ಜಾಗದಲ್ಲಿ ಪ್ರತಿಷ್ಠಾಪನೆ ಮಾಡಿ, ಅವರಿಗೆ ಅಯೋಧ್ಯ ರಾಮಾನುಜ ಅಯ್ಯಂಗಾರ್ ಎಂದು ಹೆಸರನಿಟ್ಟು ಎರಡು ಬಾರಿ ಸ್ವತಂತ್ರಾಧಿಕಾರವನ್ನು ಜರುಗಿಸ ಬೇಕೆಂದು ಕಟ್ಟಪ್ಪಣೆಯನ್ನು ಮಾಡಿದರು.

ಇವರ ಕಾಲಕ್ಕೂ ಹಿಂದೆ ತುಳುವ ಸಾಲುವ ರಾಜರ ಕಾಲದಲ್ಲಿ ಶ್ರೀಗೋವಿಂದರಾಜು ಸ್ವಾಮಿಯ ವೈಭವ(ಐಶ್ವರ್ಯ)ಕ್ಕೆ ಒಂದು ತೊಂದರೆಯುಂಟಾಗಿದ್ದಕ್ಕಾಗಿ ಆಗ ಶ್ರೀಧನಾಗಾರಕ್ಕೆ ಧರ್ಮಕರ್ತರಾದ ಆಳ್ವಾರ್ ಗೋವಿಂದಜಿಯ್ಯರ್ ಎಂಬೊಬ್ಬರೇ ಅಲ್ಲ ಶ್ರೀ ವೈಷ್ಣವರೆಲ್ಲರಿಗೆ ತಿಳಿಯಬೇಕೆಂದು ತಾವು ಒಂದು ಅಸಾಧಾರಣವಾದ ಘಂಟೆಯೊಂದನ್ನು ಮಾಡಿಸಿಕೊಂಡು ಸ್ವಾಮಿ ಕೈಂಕರ್ಯ ನಿಮಿತ್ತವಾಗಿ ಪ್ರಾಣ ತ್ಯಾಗ ಮಾಡುವುದಾಗಿ ಗೋಪುರವೇರಿ ಕೆಳಗೆ ಬಿದ್ದರು. ಆಗ ಶ್ರೀಗೋವಿಂದರಾಜುಸ್ವಾಮಿ ಕೃಪಾಕಟಾಕ್ಷದಿಂದಾಗಿ ಪ್ರಾಣಹಾನಿಯಾಗಲಿಲ್ಲ. ಕೈಗೆ ಒಂದಿಷ್ಟು ಗಾಯವಾಯಿತು. ಆ ಗಾಯಗಳು ಸಹಾ ಸ್ವಲ್ಪ ಕಾಲದಲ್ಲೇ ಮಾಸಿ ಹೋಯಿತು. ಆ ತೊಂದರೆಯೂ ಸಹಾ ತೊಲಗಿ ಹೋಗಲು ಅವರು ಮತ್ತೆ ಸ್ವಲ್ಪ ಕಾಲ ಘಂಟಾನಾದ. ಹನುಮದ್ಧ್ವಜ ಪುರಸ್ಸರದಂತಹ ಸ್ವಾಮಿ ಕೈಂಕರ್ಯಗಳನ್ನು ನೆರವೇರಿಸುತ್ತಿದ್ದರು.


(ಮುಂದುವರೆಯುತ್ತದೆ)

**ಆಗಸ್ಟ್ ತಿಂಗಳ ರಸಪ್ರಶ್ನೆಯ ಉತ್ತರಗಳು**

01. ಮಹಾಬುದ್ಧಿಶಾಲಿ
02. ಕುದುರೆಯ ತಲೆ
03. ಅನುಸ್ವಾಲ
04. ಅಷ್ಟಮ ಸಂತಾನ
05. ಚಾಮರಾಜನಗರ
06. ವರಮಹಾಲಕ್ಷ್ಮಿ
07. ಅಹೋಬಲಾಚಾರ್ಯರು
08. ವರಮಹಾಲಕ್ಷ್ಮಿ
09. ಶ್ರೀ ಲಕ್ಷ್ಮಿಕಾಂತ
10. ಶೆಲ್ವ
11. ವೃಷಭಮಾಸ
12. ಶ್ರೀ ರಂಗನಾಥ
13. ದಶರಥನ
14. ಶಿವನನ್ನು
15. ಗಣೇಶ

# ಮಹರ್ಷಿ ವಾಲ್ಮೀಕಿ

ಶ್ರೀಮತಿ ಕೆ. ವಿ. ಪದ್ಮಾವತಿ
97437 22327



ವಾಲ್ಮೀಕಿ ರಾಮಾಯಣದ ಒಂದು ಪಾತ್ರವಾಗಿಯೇ ಇದ್ದು ಅದನ್ನು ರಚಿಸಿದ. ರಾಮಾಯಣದ ಸನ್ನಿವೇಶ, ಘಟನೆ, ಪಾತ್ರಗಳ ಸಮ ಕಾಲೀನನಾಗಿದ್ದು ಅದೆಲ್ಲವನ್ನು ನೋಡಿ ಆದರ್ಶವನ್ನೇ ತನ್ನ ಕಾವ್ಯದರ್ಶನವನ್ನಾಗಿ ವಾಲ್ಮೀಕಿ ರಾಮಾಯಣದಲ್ಲಿ ಒಡಮೂಡಿಸಿದ್ದಾನೆ. ರಾಮಾಯಣ ಒಟ್ಟಾರೆ ವಾಲ್ಮೀಕಿ ಎನ್ನುವ ಪರ್ವತದಿಂದ ಹರಿಯ ಬಂದಿರುವ ಪವಿತ್ರಪುಣ್ಯನದಿ.

ವಲ್ಮೀಕದಿಂದ, ಹುತ್ತದಿಂದ ಹೊರಬಂದು ಋಷಿಮುನಿಯಾಗಿ ರಾಮಾಯಣದಂತಹ ಅಭೂತಪೂರ್ವ ಕೃತಿಯನ್ನು ಜಗತ್ತಿಗೆ ನೀಡಿ, ಸೂರ್ಯ ಚಂದ್ರರಿರುವರೆಗೂ ಅಮರ ತಪಸ್ವಿಯಾಗುಳಿದವರೇ ವಾಲ್ಮೀಕಿ. ತಪಸ್ಸು ಮುಗಿಸಿ ಬಂದಾಗ ನಾರದರ ದರ್ಶನವಾಯಿತು. ಅವರಲ್ಲಿ ವಾಲ್ಮೀಕಿ ಒಂದು ಪ್ರಶ್ನೆ ಕೇಳುತ್ತಾರೆ. "ಕೋನ್ವಸ್ಮಿನ್ ಸಾಂಪ್ರತಂ ಲೋಕೇ" ಎನ್ನುತ್ತಲೇ ಜಗತ್ತಿನ ಅತ್ಯಂತ ಶ್ರೇಷ್ಠ ಹದಿನಾರು ದಿವ್ಯಗುಣಗಳು ಏಕಕಾಲದಲ್ಲಿ ಇರುವ ಮಹಾ ಪುರುಷರು ಯಾರಾದರೂ ಇದ್ದಾರೆಯೇ ಎಂಬುದೇ ಆ ಪ್ರಶ್ನೆ. ಶ್ರೀರಾಮಚಂದ್ರನೇ ಆ ಗುಣ ಶ್ರೇಷ್ಠ ಎಂದು ನಾರದರಿಂದ ಉತ್ತರ ದೊರಕಿತು.

ನಾರದರಿಂದ ಬೀಳ್ಕೊಂಡ ವಾಲ್ಮೀಕಿ ಸ್ನಾನಕ್ಕೆ ತಮಸಾ ನದಿ ತೀರಕ್ಕೆ ಬರುತ್ತಾನೆ. ದಡದಲ್ಲಿದ್ದ ಮರದ ಮೇಲೆ ಪರಸ್ಪರ ವಿಹರಿಸುತ್ತಿದ್ದ ಗಂಡು ಹೆಣ್ಣು ಕ್ರೌಂಚಪಕ್ಷಿಯನ್ನು ನೋಡಿದ. ಅಷ್ಟರಲ್ಲಿ ಬೇಡನೊಬ್ಬ ಬಿಟ್ಟ ಬಾಣಕ್ಕೆ ಗಂಡು ಪಕ್ಷಿ ಉರುಳಿ ಪ್ರಾಣ ಬಿಟ್ಟಿತು. ಹೆಣ್ಣು ಪಕ್ಷಿ ರೋಧಿಸುತ್ತಿರುವುದನ್ನು ಕಂಡು ಕರುಣೆಯಿಂದ ಕೋಪಬಂದು ಬೇಡನಿಗೆ ಶಾಪ ನೀಡಿದ. ಆ ಶಾಪ "ಮಾನಿಷಾದ ಪ್ರತಿಷ್ಠಾಂ"ಎಂಬ ಶ್ಲೋಕವಾಗಿ ಪರಿಣಮಿಸಿತು. ಬ್ರಹ್ಮನ ದರ್ಶನವಾಗಿ ಬ್ರಹ್ಮ "ಶ್ಲೋಕದ ದಾಟಿಯಲ್ಲಿಯೇ ರಾಮಾಯಣ ರಚಿಸು, ಭೂಮಿಯ ಮೇಲೆ ಬೆಟ್ಟ ನದಿಗಳಿರುವವರೆಗೂ ರಾಮಾಯಣ ಪ್ರಚಲಿತವಿರುತ್ತದೆ" ಎಂದು ಆದೇಶ ನೀಡಿದ.

ವಾಲ್ಮೀಕಿಯು ನಿಜವಾದ ತಪಸ್ಸಿಗೆ ಕುಳಿತು ರಚಿಸಿದ ರಾಮಾಯಣದಲ್ಲಿ 24,000 ಶ್ಲೋಕಗಳಿವೆ. ರಾಮಾಯಣವನ್ನು ಕಾವ್ಯವಾಗಿ, ಪ್ರವಚನರೂಪದಲ್ಲಿ ಅದ್ಭುತವಾಗಿ ಆಸ್ವಾದಿಸಬೇಕಾದರೆ ಅದು ಎಂತಹವರು ತುಂಬಿದ ಸಭೆಯಾಗಿರಬೇಕು ಎಂಬುದನ್ನು ವಾಲ್ಮೀಕಿಯೇ ತಿಳಿಸುತ್ತಾರೆ.

ವೇದಪುರಾಣ ಬಲ್ಲವರು, ಶಬ್ದವಿದ್ದರು, ಸಂಗೀತ ಕಲಾಕೋವಿದರು, ಛಂದೋವಿದರು, ಭಾಷಾಸಾಹಿತ್ಯ, ಜ್ಯೋತಿಷ್ಯ, ಚಿತ್ರ ನಾಟ್ಯ ಶಾಸ್ತ್ರಬಲ್ಲವರು, ಶಾಸ್ತ್ರತರ್ಕ, ನೀತಿ, ಧರ್ಮ ಬಲ್ಲವರು, ವೇದಾಂತಾರ್ಥ ಪ್ರಬೋಧಕರೂ ಆದವರು ಇದ್ದರೆ ರಾಮಾಯಣವನ್ನು ಅಪೂರ್ವವಾಗಿ ರಸಾಸ್ವದನೆ ಮಾಡಬಹುದು ಎಂದು ಸೂಚಿಸುತ್ತಾರೆ.

ರಾಮಾಯಣ ಗಾಯತ್ರಿ ಅರ್ಥದ ವಿಸ್ತಾರವೇ ಆಗಿದೆ. ಗಾಯತ್ರಿ ಮಂತ್ರದ 24 ಅಕ್ಷರಗಳೇ 24,000 ಶ್ಲೋಕವಾಗಿ ರಾಮಾಯಣದಲ್ಲಿ ಪಲ್ಲವವಾಗಿದೆ. ರಾಮಾಯಣದಲ್ಲಿ ಸೀತಾ ಪರಿತ್ಯಾಗದ ಸಂದರ್ಭದಲ್ಲಿ ರಾಮಚಂದ್ರ ಲಕ್ಷ್ಮಣನನ್ನು ಕರೆದು ಸೀತೆಯನ್ನು ವಾಲ್ಮೀಕಿಯ ಆಶ್ರಮದ ಬಳಿಯೇ ಬಿಟ್ಟು ಬಾ ಎನ್ನುತ್ತಾನೆ, ಏಕೆಂದರೆ ರಾಮಚಂದ್ರನಿಗೆ ವಾಲ್ಮೀಕಿಯ ಬಗ್ಗೆ ವಿಶಿಷ್ಟ ಗೌರವ, ಪೂಜ್ಯತೆ, ಭರವಸೆಗಳಿದ್ದವು. ಗರ್ಭಿಣಿಯಾಗಿದ್ದ ಸೀತೆ ಲವಕುಶರನ್ನು ಹಡೆದದ್ದು ಪಡೆದದ್ದು ವಾಲ್ಮೀಕಿಗಳ ಆಶ್ರಮದಲ್ಲಿಯೇ, ಅವರಿಗೆ ಗುರುಕುಲ ಸಂಸ್ಕಾರ ನೀಡಿ ವಾಲ್ಮೀಕಿ

ಸುಸಂಸ್ಕೃತರನ್ನಾಗಿ ಬೆಳೆಸುತ್ತಾರೆ. ರಾಮಾಯಣ ರಚನೆ ಪೂರ್ಣವಾದಾಗ, ಅದನ್ನು ಮೊಟ್ಟಮೊದಲು ಲವಕುಶರಿಗೆ ಅನುಗ್ರಹಿಸಲು ವಾಲ್ಮೀಕಿ ನಿರ್ಧರಿಸುತ್ತಾನೆ. ಅದಕ್ಕೆ ಮುನ್ನ ಅವರ ಪ್ರತಿಭೆ, ವಿದ್ವತ್ತು ಸಾಮರ್ಥ್ಯ ಯೋಗ್ಯತೆಯನ್ನು ಪರೀಕ್ಷಿಸುತ್ತಾನೆ. ಲವಕುಶರಿಗೆ ಪ್ರಚಂಡ ಮೇಧಾಶಕ್ತಿಯಿತ್ತು. ವೇದಾರ್ಥ ನಿರೂಪಣಾ ಸಾಮರ್ಥ್ಯವಿತ್ತು. ಸಂಗೀತ ವಿದ್ಯೆಯ ಮರ್ಮ ಗೊತ್ತಿತ್ತು, ಆಧ್ಯಾತ್ಮವಿದ್ಯೆಯ ಧರ್ಮ ಗೊತ್ತಿತ್ತು. ಇಬ್ಬರ ಶಾರೀರ ಸಮನ್ವಯ ಅತ್ಯಂತ ಹೊಂದಿಕೊಂಡಿತ್ತು. ಮೃದು ಮಧುರವಾಗಿ ಮಧುಮಧಾರವಾಗಿ ದೇವಗಾಂಧಾರದಲ್ಲಿ ಹಾಡುವ ಇಂಪು ಅವರಿಗಿತ್ತು. ಎಲ್ಲಕ್ಕೂ ಮಿಗಿಲಾಗಿ ಅವರು ಅತ್ಯಂತ ರೂಪಸಂಪನ್ನರಾಗಿದ್ದರು. ಇಡೀ ರಾಮಾಯಣ ಅವರಿಬ್ಬರಿಗೂ ವಾಚೋವಿಧೇಯವಾಗಿತ್ತು. ಹಾಡಿನೊಡನೆ ವೀಣಾಗಾನ ಮಾಡುತ್ತಾ ಅಗತ್ಯ ಬಿದ್ದರೆ ಪ್ರವಚನವನ್ನು ಮಾಡ ಬಲ್ಲವರಾಗಿದ್ದರು.

ರಾಮಾಯಣದ ಸಂಪೂರ್ಣ ಅನುಗ್ರಹವನ್ನು ಅವರಿಗೆ ಮಾಡಿಸಿದ ವಾಲ್ಮೀಕಿ ಕಾಡಿನ ಋಷಿಮುನಿ ವಿದ್ವಾಂಸರುಗಳನ್ನು ಆಹ್ವಾನಿಸಿ ಅವರೆದುರಿಗೆ ಪ್ರಥಮ ಪ್ರಯೋಗವನ್ನು ಲವಕುಶರಿಂದ ಮಾಡಿಸಿದರು. ಅಲ್ಲಿದ್ದ ಮಹಾನುಭಾವರನ್ನೆಲ್ಲಾ ತಮ್ಮ ಅಮೋಘ ಪ್ರಸ್ತುತಿಯಿಂದ ರಾಮಾಯಣ ಪಾರಾಯಣರನ್ನಾಗಿ ಲವಕುಶರು ಮಾಡವಲ್ಲಿ ಯಶಸ್ವಿಯಾದರು. ಅವರೆದುರೇ ನಡೆಯಿತೇನೋ ಎನ್ನುವಂತೆ ಬಣ್ಣಿಸಿದರು. ಕಾಡಿನ ಆ ಋಷಿಗಳು ಲವಕುಶರಿಗೆ ಕೌಪೀನ, ಗುದ್ದಲಿ, ಹಗ್ಗ ಸೆನಿಕೆ, ಕಮಂಡಲ, ನಾರುಮಡಿ, ಸಮಿತ್ತು, ಚಾಪೇ, ಯಜ್ಞೋಪವೀತ, ಕೃಷ್ಣಾಜಿನ, ಜಪಮಾಲೆ, ಮುಂತಾದವನ್ನು ಬಹುಮಾನ ನೀಡಿದರು. ಇದೊಂದು ವಿಸ್ಮಯ, ಅದ್ಭುತ ಮಹಾಕಾವ್ಯ ಎಂದು ಕೆಲವರೆಂದರೆ ಮತ್ತೆ ಕೆಲವರು "ಮುಂದೆ ಬರ ಅರುವ ಅನೇಕ ಕವಿಗಳಿಗೆ ಇದು ಜೀವನಾಧಾರವಾಗುತ್ತದೆ" ಎಂದರು.

ಹಾಗೆಯೇ ಇಂದು ಲಕ್ಷ ಲಕ್ಷ ಜನರಿಗೆ ರಾಮಾಯಣ, ನಾಟಕ, ಚಲನಚಿತ್ರ, ಧಾರಾವಾಹಿ, ಕಥೆ ಕಾದಂಬರಿ, ಚಿತ್ರಕಲೆ, ಸಂಗೀತ, ಶಿಲ್ಪಕಲೆ ಮುಂತಾದ ಪ್ರಕಾರದಲ್ಲಿ ರಾಮಾಯಣವನ್ನು ತೊಡಗಿಸಿಕೊಂಡು ಆದರಿಂದ ಬದುಕನ್ನು ಕಟ್ಟಿಕೊಂಡಿದ್ದಾರೆ. ಭಾರತದಲ್ಲಿ ಹಾಗೂ ಜಗತ್ತಿನ ನಾನಾ ದೇಶಗಳಲ್ಲಿ ಇಂದಿಗೂ ರಾಮನವಮಿ,ರಾಮಕಥಾ, ರಾಮ ಸಂಗೀತ ವ್ಯಾಪಕವಾಗಿ ಆಚರಣೆಯಲ್ಲಿದೆ.



ವಾಲ್ಮೀಕಿ ಚಿತ್ರಿಸಿದ ರಾಮಾಯಣ ಇಕ್ಷ್ವಾಕ್ಷುವಂಶದ ದೊರೆಗಳ ಸಾಧನೆ,ತ್ಯಾಗ, ಶೌರ್ಯ, ಧರ್ಮಶ್ರದ್ಧೆ, ದೈವಭಕ್ತಿ, ಸತ್ಯ,ನ್ಯಾಯ ಪ್ರಜಾ ಸಂರಕ್ಷಣೆಗಳನ್ನು ಮೌಲ್ಯಗಳನ್ನು ಮಾಡಿಕೊಂಡು ಬದುಕಿದ ಕಥೆಯನ್ನು ನಿರೂಪಿಸುತ್ತದೆ. ವಾಲ್ಮೀಕಿ ಚಿತ್ರಿಸಿದ ರಾಮಚಂದ್ರ ಪುರುಷೋತ್ತಮನಾದ, ಆದರ್ಶ ದೊರೆಯಾದ.ಧರ್ಮವೇ ಬಂಧಮೋಕ್ಷಕ್ಕೆ ದಾರಿ ಎಂದು ತೋರಿಸಿ ಪಿತೃವಾಕ್ಯ ಪರಿಪಾಲನೆಗಾಗಿ ವನವಾಸಕ್ಕೂ ಸಿದ್ಧನಾದ ಲಕ್ಷ್ಮಣ ಭರತರು ಭ್ರಾತೃಪ್ರೇಮದ ಮಹತ್ವವನ್ನು ಮೆರೆದರು.

ಕೌಸಲ್ಯೆ ಮಾತೃ ಹೃದಯಿಯಾದ ಮಮತಾಮಾಯಿ ಹೇಗಿ ರಬೇಕೆಂದು ತೋರಿಸಿದರು. ಸೀತೆ ನಾರೀಕುಲಕ್ಕೆ ಆದರ್ಶ ವಾದರು, ಹನುಮಂತ ರಾಮಭಕ್ತನಾಗಿ ಸೇವೆ ಮಾಡುವ ಪರಿಯನ್ನು ನೋಡಿ ದೇವತೆಗಳು ಮೂಕವಿಸ್ಮಿತರಾದರು. ಅಯೋಧ್ಯೆಯ ಪ್ರಜೆಗಳು ಧೈರ್ಯ ಆದರ್ಶ ಮೌಲ್ಯಗಳಿಂದ ಸಾರ್ಥಕ ಜೀವನ ನಡೆಸಿದರು.

ವಾಲ್ಮೀಕಿ ರಾಮಾಯಣದ ಒಂದು ಪಾತ್ರವಾಗಿಯೇ ಇದ್ದು ಅದನ್ನು ರಚಿಸಿದ. ರಾಮಾಯಣದ ಸನ್ನಿವೇಶ, ಘಟನೆ, ಪಾತ್ರಗಳ ಸಮಕಾಲೀನನಾಗಿದ್ದು ಅದೆಲ್ಲವನ್ನು ನೋಡಿ ಆದರ್ಶವನ್ನೇ ತನ್ನ ಕಾವ್ಯದರ್ಶನವನ್ನಾಗಿ ವಾಲ್ಮೀಕಿ ರಾಮಾಯಣದಲ್ಲಿ ಒಡ ಮೂಡಿಸಿದ್ದಾನೆ.

ಜಟಾಯು, ಶಬರಿ, ಗುಹ, ಇಂತಹ ಪಾತ್ರಗಳೂ ಮಹಾಪಾತ್ರಗಳಾಗಿ ಮೆರೆದಿರುವುದು ವಾಲ್ಮೀಕಿಯ ದಿವ್ಯ ಸಂಪನ್ನತೆಯಿಂದಾಗಿ, ರಾಮಾಯಣ ಒಟ್ಟಾರೆ ವಾಲ್ಮೀಕಿ ಎನ್ನುವ ಪರ್ವತದಿಂದ ಹರಿಯ ಬಂದಿರುವ ಪವಿತ್ರಪುಣ್ಯನದಿ.



ವಾಲ್ಮೀಕಿಯ ರಾಮಾಯಣವನ್ನು ಲವಕುಶರಿಗೆ ಹೇಳಿಕೊಟ್ಟಾಯಿತು. ಜಗತ್ತಿನೆಲ್ಲೆಡೆ ಅವರು ಅದನ್ನು ಪ್ರಸರಿಸುವ ಮುಂಚೆ, ರಾಮಚಂದ್ರನಿಗೆ ಅದನ್ನು ಕೇಳಿಸಬೇಕು ಎನ್ನಿಸಿತ್ತು ವಾಲ್ಮೀಕಿಗೆ.

ಆಗ ರಾಮಚಂದ್ರ ನೈಮಿಷಾರಣ್ಯದ ಗೋಮತಿ ನದಿ ತೀರದಲ್ಲಿ ತನ್ನ ಆಳ್ವಿಕೆಯ ಕಡೆಯ ಅಶ್ವಮೇಧಯಾಗ ಮಾಡುತ್ತಿದ್ದ. ದೇಶದ ನಾನಾ ಭಾಗಗಳಿಂದ, ನಾನಾ ಅರಣ್ಯ ತಪೋ ಪ್ರದೇಶಗಳಿಂದ ಜನ ತಂಡೋಪತಂಡವಾಗಿ ಆ ಯಾಗಕ್ಕೆ ಬಂದಿದ್ದರು. ಶಿಷ್ಯನನ್ನು ಲವಕುಶರನ್ನು ಕರೆದುಕೊಂಡು ವಾಲ್ಮೀಕಿಗಳು ಅಲ್ಲಿಗೆ ಬಂದರು.

ರಾಮನ ಗಮನ ಸೆಳೆಯಲು ವಾಲ್ಮೀಕಿಗಳು ಲವಕುಶರಿಗೆ ಒಂದು ಉಪಾಯ ಹೇಳಿಕೊಟ್ಟನು. ರಾಮಚಂದ್ರನ ಅಪ್ತರ ಬಿಡಾರಗಳ, ಯಾತ್ರಿಕರ ಬಿಡಾರದ ಮುಂದೆ, ಅವರ ಬಿಡುವಿನ ವೇಳೆಯಲ್ಲಿ ರಾಮಾಯಣ ಹಾಡಿ ಎಂದು ಯಾರಿಂದಲೂ ಏನೂ ಪಡೆಯಕೂಡದು ಅದಕ್ಕಾಗಿ ಎಂದೂ ಸೂಚಿಸಿದರು. ಹಾಗೆಯೇ ನಡೆದು ಅವರೆಲ್ಲ ರಾಮನಿಗೆ ಒತ್ತಾಯಿಸಿ, ಕಡೆಗೆ ಮಕ್ಕಳಿಗೆ ಸಭೆಯಲ್ಲಿ ಹಾಡಲು ಅವಕಾಶ ದೊರೆಯಿತು.

ಸಭೆಯಲ್ಲಿ ನೆರೆದಿದ್ದ ಜನತೆಗೆ ರಾಮನನ್ನೇ ಹೋಲುವ ಇಬ್ಬರು ಮಕ್ಕಳನ್ನು ನೋಡಿ ಕೌತುಕ. ಕೆಲವರಂತೂ ಬಿಂಬ ಪ್ರತಿಬಿಂಬಗಳಂತಿದ್ದಾರಲ್ಲ ಏನಾಶ್ಚರ್ಯ ಎಂದು ಮಾತನ್ನು ಆಡಿಕೊಂಡರು.

ಆದರೆ ಆ ಹುಡಗರು ಹಾಡುತ್ತಿದ್ದಂತೆ ಭಕ್ತಿ ಲೋಕದ ಅದ್ಭುತಗಳಿಂದ ತಮ್ಮ ಗಾಯನದಿಂದ ಎಲ್ಲರನ್ನು ಮೈಮರೆಸಿದರು.

ಎಲ್ಲ ಶ್ರೋತೃಗಳು ರಾಮಾಯಣದ ಧನ್ಯತೆಯಲ್ಲಿ ಮುಳುಗಿ ಕಣ್ಣೀರಿನಲ್ಲಿ ಬಗೆ ತೊಳೆಯುತ್ತಿರುವಾಗ, ನೆಲದ ಮೇಲೆ ಕುಳಿತೇ ಅವರೆಲ್ಲಾ ಆ ದಿವ್ಯಾನಂದ ಸವಿಯುತ್ತಿರುವಾಗ, ತಾನೊಬ್ಬ ಮಾತ್ರ ಚಕ್ರವರ್ತಿಯಂತೆ ಸಿಂಹಾಸನದ ಮೇಲೆ ಕುಳಿತು ರಾಮಾಯಣ ಕೇಳುವುದು ಸರಿಯಲ್ಲ ಎನಿಸಿತು. ಸಭಾಸದರೆಲ್ಲಾ ರಾಮಾಯಣ ಕೇಳುತ್ತಾ ಕಣ್ಣು ಮುಚ್ಚಿದ್ದಾಗ, ರಾಮ ಶಬ್ದವಾಗದಂತೆ ಸಿಂಹಾಸನದಿಂದ ಇಳಿದು ಬಂದು, ತಾನೂ ನೆಲದ ಮೇಲೆ ಕುಳಿತು ರಾಮಾಯಣವನ್ನು ಸವಿಯುತ್ತಾನೆ.

ಗಾಯನ ಮುಗಿದೊಡನೆಯೇ ಎಲ್ಲರೂ ಕಣ್ಣು ಬಿಟ್ಟಾಗ ರಾಜನೇ ಕಾಣುತ್ತಿಲ್ಲ. ವ್ಯಾಪಾಕ ಹುಡುಕಾಟದ ನಂತರ ವಸಿಷ್ಠರು, ಜನರ ಮಧ್ಯೆ ಕಣ್ಣೀರು ಹಾಕುತ್ತಿದ್ದ ರಾಮನನ್ನು ಕಂಡು ಓಡಿಬಂದು, ರಾಮ, ಚಕ್ರವರ್ತಿನೆಲದ ಮೇಲೆ ಕೂಡ ಬಾರದು. ನೀನು ಇಲ್ಲಿಗೇಕೆ ಬಂದೆ ಎಂದಾಗ ರಾಮಚಂದ್ರ ಕಣ್ಣೀರು ಒರೆಸಿಕೊಂಡು ಹೇಳಿದ. "ಈ ರಾಮಾಯಣ ಸಾಧಾರಣದ್ದಲ್ಲ. ಇದು ಭೂತಿಕರಂ ಮಮಾಪಿ" ಇದು ನನ್ನನ್ನೂ ಪವಿತ್ರಗೊಳಿಸಿಬಿಟ್ಟಿದೆ.

ಇದನ್ನು ಸಿಂಹಾಸನದಲ್ಲಿ ರಾಜಭಾವದಿಂದ ಕೇಳುವುದಲ್ಲ, ಭಕ್ತನಾಗಿ ನೆಲದ ಮೇಲೆ ಕುಳಿತು ಅದರಲ್ಲೇ ಮುಳುಗಿ ಸವಿಯಬೇಕು" ಎಂದ. ಲವಕುಶರನ್ನು ಪ್ರಭು ನೀವು ಯಾರು ಎಂದಾಗ, ಅವರು ನಾವು ವಾಲ್ಮೀಕಿ ಋಷಿಗಳ ಶಿಷ್ಯರು. ಈ ರಾಮಾಯಣವನ್ನು ಅವರೇ ರಚಿಸಿದ್ದಾರೆ" ಎಂದಾಗ ರಾಮ ಎದ್ದು ನಿಂತು ಧನ್ಯತಾ ಭಾವದಿಂದ ಕೈ ಮುಗಿದು ವಾಲ್ಮೀಕಿಗೆ ತನ್ನ ದಿವ್ಯ ಗೌರವವನ್ನು ಸಮರ್ಪಿಸಿದ."

## ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಶ್ರೀ ವೆಂಕಟೇಶ್ವರಸ್ವಾಮಿ ಗೋವಿಂದನಾಮಗಳು

ಶ್ರೀ ಶ್ರೀನಿವಾಸ ಗೋವಿಂದಾ
ಶ್ರೀ ವೆಂಕಟೇಶ ಗೋವಿಂದಾ
ಭಕ್ತವತ್ಸಲ ಗೋವಿಂದಾ
ಭಾಗವತಪ್ರಿಯ ಗೋವಿಂದಾ
ನಿತ್ಯನಿರ್ಮಲ ಗೋವಿಂದಾ
ನೀಲಮೇಘಶ್ಯಾಮ ಗೋವಿಂದಾ
ಪುರಾಣಪುರುಷ ಗೋವಿಂದಾ
ಪುಂಡರೀಕಾಕ್ಷ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ನಂದನಂದನ ಗೋವಿಂದಾ
ನವನೀತಚೋರ ಗೋವಿಂದಾ
ಪಶುಪಾಲಕ ಶ್ರೀ ಗೋವಿಂದಾ
ಪಾಪವಿಮೋಚನ ಗೋವಿಂದಾ
ದುಷ್ಟಸಂಹಾರ ಗೋವಿಂದಾ
ದುರಿತನಿವಾರಣ ಗೋವಿಂದಾ
ಶಿಷ್ಟಪರಿಪಾಲಕ ಗೋವಿಂದಾ
ಕಷ್ಟನಿವಾರಣ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ವಜ್ರಮಕುಟಧರ ಗೋವಿಂದಾ
ವರಾಹಮೂರ್ತಿ ಗೋವಿಂದಾ
ಗೋಪೀಜನಲೋಲ ಗೋವಿಂದಾ
ಗೋವರ್ಧನೋದ್ಧಾರ ಗೋವಿಂದಾ
ದಶರಥನಂದನ ಗೋವಿಂದಾ
ದಶಮುಖಮರ್ದನ ಗೋವಿಂದಾ
ಪಕ್ಷಿವಾಹನ ಗೋವಿಂದಾ
ಪಾಂಡವಪ್ರಿಯ ಗೋವಿಂದಾ
ಗೋವಿಂದ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಮತ್ಸ್ಯಕೂರ್ಮ ಗೋವಿಂದಾ
ಮಧುಸೂದನ ಹರಿ ಗೋವಿಂದಾ
ವರಾಹ ನರಸಿಂಹ ಗೋವಿಂದಾ
ವಾಮನ ಭೃಗುರಾಮ ಗೋವಿಂದಾ
ಬಲರಾಮಾನುಜ ಗೋವಿಂದಾ
ಬೌದ್ಧಕಲ್ಕಿಧರ ಗೋವಿಂದಾ
ವೇಣುಗಾನಪ್ರಿಯ ಗೋವಿಂದಾ
ವೆಂಕಟರಮಣ ಗೋವಿಂದಾ
ಗೋವಿಂದ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಸೀತಾನಾಯಕ ಗೋವಿಂದಾ
ಶ್ರಿತಪರಿಪಾಲಕ ಗೋವಿಂದಾ
ದರಿದ್ರಜನಪೋಷಕ ಗೋವಿಂದಾ
ಧರ್ಮಸಂಸ್ಥಾಪಕ ಗೋವಿಂದಾ
ಅನಾಥರಕ್ಷಕ ಗೋವಿಂದಾ
ಆಪತ್‌ಬಾಂಧವ ಗೋವಿಂದಾ

ಶರಣಾಗತವತ್ಸಲ ಗೋವಿಂದಾ
ಕರುಣಾಸಾಗರ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಕಮಲದಳಾಕ್ಷ ಗೋವಿಂದಾ
ಕಾಮಿತಫಲದಾ ಗೋವಿಂದಾ
ಪಾಪವಿನಾಶಕ ಗೋವಿಂದಾ
ಪಾಹಿಮುರಾರೆ ಗೋವಿಂದಾ
ಶ್ರೀಮುದ್ರಾಂಕಿತ ಗೋವಿಂದಾ
ಶ್ರೀವತ್ಸಾಂಕಿತ ಗೋವಿಂದಾ
ಧರಣೀನಾಯಕ ಗೋವಿಂದಾ
ದಿನಕರತೇಜ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಪದ್ಮಾವತಿಪ್ರಿಯ ಗೋವಿಂದಾ
ಪ್ರಸನ್ನಮೂರ್ತಿ ಗೋವಿಂದಾ
ಅಭಯಹಸ್ತಪ್ರದರ್ಶನ ಗೋವಿಂದಾ
ಮತ್ಸ್ಯಾವತಾರ ಗೋವಿಂದಾ
ಶಂಖಚಕ್ರಧರ ಗೋವಿಂದಾ
ಶಾರ್ಙ್ಗಗದಾಧರ ಗೋವಿಂದಾ
ವಿರಜಾಸ್ಥ ತೀರ್ಥ ಗೋವಿಂದಾ
ವಿರೋಧಿಮರ್ದನ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಸಾಲಗ್ರಾಮಧರ ಗೋವಿಂದಾ
ಸಹಸ್ರನಾಮ ಗೋವಿಂದಾ
ಲಕ್ಷ್ಮೀವಲ್ಲಭ ಗೋವಿಂದಾ
ಲಕ್ಷ್ಮಣಾಗ್ರಜ ಗೋವಿಂದಾ
ಕಸ್ತೂರಿ ತಿಲಕ ಗೋವಿಂದಾ
ಕಾಂಚನಾಂಬರಧರ ಗೋವಿಂದಾ
ಗರುಡವಾಹನ ಗೋವಿಂದಾ
ಗಜರಾಜರಕ್ಷಕ ಗೋವಿಂದಾ
ಗೋವಿಂದ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ವಾನರಸೇವಿತ ಗೋವಿಂದಾ
ವಾರಧಿಬಂಧನ ಗೋವಿಂದಾ
ಎಳುಬೆಟ್ಟದ ಒಡೆಯ ಗೋವಿಂದಾ
ಏಕಸ್ವರೂಪ ಗೋವಿಂದಾ
ಶ್ರೀರಾಮಕೃಷ್ಣ ಗೋವಿಂದಾ
ರಘುಕುಲನಂದನ ಗೋವಿಂದಾ
ಪ್ರತ್ಯಕ್ಷದೇವ ಗೋವಿಂದಾ
ಪರಮದಯಾಕರ ಗೋವಿಂದಾ
ಗೋವಿಂದ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ವಜ್ರಕವಚಧರ ಗೋವಿಂದಾ
ವೈಜಯಂತಿಮಾಲ ಗೋವಿಂದಾ

ಬಡ್ಡಿಯಕಾಸಿನ ಗೋವಿಂದಾ
ವಸುದೇವತನಯ ಗೋವಿಂದಾ
ಬಿಲ್ವಪತ್ರಾರ್ಚಿತ ಗೋವಿಂದಾ
ಭಿಕ್ಷುಕ ಸಂಸ್ತುತ ಗೋವಿಂದಾ
ಸ್ತ್ರೀಪುಂರೂಪ ಗೋವಿಂದಾ
ಶಿವಕೇಶವಮೂರ್ತಿ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಬ್ರಹ್ಮಾಂಡರೂಪ ಗೋವಿಂದಾ
ಭಕ್ತ ರಕ್ಷಕ ಗೋವಿಂದಾ
ನಿತ್ಯಕಲ್ಯಾಣ ಗೋವಿಂದಾ
ನೀರಜನಾಭ ಗೋವಿಂದಾ
ಹಾಥೀರಾಮಪ್ರಿಯ ಗೋವಿಂದಾ
ಹರಿಸರ್ವೋತ್ತಮ ಗೋವಿಂದಾ
ಜನಾರ್ದನಮೂರ್ತಿ ಗೋವಿಂದಾ
ಜಗತ್ಸಾಕ್ಷಿರೂಪ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಅಭಿಷೇಕಪ್ರಿಯ ಗೋವಿಂದಾ
ಆಪನ್ನಿವಾರಣ ಗೋವಿಂದಾ
ರತ್ನಕಿರೀಟ ಗೋವಿಂದಾ
ರಾಮಾನುಜನುತ ಗೋವಿಂದಾ
ಸ್ವಯಂಪ್ರಕಾಶ ಗೋವಿಂದಾ
ಆಶ್ರಿತಪಕ್ಷ ಗೋವಿಂದಾ
ನಿತ್ಯಶುಭಪ್ರದ ಗೋವಿಂದಾ
ನಿಖಿಲಲೋಕೇಶ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ
ಆನಂದರೂಪ ಗೋವಿಂದಾ
ಆದ್ಯಂತರಹಿತ ಗೋವಿಂದಾ
ಇಹಪರದಾಯಕ ಗೋವಿಂದಾ
ಇಭರಾಜರಕ್ಷಕ ಗೋವಿಂದಾ
ಪರಮದಯಾಳೋ ಗೋವಿಂದಾ
ಪದ್ಮನಾಭ ಹರಿ ಗೋವಿಂದಾ
ತಿರುಮಲೆವಾಸ ಗೋವಿಂದಾ
ತುಲಸೀವನಮಾಲ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಶೇಷಾದ್ರಿನಿಲಯ ಗೋವಿಂದಾ
ಶೇಷಶಾಯಿಯೆ ಗೋವಿಂದಾ
ಶ್ರೀ ಶ್ರೀನಿವಾಸ ಗೋವಿಂದಾ
ಶ್ರೀ ವೆಂಕಟೇಶ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಸರ್ವೇ ಜನಾ ಸುಖಿನೋಭವಂತು



# ಅಕ್ಟೋಬರ್ 2025 ತಿಂಗಳ ರಾಶಿ ಫಲಗಳು



**ಶ್ರೀಮಾತಾ ಅನುಗ್ರಹ**



## ಮೇಷ

ಅನೇಕ ಮೂಲಗಳಿಂದ ಲಾಭ ಬರುವುದು. ಆದಾಯ ಚೆನ್ನಾಗಿರುವುದು. ಸಮಾಜ ಸೇವೆಗಳಲ್ಲಿ ತೊಡಗುವಿರಿ. ವಿದೇಶಿ ವ್ಯಾಪಾರದಿಂದ ಲಾಭ. ವ್ಯಯಕ್ಕಿಂತ ಲಾಭವೇ ಹೆಚ್ಚು ಎನ್ನಬಹುದು. ಸಂಗಾತಿಯೊಂದಿಗೆ ಹೆಚ್ಚು ವಾದ ಮಾಡಲು ಹೋಗಬೇಡಿ. ಆರೋಗ್ಯದಲ್ಲಿ ನಿಗಾ ಇಡಿ. ಮಕ್ಕಳ ಆರೋಗ್ಯದಲ್ಲಿ ಗಮನವಿಡಿ. ತಾಯಿಯ ಆರೋಗ್ಯ ಸುಧಾರಿಸುವುದು.



## ವೃಷಭ

ಆರೋಗ್ಯದಲ್ಲಿ ಅಭಿವೃದ್ಧಿಯುಂಟಾಗುತ್ತದೆ. ಸಂಪತ್ ಸಮೃದ್ಧಿ ಉಂಟಾಗುತ್ತದೆ. ಹಳೆಯ ಸಾಲ ತೀರಿಸುವಿರಿ. ನ್ಯಾಯಾಲಯದಲ್ಲಿ ಗೆಲ್ಲುವಿರಿ. ಸಂಗಾತಿಯಿಂದ ಸುಖವಿರುತ್ತದೆ. ಜೀರ್ಣ ಶಕ್ತಿ ಚೆನ್ನಾಗಿರುತ್ತದೆ. ಬೇರೆಯವರ ಬಗ್ಗೆ ತಲೆಕೆಡಿಸಿ ಕೊಳ್ಳದೆ ನಿಮ್ಮ ಕೆಲಸವನ್ನು ಚೆನ್ನಾಗಿ ಮಾಡುತ್ತೀರಿ. ವಿರೋಧಿಗಳು ದೂರ ಸರಿಯುವರು. ಕೈಗೊಂಡ ಕೆಲಸ ಕಾರ್ಯಗಳು ನೆರವೇರುತ್ತದೆ. ದೂರಪ್ರಯಾಣದಿಂದ ಲಾಭ. ಮೇಲಧಿಕಾರಿಗಳಿಂದ ಅನುಕೂಲ.



## ಮಿಥುನ

ನಿಮ್ಮ ಆಸೆಗಳು ಫಲಿಸುತ್ತವೆ. ಅನೇಕ ಮೂಲಗಳಿಂದ ಧನ ಲಾಭವಾಗುತ್ತದೆ. ಭೋಗ ಜೀವನವನ್ನು ನಡೆಸುವಿರಿ. ಬಂಧು ಬಾಂಧವರಿಂದ ಸಹಾಯ ಸಿಗುತ್ತದೆ. ಎಲ್ಲರಿಂದಲೂ ಪ್ರಶಂಸೆಗೆ ಒಳಗಾಗುತ್ತೀರಿ. ವಿರೋಧಿಗಳು ಇರುವುದಿಲ್ಲ. ಅವಶ್ಯಕತೆ ಇರುವವರಿಗೆ ಸಹಾಯ ಮಾಡುವಿರಿ. ಮನೆಯಲ್ಲಿ ಶುಭ ಕಾರ್ಯಗಳು ನೆರವೇರುವುದು.



## ಕರ್ಕಾಟಕ

ಆಕಸ್ಮಿಕ ಧನ ಲಾಭವಾಗುವುದು. ವಿದ್ಯಾವಂತರ ಸಾಂಗತ್ಯ ದೊರೆಯುವುದು. ಆಸ್ತಿಯನ್ನು ಕೊಂಡುಕೊಳ್ಳುವಿರಿ. ಕೌಟುಂಬಿಕ ಜೀವನ ಚೆನ್ನಾಗಿರುವುದು. ಹೊಸ ವಾಹನ ಖರೀದಿಸುವಿರಿ. ವ್ಯಾಪಾರ ನಿಮಿತ್ತವಾಗಿ ಪ್ರಯಾಣ ಮಾಡಿ ಚೆನ್ನಾಗಿ ಸಂಪಾದಿಸುವಿರಿ. ಅವಿವಾಹಿತರಿಗೆ ವಿವಾಹ ಯೋಗವಿರುವುದು.



## ಸಿಂಹ

ಧನಾಗಮನ ಚೆನ್ನಾಗಿರುವುದು. ಆರೋಗ್ಯದಲ್ಲಿ ಸುಧಾರಣೆ, ಹೊಸ ವಸ್ತ್ರಾಭರಣ ಕೊಂಡುಕೊಳ್ಳುವಿರಿ . ಹೆಂಡತಿ ಮಕ್ಕಳಿಂದ ಸುಖವಿರುವುದು. ಸರ್ಕಾರದಿಂದ ಲಾಭ. ವಿದ್ಯಾಭ್ಯಾಸದಲ್ಲಿ ಯಶಸ್ಸು. ರಿಯಲ್ ಎಸ್ಟೇಟ್‌ನಿಂದ ಲಾಭ ನಿಮಗೆ ಬೇಕಾದ ನೌಕರಿ ಸಿಗುವುದು. ಇಷ್ಟ ಬಂದ ಜಾಗಕ್ಕೆ ವರ್ಗಾವಣೆಯಾಗುವುದು. ಸಾಲದಿಂದ ಮುಕ್ತರಾಗುವಿರಿ.



## ಕನ್ಯೆ

ಅವಿವಾಹಿತರಿಗೆ ವಿವಾಹ ಭಾಗ್ಯ. ಸಂತಾನಪೇಕ್ಷಿಗಳಿಗೆ ಸಂತಾನ. ವಿದ್ಯೆಯಲ್ಲಿ ಪ್ರಗತಿ. ಭೋಗ ಭಾಗ್ಯಗಳು ಲಭಿಸುವುದು. ವ್ಯಾಪಾರದಲ್ಲಿ ಅಭಿವೃದ್ಧಿ. ದ್ರವ ಪದಾರ್ಥಗಳ ಮಾರಾಟದಲ್ಲಿ ಲಾಭ. ಅಲಂಕಾರ ಪದಾರ್ಥಗಳು ಸುಗಂಧ ದ್ರವ್ಯ ಪದಾರ್ಥಗಳ ಮಾರಾಟದಿಂದ ಲಾಭವಿರುವುದು. ಮನೆಯಲ್ಲಿ ಶುಭಕಾರ್ಯಗಳು ನೆರವೇರುವುವು. ಆರೋಗ್ಯದಲ್ಲಿ ಸುಧಾರಣೆ. ನಿಮ್ಮ ಪ್ರಯತ್ನಗಳಲ್ಲಿ ಜಯ ಕಾಣುವಿರಿ.



## ತುಲಾ

ಆದಾಯದಿಂದ ಸುಖ. ಸ್ನೇಹಿತರ ಸಹಕಾರ ದೊರೆಯುವುದು. ಒಳ್ಳೆಯ ಆಹಾರ ಸೇವನೆ, ಸುಗಂಧದ್ರವ್ಯಗಳ ಬಳಕೆ, ವಸ್ತ್ರಾಭರಣಗಳ ಖರೀದಿ, ಸಂಗಾತಿಯಿಂದ ಸುಖ, ಭೋಗ ವಸ್ತುಗಳ ಖರೀದಿ ಮುಂತಾದ ಶುಭಫಲಗಳು ಉಂಟಾಗುತ್ತವೆ. ಸಹೋದರರ ಆರೋಗ್ಯದ ಬಗ್ಗೆ ಗಮನ ಕೂಡಿ.



## ವೃಶ್ಚಿಕ

ಸಾಕಷ್ಟು ಧನ ಸಂಪಾದಿಸುವಿರಿ. ಕೈ ಹಾಕಿದ ಕೆಲಸಗಳು ಕೈಗೂಡುವುದು. ಸಂಗಾತಿಯಿಂದ ಸುಖ ಹೆಚ್ಚು. ಆದಾಯವಿದ್ದರೂ ಅಷ್ಟೇ ಖರ್ಚು ಆಗುವುದು. ಲಲಿತ ಕಲೆಗಳಲ್ಲಿ ಆಸಕ್ತಿ. ಆರೋಗ್ಯದಲ್ಲಿ ಸುಧಾರಣೆ, ಮನೆಯಲ್ಲಿ ಶುಭಕಾರ್ಯ ಜರುಗುವಿಕೆ, ಸರ್ಕಾರದಿಂದ ಲಾಭ, ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಿ, ಉನ್ನತ ಅಧಿಕಾರ ಪ್ರಾಪ್ತಿ. ತಂದೆಯಿಂದ ಲಾಭ ಪಡೆಯುವಿರಿ.



## ಧನಸ್ಸು

ಆದಾಯಕ್ಕೆ ಅನೇಕ ದಾರಿಗಳಿರುವ ಕಾರಣ ದಾನ ಮಾಡುವ ಮನೋಭಾವ ಹೆಚ್ಚಾಗಿರುವುದು. ಶತ್ರುಗಳ ಮೇಲೆ ಜಯ ಸಾಧಿಸುವಿರಿ. ಸ್ನೇಹಿತರು ಸಹಾಯಕರಾಗಿರುತ್ತಾರೆ. ನಿಮ್ಮ ಪ್ರಯತ್ನದಿಂದ ಜಯ ಸಿಗುವುದು. ಒಳ್ಳೆಯ ವಾಹನ ಖರೀದಿಸುವಿರಿ. ಭೂಮಿಯಿಂದ ರಿಯಲ್ ಎಸ್ಟೇಟ್‌ನಿಂದ ಲಾಭ. ಸಹೋದರರಿಂದ ಸಹಾಯ. ವ್ಯವಸಾಯದಿಂದ ಆದಾಯ ಬರುತ್ತದೆ. ಅವಿವಾಹಿತರಿಗೆ ವಿವಾಹ ಯೋಗ. ವಿವಾಹಿತರಿಗೆ ಸಂತಾನ ಭಾಗ್ಯ.




## ಮಕರ

ವ್ಯಾಪಾರದಲ್ಲಿ ಅಭಿವೃದ್ಧಿ ಇರುವುದು. ಆರೋಗ್ಯ ಸುಧಾರಿಸುವುದು. ಧನ ಆಗಮನ. ಉನ್ನತಾಧಿಕಾರಿಗಳಿಂದ ಲಾಭ. ಉದ್ಯೋಗದಲ್ಲಿ ಬಡ್ತಿ ಗೌರವ ಸನ್ಮಾನ . ವರಮಾನದಲ್ಲಿ ಏರಿಕೆ. ಎಂತಹ ಕ್ಲಿಷ್ಟ ಕಾರ್ಯಗಳನ್ನಾದರೂ ಯಶಸ್ವಿಯಾಗಿ ಪೂರೈಸುವಿರಿ. ನೂತನ ವಸ್ತ್ರಾಭರಣಗಳನ್ನುಕೊಳ್ಳುವಿರಿ. ಅಂದುಕೊಂಡದ್ದಕ್ಕಿಂತ ಹೆಚ್ಚಾಗಿ ಪಡೆಯುವಿರಿ. ಮನೆಯಲ್ಲಿ ಶುಭ ಕಾರ್ಯಗಳು ನೆರವೇರುವುದು.




## ಕುಂಭ

ಧನ ಲಾಭವಾಗುವುದು ಸುಖಾನುಕೂಲತೆಗಳು ಹೆಚ್ಚುವು ನಿಮ್ಮ ತೊಂದರೆಗಳೆಲ್ಲ ನಾಶವಾಗುವುದು ಭೋಗವಿಲಾಸದ ಜೀವನ ನಡೆಸುವಿರಿ ಹಿರಿಯರಿಂದ ಧನಾಗಮನ ವಿದ್ಯಾಭ್ಯಾಸದಲ್ಲಿ ಹೊಸತನ್ನು ಸಾಧಿಸುವಿರಿ ಗೌರವ ಪಡೆಯುವಿರಿ ಸಂಗಾತಿಯಿಂದ ಸುಖ ಇರುವುದು ಏಳರ ಆಟದಶನಿ ನಡೆಯುತ್ತಿರುವುದರಿಂದ ಶನಿ ಶಾಂತಿ ಮಾಡಿಕೊಳ್ಳುವುದು ಉತ್ತಮ.



## ಮೀನ

ಮಗನಿಂದ ಸಂತೋಷ. ಶತ್ರುಗಳು ಸೋಲುವರು. ಸಾಮಾಜಿಕವಾಗಿ ಆರ್ಥಿಕವಾಗಿ ಅಭಿವೃದ್ಧಿ ಉಂಟಾಗುತ್ತದೆ. ಪ್ರಯಾಣದಿಂದ ಪ್ರಯೋಜನವಿದೆ. ತೀರ್ಥಯಾತ್ರೆಗೆ ಹೋಗುವಿರಿ. ರಿಯಲ್ ಎಸ್ಟೇಟ್‌ನಿಂದ ಲಾಭ. ಉದ್ಯೋಗದಲ್ಲಿ ಸ್ಥಾನಮಾನ. ವ್ಯಾಪಾರದಲ್ಲಿ ಅಭಿವೃದ್ಧಿ. ಒಳ್ಳೆಯ ಆದಾಯ. ಮನೆಯಲ್ಲಿ ಶುಭ ಕಾರ್ಯ ಜರುಗುತ್ತದೆ. ಧಾರ್ಮಿಕ ವ್ಯವಹಾರಗಳಿಗೆ ದಾನ ಮಾಡುವಿರಿ. ಕಷ್ಟಕರವಾದ ವಿಷಯಗಳನ್ನು ಬಗೆಹರಿಸುವಿರಿ.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

**– ಡಾ॥ ಅನಸೂಯ ಎಸ್. ರಾಜೀವ್**

**1.ಆಂಜನೇಯನನ್ನು ಆರಾಧಿಸುವವರಿಗೆ ಶನಿಯು ತೊಂದರೆ ಕೊಡುವುದಿಲ್ಲ ಎಂಬುದಕ್ಕೆ ಕಾರಣವೇನು?**


**ಉತ್ತರ :** ಒಂದು ಸಲ ಶನಿಯು ತಂದೆಯ ಮೇಲೆ ಬೇಸರಿಸಿಕೊಂಡು ಹೊರಟುಹೋಗುತ್ತಾನೆ. ಎಷ್ಟು ದಿನವಾದರೂ ಬರುವುದಿಲ್ಲ. ಛಾಯೆಯು ಸೂರ್ಯನಲ್ಲಿ ಗೋಳಾಡುತ್ತಾಳೆ. ಕೊನೆಗೆ ಛಾಯೆಯ ದುಃಖಕ್ಕೆ ಮಣಿದು ಕರೆ ತರುವುದಾಗಿ ಒಪ್ಪುತ್ತಾನೆ. ಸೂರ್ಯನು ಬಹಳ ಯೋಚಿಸಿ ಆಂಜನೇಯನನ್ನು ಕರೆದು ತನ್ನ ಮಗನ ಬಗ್ಗೆ ತಿಳಿಸಿ ಕರೆತರಲು ಕೇಳಿಕೊಳ್ಳುತ್ತಾನೆ. ಆಂಜನೇಯನು ಇದಕ್ಕೆ ಒಪ್ಪಿ ಕರೆತರಲು ಹೋಗುತ್ತಾನೆ. ಶನಿಯನ್ನು ನೋಡಿ ವಿನಯದಿಂದ ಸೂರ್ಯನ ಬಳಿಗೆ ಬರುವಂತೆ ವಿನಂತಿಸಿಕೊಳ್ಳುತ್ತಾನೆ. ಆದರೆ ಶನಿಯು ಕೋಪಿಷ್ಠನಾಗಿ ಬರುವುದಿಲ್ಲವೆನ್ನುತ್ತಾನೆ. ಆಂಜನೇಯ ಎಷ್ಟೇ ಬಲವಂತ ಮಾಡಿದರೂ ಶನಿ ಬರುವುದಿಲ್ಲ ಎನ್ನುತ್ತಾನೆ. ಆಂಜನೇಯ ನೀನು ಬರುವುದಿಲ್ಲ ಎಂದರೆ ನಾನು ಬಿಡುವುದಿಲ್ಲ. ನಿನ್ನನ್ನು ಎತ್ತಿಕೊಂಡು ಹೋಗುತ್ತೇನೆಂದು ಬೆದರಿಕೆ ಹಾಕುತ್ತಾನೆ. ಆದರೆ ಶನಿಯು ಹೆದರುವುದಿಲ್ಲ. ಉಗ್ರದೃಷ್ಟಿಯಿಂದ ಆಂಜನೇಯನನ್ನು ನೋಡಲು, ಆಂಜನೇಯ ಶ್ರೀರಾಮನ ಭಕ್ತನಿಗಿರುವುದರಿಂದ ಆ ಕ್ರೂರ ದೃಷ್ಟಿಯು ಆಂಜನೇಯನ ಮೇಲೆ ಕೆಲಸ ಮಾಡುವುದಿಲ್ಲ. ಕೊನೆಗೆ ವಿಧಿಯಿಲ್ಲದೆ ಶನಿಯೇ ಸೋತು ಆಂಜನೇಯನ ಜೊತೆ ಬರಲು ಒಪ್ಪಿ ಸೂರ್ಯನ ಹತ್ತಿರ ಬರುತ್ತಾನೆ. ಅಹಂಕಾರರಹಿತನಾದ ರಾಮಭಕ್ತನಾದ ಆಂಜನೇಯನನ್ನು ಶನಿಯು ಮೆಚ್ಚಿ ಯಾರು ನಿನ್ನನ್ನು ಆರಾಧಿಸುವರೋ ಅವರಿಗೆ ನಾನು ತೊಂದರೆ ಕೊಡಲಾರೆ ಎಂದು ಹೇಳುತ್ತಾನೆ. ಹಾಗಾಗಿ ಆಂಜನೇಯನ ಆರಾಧನೆಯಿಂದ ಶನಿ ಶಾಂತಿಯಾಗುತ್ತದೆ.

**2. ರಾಹು ಕೇತುಗಳಿಗೆ ಆಕಾರವಿಲ್ಲದಿರಲು ಕಾರಣವೇನು?**

**ಉತ್ತರ :** ರಾಹು ಮತ್ತು ಕೇತು ಛಾಯಾಗ್ರಹಗಳಾದುದರಿಂದ ಅವುಗಳಿಗೆ ಆಕಾರವಿಲ್ಲ. ಪೌರಾಣಿಕವಾಗಿ ಒಂದು ಕಥೆಯೇ ಇದೆ. ದೇವತೆಗಳು ಮತ್ತು ರಾಕ್ಷಸರೂ ಸೇರಿ ಸಮುದ್ರಮಥನ ಮಾಡಿದಾಗ ಬಂದಂತಹ ಅಮೃತವನ್ನು ಸೇವಿಸುವ ವಿಷಯವಾಗಿ ದೇವದಾನವರು ಚರ್ಚಿಸುತ್ತಿರುವಾಗ ವಿಷ್ಣುವು ಸ್ತ್ರೀರೂಪ ತಾಳಿ ಮೋಹಿನಿ ರೂಪದಲ್ಲಿ ಅಮೃತವನ್ನು ಬಡಿಸಲು ಬರುತ್ತಾನೆ.

ದೇವತೆಗಳು ಒಂದು ಸಾಲಿನಲ್ಲೂ ದಾನವರು ಮತ್ತೊಂದು ಸಾಲಿನಲ್ಲೂ ಕುಳಿತಾಗ ಮೋಹಿನಿರೂಪಿ ವಿಷ್ಣುವು ದೇವತೆಗಳಿಗೆ ಮೊದಲು ಬಡಿಸಲು ಪ್ರಾರಂಭಿಸುತ್ತಾನೆ. ಆಗ ಸ್ವರ್ಭಾನು ಎಂಬ ರಾಕ್ಷಸನು ಅಮೃತವನ್ನು ಹಂಚುವ ಬಗ್ಗೆ ಅನುಮಾನಗೊಂಡವನಾಗಿ ಯಾರಿಗೂ ತಿಳಿಯದಂತೆ ದೇವತೆಗಳ ಸಾಲಿನಲ್ಲಿ ಬಂದು ಕುಳಿತು ಅಮೃತವನ್ನು ಪಡೆದುಕೊಂಡನು. ಈ ಆಕಸ್ಮಿಕ ವಂಚನೆಯನ್ನು ಸೂರ್ಯ ಮತ್ತು ಚಂದ್ರರು ಗಮನಿಸಿದವರಾಗಿ ಆ ಕೂಡಲೇ ವಿಷ್ಣುವಿಗೆ ಗೌಪ್ಯವಾಗಿ ತಿಳಿಸುತ್ತಾರೆ.

ಇದನ್ನು ಕೇಳಿದ ಕೂಡಲೆ ವಿಷ್ಣುವು ಮಿಂಚಿನ ವೇಗದಲ್ಲಿ ತನ್ನ ಸುದರ್ಶನ ಚಕ್ರವನ್ನು ಸ್ವರ್ಭಾನುವಿನ ಮೇಲೆ ಪ್ರಯೋಗಿಸಿದವನಾದರೂ ಸುದರ್ಶನ ಚಕ್ರವು ಸ್ವರ್ಭಾನುವಿನ ಶಿರಸ್ಸನ್ನು ಛೇದಿಸುವ ವೇಳೆಗಾಗಲೇ ಅವನ ಗಂಟಲಿಂದ ಅಮೃತವು ದೇಹದೊಳಗಡೆ ಪ್ರವೇಶಿಸಿದ್ದ ಕಾರಣ ಸ್ವರ್ಭಾನುವಿನ ರುಂಡ ಮುಂಡಗಳು ಬೇರ್ಪಟ್ಟರೂ ಅವನು ಸೇವಿಸಿದ್ದ ಅಮೃತದ ಪ್ರಭಾವದಿಂದಾಗಿ ಅವುಗಳಿಗೆ ಸಾವು ಸಂಭವಿಸದೆ ಅಮರತ್ವವನ್ನು ಹೊಂದುವ ಮೂಲಕ ಸೂರ್ಯಚಂದ್ರರಂತೆ ಗ್ರಹಗಳ ಸಾಲಿನಲ್ಲಿ ಸೇರಿ ತನ್ನ ಈ ದುಸ್ಥಿತಿಗೆ ಕಾರಣವಾದ ಸೂರ್ಯ ಚಂದ್ರರನ್ನು ಬೆನ್ನು ಹತ್ತಿ ಸಮಯಾನುಸಾರ ಅವರನ್ನು ಬಾಧಿಸುತ್ತಿದ್ದಾರೆ ಎಂಬುದಾಗಿದೆ. ಈ ರುಂಡಕ್ಕೆ ರಾಹುವೆಂದೂ ಮುಂಡಕ್ಕೆ ಕೇತುವೆಂದೂ ಹೆಸರಾಯಿತು.



# ನಿಜವಾದ ಪುಷ್ಪಾರ್ಚನೆ

**- ಪ್ರಣವ**

ಭಗವಂತನನ್ನು ದೇವಾಲಯಗಳಲ್ಲಿ ಮತ್ತು ಮನೆಗಳಲ್ಲೂ ಸಹ ಸಾಮಾನ್ಯವಾಗಿ ಹೂವಿನಿಂದ ಪೂಜಿಸುತ್ತೇವೆ. ಶಿವನಿಗೆ ಬಂಗಾರದ ಬಿಲ್ವಪತ್ರೆಗಳನ್ನೂ, ವಿಷ್ಣುವಿಗೆ ಬಂಗಾರದ ತುಳಸೀ ದಳಗಳನ್ನೂ ಅಮ್ಮನವರಿಗೆ ಬಂಗಾರದ ಹೂವುಗಳಿಂದ ಅರ್ಚಿಸಿ ಅದು ತಮ್ಮ ಉನ್ನತವಾದ ಭಕ್ತಿಗೆ ನಿದರ್ಶನವೆಂದು ಭಾವಿಸುತ್ತಾರೆ. ಆದರೆ ಭಗವಂತನು, ಹೂವುಗಳ ಬೆಲೆಯನ್ನಾ ಧರಿಸಿ ವರ್ತಕನಂತೆ ಪುಣ್ಯವನ್ನು ಕರುಣಿಸುವುದಿಲ್ಲ.

ಪುಷ್ಪಾರ್ಚನೆಯ ಸಮಯದಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ಮುಖ್ಯವಾದುದು ಭಕ್ತಿಯಾಗಿದೆ. ಇದೇ ವಿಷಯವನ್ನು ಗೀತೆಯಲ್ಲಿ ಪತ್ರಂ,ಪುಷ್ಪಂ,ಫಲಂ ತೋಯಂ (ಎಲೆ, ಹೂವು, ಹಣ್ಣು, ನೀರು) ಇವುಗಳಲ್ಲಿ ಯಾವುದನ್ನಾದರೂ ನನಗೆ ಭಕ್ತಿಯಿಂದ ಅರ್ಪಿಸಿದರೆ ಸಾಕು ಎಂದು ಸ್ವಯಂ ಕೃಷ್ಣನೇ ಅಪ್ಪಣೆ ಕೊಡಿಸಿದ್ದಾನೆ. ದೇವರಿಗೆ ಸಮರ್ಪಿಸಬೇಕಾಗಿರುವುದು ಮನಸ್ಸು ಎನ್ನುವ ಪುಷ್ಪ ಎಂದು ಆದಿ ಶಂಕರರು ತಮ್ಮ ಶಿವಾನಂದ ಲಹರಿಯಲ್ಲಿ ವಿವರಿಸಿದ್ದಾರೆ.

ಭಗವಂತನಿಗೆ ಪ್ರಿಯವಾದ ಪುಷ್ಪಗಳಲ್ಲಿ ಮೊದಲನೆಯದೆ ಅಹಿಂಸೆ ಯಾವುದೇ ಜೀವಿಯನ್ನಾಗಲಿ ಯಾವುದೇ ವಿಧವಾಗಿ ಕಷ್ಟಕ್ಕೆ ಗುರಿ ಮಾಡಬಾರದು. ಒಬ್ಬರ ಮನಸ್ಸನ್ನು ಮಾತುಗಳ ಮೂಲಕವೂ ನೋಯಿಸಬಾರದು. ಮನಸ್ಸಿನಲ್ಲಿಯೂ ಸಹ ಯಾರಿಗೂ ಕೇಡೆಣಿಸಬಾರದು.

ಎರಡನೆಯ ಪುಷ್ಪವೆ ಇಂದ್ರಿಯ ನಿಗ್ರಹ. ಮನಸ್ಸಿನಲ್ಲಿ ಬಯಕೆ ಹುಟ್ಟುವುದೇ ತಡ ನ್ಯಾಯಾನ್ಯಾಯಗಳನ್ನು, ಧರ್ಮಾಧರ್ಮಗಳನ್ನು ನೋಡದೆ ಇತರರಿಗೆ ಅದರಿಂದ ಯಾವ ವಿಧವಾದ ಕೆಡುಕಾಗಬಹುದೆನ್ನುವ ವಿವೇಚನೆಯಿಲ್ಲದೆ ತಮ್ಮ ಆಸೆಗಳನ್ನು ಪೂರೈಸಿಕೊಳ್ಳುವುದು, ಇಂದ್ರಿಯಗಳ ಮೇಲೆ ಯಾವುದೇ ವಿಧವಾದ ಹಿಡಿತವಿಲ್ಲವೆನ್ನುವುದರ ಲಕ್ಷಣಗಳು. ಇಂದ್ರಿಯ ನಿಗ್ರಹವು ದೇವರಿಗೆ ಇಷ್ಟವಾದ ಮತ್ತೊಂದು ಪುಷ್ಪ.

ಸರ್ವಭೂತ ದಯೆ ಮೂರನೆಯ ಪುಷ್ಪ. ಸಹ ಮಾನವರ ಮೇಲೆ ಅಷ್ಟೇ  ಅಲ್ಲ ಸಕಲ ಜೀವರಾಶಿಗಳಲ್ಲಿ - ಪ್ರಾಣಿ, ಪಕ್ಷಿ , ಕ್ರಿಮಿ ಕೀಟಾದಿಗಳು, ಸಸ್ಯಗಳ ಮೇಲೆಯೂ ದಯೆ ತೋರಬೇಕೆನ್ನುವುದು ಸನಾತನ ಭಾರತೀಯ ತತ್ತ್ವ ನಾಲ್ಕನೇ ಪುಷ್ಪವೇ ಕ್ಷಮಾಗುಣ, ನಮಗೆ ಅಪಕಾರ ಮಾಡಿದವರಿಗೂ ಸಹ ಉಪಕಾರ ಮಾಡಬೇಕು ಅವರ ಮೇಲೆ ಪ್ರತೀಕಾರ ಸಲ್ಲದು ಎನ್ನುವುದೇ ಕ್ಷಮಾಗುಣ.

ಶಾಂತಿ ಐದನೆಯ ಪುಷ್ಪ. ಮನಸ್ಸು ಉದ್ವೇಗಕ್ಕೆ ಒಳಗಾಗಬಾರದು. ಸುಖ ಬಂದಾಗ ಹಿಗ್ಗುವುದು, ದುಃಖ ಬಂದಾಗ ಕುಗ್ಗುವುದು. ಹೊಗಳಿದರೆ ಉಬ್ಬಿ ಹೋಗುವುದು. ತೆಗಳಿದರೆ ಕುಗ್ಗಿ ಹೋಗುವುದು ಒಳ್ಳೆಯದಲ್ಲ, ಮನಸ್ಸನ್ನು ಪ್ರಶಾಂತವಾಗಿರಿಸಿಕೊಳ್ಳಬೇಕು.


ಆರೆನೆಯ ಪುಷ್ಪವೆ ತಪಸ್ಸು, ತಪ್ಪಸ್ಸೆಂದರೆ ಸುತ್ತಲೂ ಹುತ್ತ ಬೆಳೆಯುವವರೆಗೆ ಒಂಟಿಕಾಲಿನ ಮೇಲೆ ನಿಲ್ಲುವುದೆಂದಲ್ಲ.  ಆ ಮಾತಿಗೆ ಅರ್ಥ ಕೆಟ್ಟ ವಿಷಯಗಳನ್ನು ದೂರವಿರಿಸಿ ಒಳ್ಳೆಯ ಕಾರ್ಯಗಳನ್ನು ಸಾಧಿಸುವ ಛಲವನ್ನು ಹೊಂದಿರುವುದು.

ಏಳನೆಯ ಪುಷ್ಪವೆ ಧ್ಯಾನ. ಶಂಖದಿಂದ ಬಿದ್ದರೇನೆ ತೀರ್ಥ ಎನ್ನುವಂತೆ ಆಧುನಿಕ ವೈದ್ಯರೂ ಸಹ ಧ್ಯಾನವು ಮಾನಸಿಕ ಹಾಗೂ ಶಾರೀರಿಕ ಆರೋಗ್ಯಕ್ಕೆ ಒಳ್ಳೆಯದೆಂದು ಹೇಳುತ್ತಿದ್ದಾರೆ.

ಕಡೆಯದಾಗಿ ಹೇಳಿದ್ದರೂ ಸಹ ಮೊದಲನೆಯ ಸ್ಥಾನದಲ್ಲಿರಬೇಕಾಗಿರುವುದು ಎಂಟನೆಯ ಪುಷ್ಪವಾದ ಸತ್ಯ. ಯಾವಾಗಲೂ ಸುಳ್ಳನ್ನು ಆಡದೇ ಇರುವುದು, ಕೊಟ್ಟ ಮಾತನ್ನು ಉಳಿಸಿಕೊಳ್ಳುವುದು ಮೋಸ ಮಾಡದೇ ಇರುವುದು, ಮೊದಲಾದವು ಸತ್ಯ ಪರಿಪಾಲನೆಯ ಅಡಿಯಲ್ಲಿ ಬರುತ್ತವೆ. ಇದನ್ನು ಚಾಚು ತಪ್ಪದೇ ಜೀವನದಲ್ಲಿ ಅನುಸರಿಸಿಕೊಂಡು ಬರುವುದು ನಿಜವಾದ ಪುಷ್ಪಾರ್ಚನೆ.




ಈ ಗೊಂಬೆಗೆ
ಚುಕ್ಕಿಯನ್ನು
ಸೇರಿಸಿ ಹಾಗೂ
ಬಣ್ಣವನ್ನು ತುಂಬಿರಿ.








ಬಣ್ಣವನ್ನು
ತುಂಬಿರಿ.



## ಮಾರ್ಗ ಅನ್ವೇಷಣೆ

ಮಕ್ಕಳೇ, ಆ ಇಬ್ಬರೂ ಮಕ್ಕಳು ಪಟಾಕಿಯನ್ನು ತೆಗೆದು ಕೊಳ್ಳಲು ಯಾವ ಹಾದಿಯಲ್ಲಿ ಹೋದರೆ ಸೇರಬಹುದು ಎಂದು ಕಂಡು ಹಿಡಿಯಿರಿ ನೋಡೋಣ !





## ಈ ಚಿತ್ರವನ್ನು ಗಮನಿಸಿ

ಈ ಚಿತ್ರದಲ್ಲಿ ಎಷ್ಟು ಬಲಗಡೆ ಪಕ್ಷಿಗಳಿವೆ ಹಾಗೂ ಎಡಗಡೆ
ಎಷ್ಟು ಪಕ್ಷಿಗಳಿವೆ ಕಂಡು ಇಡಿಯಿರಿ ನೋಡೋಣ ಮಕ್ಕಳೆ

ಉತ್ತರಗಳು:ಬಲಗಡೆ- 11 ಹಾಗೂ ಎಡಗಡೆ - 12

# ರಸ ಪ್ರಶ್ನೆಗಳು

01. ಲಕ್ಷ್ಮೀ ಆರಾಧನೆಗೆ ಪ್ರಶಸ್ತವಾದ ಮಾಸ ಯಾವುದು?..........
02. 'ತಿರುತ್ತೇವನಾರ್ ತೊಗೈ' ತಿರುನಾಂಗೂರ್ ದಿವ್ಯದೇಶಗಳಲ್ಲಿ ಎಷ್ಟನೇಯದು? ..........
03. ಭೀಮವ್ವ ಕಾಲವಾದದ್ದು ಯಾವಾಗ ಹಾಗೂ ಎಲ್ಲಿ?..........
04. ಅಹಲ್ಯೆ ಯಾರ ಪತ್ನಿ? ..........
05. ಗರ್ಭಗುಡಿಯ ಬಲಭಾಗದಲ್ಲಿ ಯಾವ ಮೂರ್ತಿ ಇದೆ?..........
06. ಕಾರ್ತೀಕ ದೀಪಾರಾಧನೆಯನ್ನು ಎರಡು ವಿಧವಾಗಿ ಆಚರಿಸಬಹುದು ಅವು ಯಾವುದು? ..........
07. ಕುಮಾರಸ್ವಾಮಿಯ ಸಂಬಂಧ ಪಡೆದ ತೀರ್ಥಗಳನ್ನು ಪುಷ್ಕರಿಣಿ ಎಂದು ಕರೆಯದೆ ಏನೆಂದು ಕರೆಯುತ್ತಾರೆ? ..........
08. ತಮಸೋಮಾ ಜೋತಿರ್ಗಮಯ ಕತ್ತಲಿನಿಂದ ಬೆಳಕಿನ ಕಡೆ ಎಲ್ಲಾರೂ ಸಾಗೋಣ ಎಂಬ ಉದಾತ್ತ ಸಂದೇಶವನ್ನು ಲೋಕಕ್ಕೆ ಸಾರುವ ತಿಂಗಳು ಯಾವುದು?..........
09. ಅಂಜನಾಳಿಗೆ ಯಾರು ಜನಿಸಿದರು? ..........
10. ತಿರು ಎಂದರೆ ಏನು? ..........
11. ಶ್ರೀಗೋವಿಂದರಾಜಸ್ವಾಮಿಯ ಸನ್ನಿಧಿಯಲ್ಲಿ ವಿಜಯವನ್ನು ಮಾಡಿ ತೀರ್ಥಕ್ಕೆ ಏನೆಂದು ನಾಮಕರಣ ಮಾಡಿದರು? ..........
12. ವಾಲ್ಮೀಕಿ ಸ್ನಾನಕ್ಕೆ ಯಾವ ನದಿ ತೀರಕ್ಕೆ ಬರುತ್ತಾರೆ? ..........
13. ವಾಲ್ಮೀಕಿ ಆಶ್ರಮದಲ್ಲಿ ಸೀತೆ ಯಾರನ್ನು ಹೆಡೆದಳು? ..........
14. ಛಾಯ ಗ್ರಹಗಳು ಯಾವುವು? ..........
15. ಪುಷ್ಪಾರ್ಚನೆಯ ಸಮಯದಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ಮುಖ್ಯವಾದುದು ಯಾವುದು? ..........

## ಸೂಚನೆಗಳು

**39 ಕ್ವಿಜ್**

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳುಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸ ತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ನಿಮ್ಮ ಉತ್ತರಗಳನ್ನು ನಮಗೆ ಕಳುಹಿಸಬೇಕಾದ ಕೊನೆಯ ದಿನಾಂಕ ಇದೇ ತಿಂಗಳ 25 ರ ಒಳಗೆ ಕಳುಹಿಸಬೇಕು.
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
ತಿ.ತಿ.ದೇ. ಪ್ರೆಸ್,
2 ನೇ ಅಂತಸ್ತು
ಕೆ.ಟಿ. ರಸ್ತೆ,
ತಿರುಪತಿ : 517 507
ಆಂಧ್ರ ಪ್ರದೇಶ್

ಹೆಸರು :
ಚಂದಾ ಸಂಖ್ಯೆ :
ತಂದೆಯ ಹೆಸರು :
ತಾಯಿಯ ಹೆಸರು:

ವಿಳಾಸ :

ದೂರವಾಣಿ ಸಂಖ್ಯೆ :

ಕಾರ್ತಿಕೇಯ ಎಂದರೆ ಯಾರು?

ಷಣ್ಮುಖ ಎಂದರೆ ಎಷ್ಟು ಮುಖಗಳು?

ಸುಬ್ರಹ್ಮಣ್ಯನ ತಂದೆ ತಾಯಿ ಯಾರು?


ಸುಬ್ರಹ್ಮಣ್ಯನ ಸಹೋದರ ಯಾರು?

ಸುಬ್ರಹ್ಮಣ್ಯನ ವಾಹನ ಯಾವುದು?

ಸುಬ್ರಹ್ಮಣ್ಯ ಸ್ವಾಮಿಯ ಆಯುಧ ಯಾವುದು?

ಸುಬ್ರಹ್ಮಣ್ಯ ಸ್ವಾಮಿಯ ಸಂಗಾತಿಯ ಹೆಸರೇನು?

ಸುಬ್ರಹ್ಮಣ್ಯ ಸ್ವಾಮಿಯ ಮಂತ್ರ ಯಾವುದು?




ಈ ಚಕ್ರದಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಬಣ್ಣದಲ್ಲಿರುವ ಬಾಕ್ಸ್‌ನಲ್ಲಿಯೇ ಬರೆಯಿರಿ

1) ಸುಬ್ರಹ್ಮಣ್ಯ 2) ಆರು ಮುಖಗಳು 3) ಶಿವ- ಪಾರ್ವತಿ 4) ಗಣೇಶ 5) ನವಿಲು 6) ವೇಲಾಯುಧ
7) ವಲ್ಲಿ ಮತ್ತು ದೇವಸೇನಾ 8) ಓಂ ಶರವಣ ಭವಾಯ ನಮಃ

ಮಕ್ಕಳೇ! ಈ ಚಿತ್ರದಲ್ಲಿರುವ ಕಪ್‌ನಲ್ಲಿರುವ ಅಂಕೆಗಳನ್ನು ಕೂಡಿದರೆ ಹಾಗೂ ಕಳೆದರೆ ಸರಿಯಾದ ಉತ್ತರದೊಂದಿಗೆ ಯಾವ ತಟ್ಟೆಯಲ್ಲಿ ಸರಿಹೊಂದುತ್ತದೆ ಎಂದು ಕಂಡು ಹಿಡಿಯಿರಿ ನೋಡೋಣ!

| 1 | 2 | 3 | 4 | 5 |
|---|---|---|---|---|
| 17+4 | 36-16 | 33-11 | 26+4 | 13+8 |




1) i 2) ii 3) iii 4)iv 5) vi



ಮಕ್ಕಳೇ ಚೆನ್ನಾಗಿದ್ದೀರಾ ನಾನು ಕಾಡಿಗೆ ರಾಜ ನಾನು ಬಹಳ ಕ್ರೂರವಾಗಿ ಗರ್ಜಿಸುತ್ತೇನೆ, ಹಾಗೂ ನಾನು ಚಾಮುಂಡೇಶ್ವರಿ ದೇವಿಗೆ ವಾಹನವಾಗಿ ಇರುತ್ತೇನೆ ನಾನು ಯಾರು ಎಂದು ಹೇಳಿ ನೋಡೋಣ!

ಪುಟಾಣಿಗಳೇ ನಾನು ಮೇಲೆ ಹೇಳಿದ ಮತ್ತು ಮೇಲಿರುವ ಚಿತ್ರವನ್ನು ನೋಡಿ ನಾನು ಯಾರು ಎಂದು ಕಂಡು ಹಿಡಿಯಿರಿ ನೋಡೋಣ!

ಸಿಂಹ


ಚಿತ್ರಕಥೆ
ಗುರುಗಳನ್ನು ಗೌರವಿಸೋಣ!!!
ಕಥೆ : ತೆಲುಗು ಮೂಲ : ಮೊಲಕ ಉತ್ತರಫಲ್ಗುಣಿ
ಅನುವಾದ : ಆರ್.ಕೆ.ವಿ.
ಚಿತ್ರಗಳು : ಡಾ|| ಕೆ. ಶ್ರೀಧರನ್
ಚಂದ್ರವಂಶದಲ್ಲಿ, ನಹುಷನೆಂಬ ರಾಜನು ಸ್ವಲ್ಪ ಕಾಲ ಇಂದ್ರನ ಸಿಂಹಾಸನವನ್ನು ಏರಿದನು ಮತ್ತು ಅವನನ್ನು ಮಹೇಂದ್ರ ಎಂದು ಘೋಷಿಸಲಾಯಿತು. ಒಂದು ದಿನ ಸ್ವರ್ಗ ಲಕ್ಷ್ಮಿ ಶಚೀದೇವಿಯನ್ನು ಭೇಟಿಯಾಗಲು ಬಯಸಿದನು. ಆ ನಂತರ.....
ಮಂತ್ರಿ! ನಾವು ಶಚೀದೇವಿಯನ್ನು ಭೇಟಿಯಾಗಬೇಕು. ಪಲ್ಲಕ್ಕಿಯನ್ನು ಹೊರಲು ಸಪ್ತರ್ಷಿಗಳನ್ನು ಕರೆಯಿರಿ.
ಹಾಗೆಯೇ ಮಹಾಪ್ರಭು!
ಓ! ಸಪ್ತ ಋಷಿಗಳೂ ಎಲ್ಲರೂ ಬಂದಿದ್ದಾರೆಯೇ ಮಂತ್ರಿ! ಈಗ ಹೊರಡೋಣ
ಸಪ್ತ ಋಷಿಗಳೂ ಎಲ್ಲರೂ ಬಂದಿದ್ದಾರೆ. ಮಹಾ ಪ್ರಭು ಈ ಹೊರಡೋಣ.
ಸಪ್ತ ಋಷಿಗಳೇ! ಬೇಗ ಬೇಗ ನಡೆಯಿರಿ ಓ..... ಸರ್ಪ! ಸರ್ಪ!!! (ಅಂದರೆ ವೇಗ! ವೇಗ!! ಎಂದು ಅರ್ಥ)
(ಅವರಲ್ಲಿ ಅಗಸ್ತ್ಯನು ಕುಳ್ಳನು. ಅವನಿಗೆ ಬೇಗ ನಡೆಯಲು ಬರುವುದಿಲ್ಲ. ಇದಲ್ಲದೆ ನಹುಷನ ಕಾಲ್ಬೆರಳುಗಳು ಅವನಿಗೆ ತಗುಲಿತು. ಅಷ್ಟೇ... ಕೋಪದಿಂದ)
ಸರ್ಪ! ಸರ್ಪ!! ಎಂದು ತುಂಬಾ ಹಿಂಸಿಸುತ್ತಿದ್ದರು. ನೀವು ಸರ್ಪದಂತೆ ಭೂಮಿಯ ಮೇಲೆ ಇರಲಿ ಇದೇ ನನ್ನ ಶಾಪ
ಅಯ್ಯಾ ಮಹರ್ಷಿ ! ನನ್ನ ತಪ್ಪನ್ನು ಕ್ಷಮಿಸಿ ಮತ್ತು ನನಗೆ ಪ್ರಾಯಶ್ಚಿತ್ತವನ್ನು ನೀಡಿ.
ಹಾಗೆಯೇ ಹೇಳುತ್ತೇನೆ. ನಿನ್ನ ಹತ್ತಿರ ಯಾರೇ ಬಂದರೂ ಅವರ ಶಕ್ತಿ ಕಡಿಮೆಯಾಗುತ್ತದೆ. ನಂತರ ಅವರನ್ನು ಬಂಧಿಸಿ ಧರ್ಮದ ಬಗ್ಗೆ ಪ್ರಶ್ನೆಗಳನ್ನು ಕೇಳಿ ಅದಕ್ಕೆ ನೀವು ಸೂಕ್ತವಾಗಿ ಉತ್ತರಿಸಿದರೆ ಮಾತ್ರ. ನಿನ್ನ ರೂಪವು ಮರಳಿ ಬರುತ್ತದೆ. ತಥಾಸ್ತು!!!
K. Sreedharan




ಎಲ್ಲಾ ಧರ್ಮಗಳಲ್ಲಿ ಅಹಿಂಸೆಯೇ ಶ್ರೇಷ್ಠ. ಅದನ್ನು ಆಚರಿಸುವವರು ದೈವ ಜನ್ಮವನ್ನು ಪಡೆಯುತ್ತಾರೆ. ಅದನ್ನು ಆಚರಿಸದವರು ರಾಕ್ಷಸರಾಗಿ ಅಥವಾ ಕ್ರೂರ ಜಂತುಗಳಾಗಿ ಹುಟ್ಟಿ ದುಃಖಿತರಾಗುತ್ತಾರೆ. ಆದ್ದರಿಂದ ಅಹಿಂಸೆಯನ್ನು ದೂರ ಮಾಡಿ. ಒಳ್ಳೆಯ ಜನ್ಮವನ್ನು ಪಡೆಯೋಣ.

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

1. ಹೆಸರು ಮತ್ತು ವಿಳಾಸ :

(ಬಿಡಿ ಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

(ಸೆಲ್ ನಂಬರ್)

2. ಬೇಕಾಗುವ ಭಾಷೆ :

☐ ಕನ್ನಡ ☐ ತೆಲುಗು ☐ ತಮಿಳು

☐ ಹಿಂದೀ ☐ ಇಂಗ್ಲೀಷು ☐ ಸಂಸ್ಕೃತ

3. ವಾರ್ಷಿಕ ಚಂದಾ : ☐ ರೂ.240/-

4. ಆಜೀವಚಂದಾ : ☐ ರೂ.2,400/- ( 12 ವರ್ಷ),

5. ವಿದೇಶಿ ವಾರ್ಷಿಕ ಚಂದಾ : ☐ ರೂ.1030/-

6. ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

7. ಸಲ್ಲಿಸಿದ ಹಣ :

ಡಿ.ಡಿ. ಸಂಖ್ಯೆ/ ಈ.ಎಂ.ಓ/ಐ.ಪಿ.ಓ./ಅಟ್‌ಪರ್ ಚೆಕ್ಕು ಮಾತ್ರವೇ

ಸ್ಥಳ :

ದಿನಾಂಕ : ಚಂದಾದಾರರ ಸಹಿ

1. ಸಪ್ತಗಿರಿ ವಾರ್ಷಿಕ ಚಂದಾ ರೂ.240/-ಆಜೀವಚಂದಾ (12 ವರ್ಷ) ರೂ.2,400/-ಗಳು ಅನ್‌ಲೈನ್‌ಗಾಗಿ (https://ttdevasthanams.ap.gov. in), ಡಿ.ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ,ತಿ.ತಿ.ದೇ.ತಿರುಪತಿ.ಅವರ ಹೆಸರಿನಲ್ಲಿ ತೆಗೆಯಬೇಕು.
2. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿ-ಹಾಳೆಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.
3. ಎಂ.ಓ.ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ.
4. ನಮ್ಮ ವಿಳಾಸ-ಪ್ರಧಾನಸಂಪಾಕರು,ಸಪ್ತಗಿರಿ ಕಾರ್ಯಾಲಯ,ತಿ.ತಿ.ದೇ., ಪ್ರೆಸ್. ಎರಡನೇ ಅಂತಸ್ತು, ಕೆ.ಟಿ.ರೋಡ್ಡು, ತಿರುಪತಿ -517507.
5. ಸಪ್ತಗಿರಿ ಚಂದಾ ವಿವರಣೆಗಾಗಿ ಫೋನ್‌ನಂಬರ್ : 0877-2264359, 0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

## ಆಧ್ಯಾತ್ಮಿಕ ಮಾಸಪತ್ರಿಕೆ ಸಪ್ತಗಿರಿ

- 'ಸಪ್ತಗಿರಿ' ತಿ.ತಿ.ದೇ.,ಆಧ್ಯಾತ್ಮಿಕ ಮಾಸಪತ್ರಿಕೆಯನ್ನು ಪ್ರಕಟಿಸಲಾಗಿದೆ.
- 'ಸಪ್ತಗಿರಿ' ಪತ್ರಿಕೆಯಲ್ಲಿ ಅನೇಕ ಆಧ್ಯಾತ್ಮಿಕ ವೈಶಿಷ್ಟ್ಯಗಳನ್ನು ಪ್ರಕಟಿಸುತ್ತಿದೆ.
- 'ಸಪ್ತಗಿರಿ' ಪತ್ರಿಕೆಯು ತೆಲುಗು,ತಮಿಳು,ಕನ್ನಡ,ಹಿಂದಿ,ಇಂಗ್ಲೀಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಕಟವಾಗಿದೆ.
- 'ಸಪ್ತಗಿರಿ' ಪತ್ರಿಕೆಯ ವಾರ್ಷಿಕ ಚಂದಾ ರೂ. 240/-
- 'ಸಪ್ತಗಿರಿ' ಪತ್ರಿಕೆಯ ಆಜೀವ ಚಂದಾ (12 ವರ್ಷಗಳು ಮಾತ್ರ) ರೂ.2400/-
- 'ಸಪ್ತಗಿರಿ' ವಿದೇಶಿ ವಾರ್ಷಿಕ ಚಂದಾ ರೂ. 1030/-
- 'ಸಪ್ತಗಿರಿ' ಪತ್ರಿಕೆಯ ಚಂದಾ ಓದುಗರು ಡಿ.ಡಿ./ಇ.ಎಂ.ಓ./ಐ.ಪಿ.ಓ./ Online (ttdevasthanams.ap.gov.in) ಮೂಲಕ ಮಾಡಬಹುದು.
- 'ಸಪ್ತಗಿರಿ' ಪತ್ರಿಕೆಯ ಚಂದಾದಾರರು ಯಾವುದೇ ರಾಷ್ಟ್ರೀಯ ಬ್ಯಾಂಕ್ ಮುಖಾಂತರ ಪ್ರಧಾನ ಸಂಪಾದಕರು,ಸಪ್ತಗಿರಿ ಮಾಸಪತ್ರಿಕೆ, ತಿ.ತಿ.ದೇ., ತಿರುಪತಿ. ನೀವು ಡಿ.ಡಿ.ಅಂಚೆ ಮೂಲಕ, ಪ್ರಧಾನ ಸಂಪಾದಕರು,ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ.,ಪ್ರೆಸ್ ಬಿಲ್ಡಿಂಗ್, ತಿರುಪತಿ - 517 507 ಎಂಬ ವಿಳಾಸಕ್ಕೆ ಕಳುಹಿಸಬಹುದು.
- ಚಂದಾದಾರರು ತಮ್ಮ ವಿಳಾಸ, ಪಿನ್‌ಕೋಡ್, ಸೆಲ್‌ಫೋನ್ ಸಂಖ್ಯೆ ಮತ್ತು ನಿಮಗೆ ಬೇಕಾದ ಪತ್ರಿಕೆಯ ಭಾಷೆಯನ್ನು ಸ್ಪಷ್ಟವಾಗಿ ಬರೆಯಬೇಕು.
- 'ಸಪ್ತಗಿರಿ' ಪತ್ರಿಕೆಯು ಸರಿಯಾದ ಸಮಯಕ್ಕೆ ತಲುಪದಿದ್ದರೆ ಅಥವಾ ವಿಳಾಸ ಬದಲಾದರೆ ಈ, ಇ-ಮೇಲ್ (Chiefeditortpt@gmail.com) ಅನ್ನು ಸಂಪ್ರದಿಸ ಬೇಕು.
- ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0877-2264359, 0877-2264360
- ಹೆಚ್ಚಿನ ವಿವರಗಳಿಗೆ ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ., ಪ್ರೆಸ್ ಬಿಲ್ಡಿಂಗ್,ತಿರುಪತಿ - 517 507 ಈ ವಿಳಾಸವನ್ನು ಸಂಪರ್ಕಿಸುವ ಮೂಲಕ ಪಡೆಯಬಹುದು.
- ನೇರವಾಗಿ ಸಂಪರ್ಕಿಸಲು ಬಯಸುವವರು ಪ್ರಧಾನ ಸಂಪಾದಕರ ಕಾರ್ಯಾಲಯದ ಕೆಲಸದ ವೇಳೆ ಬೆಳ್ಳಿಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯ ವರೆಗೆ) ಯಲ್ಲಿ ಸಂಪರ್ಕಿಸಬಹುದು.

Printed by Sri Sri. R.V. Vijay Kumar, B.A., B.Ed, and and Published by Dr. V. G. Chokkalingam, M.A., Ph.D. on behalf of Tirumala Tirupati Devasthanams and Printed and Published at Tirumala Tirupati Devasthanams Press, 2nd Floor, K.T.Road, Tirupati - 517 507. Editor : Dr. V. G. Chokkalingam, M.A., Ph.D.



15-08-2025 ರಂದು 79 ನೇ ಸ್ವಾತಂತ್ರ್ಯ ದಿನೋತ್ಸವದ ಸಂದರ್ಭವಾಗಿ ತಿರುಪತಿಯಲ್ಲಿರುವ ತಿ.ತಿ.ದೇ., ಆಡಳಿತ ಭವನದ ಮೈದಾನದಲ್ಲಿ ಸ್ವಾತಂತ್ರ್ಯ ದಿನೋತ್ಸವದ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಬಿ. ಆರ್. ನಾಯುಡು ರವರು,ಪೂರ್ವ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಜೆ. ಶ್ಯಾಮಲ ರಾವ್, ಐ.ಎ.ಎಸ್., ರವರು, ತಿ.ತಿ.ದೇ., ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ಶ್ರೀ. ಸಿ.ಹೆಚ್. ವೆಂಕಯ್ಯ ಚೌದರಿ, ಐ.ಆರ್. ಎಸ್., ರವರು ಕವಾತು ವಂದನೆಯನ್ನು ಸಮರ್ಪಿಸಿದರು.



16-08-2025 ರಂದು ಚೆನ್ನೈ(ತಮಿಳುನಾಡು) ನಲ್ಲಿರುವ, ಟಿ.ನಗರ್ ನಲ್ಲಿರುವ ಶ್ರೀ ವೆಂಕಟೇಶ್ವರಸ್ವಾಮಿ, ಶ್ರೀ ಪದ್ಮಾವತಿ ಅಮ್ಮನವರ ದರ್ಶನ ಪಡೆದ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ. ಬಿ.ಆರ್.ನಾಯುಡು ರವರು. ಈ ಕಾರ್ಯಕ್ರಮದಲ್ಲಿ ಇತರ ಉನ್ನತಾಧಿಕಾರಿಗಳು ಪಾಲ್ಗೊಂಡು ತಿ.ತಿ.ದೇ., ಅಧ್ಯಕ್ಷರನ್ನು ಸನ್ಮಾನಿಸಿದರು.



16-08-2025 ರಂದು ಆಡಿಕೃತಿಕ ಸಂದರ್ಭವಾಗಿ ತಿರುತ್ತಣಿ ಶ್ರೀ ಸುಬ್ರಮಣ್ಯ ಸ್ವಾಮಿಯವರಿಗೆ ತಿ.ತಿ.ದೇ., ವತಿಯಿಂದ ಸ್ವಾಮಿಯವರಿಗೆ ರೇಷ್ಮೆವಸ್ತ್ರಗಳನ್ನು ಸಮರ್ಪಿಸುತ್ತಿರುವ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ. ಬಿ.ಆರ್. ನಾಯುಡು ರವರು




16-08-2025 ರಂದು ತಿರುಪತಿಯಲ್ಲಿರುವ ಶ್ರೀ ವೆಂಕಟೇಶ್ವರ ಗೋಸಂರಕ್ಷಣಾ ಶಾಲೆಯಲ್ಲಿ ಗೋಕುಲಾಷ್ಟಮಿ ಸಂದರ್ಭವಾಗಿ ಗೋ ಪೂಜಾ ಮಹೋತ್ಸವಗಳು ವೈಭವವಾಗಿ ನಡೆಯಿತು. ಈ ಕಾರ್ಯಕ್ರಮದಲ್ಲಿ ಪೂರ್ವ ತಿ.ತಿ.ದೇ.,ಕಾರ್ಯನಿರ್ವಹಣಾಧಿಕಾರಿ ಶ್ರೀ ಜೆ. ಶ್ಯಾಮಲರಾವ್ ಐ.ಎ.ಎಸ್., ರವರು ಪಾಲ್ಗೊಂಡರು.





08-08-2025 ರಂದು ತಿರುಚಾನೂರು, ಶ್ರೀ ಪದ್ಮಾವತಿ ಅಮ್ಮನವರ ಆಲಯದಲ್ಲಿ ವರಲಕ್ಷ್ಮೀ ವ್ರತವು ಅತ್ಯಂತ ವೈಭವವಾಗಿ ನಡೆಯಿತು. ಈ ಕಾರ್ಯಕ್ರಮದಲ್ಲಿ ಪೂರ್ವ ತಿ.ತಿ.ದೇ.,ಕಾರ್ಯನಿರ್ವಹಣಾಧಿಕಾರಿ ಶ್ರೀ ಜೆ. ಶ್ಯಾಮಲರಾವ್, ಐ.ಎ.ಎಸ್., ರವರು ಮತ್ತು ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮ, ಐ.ಎ.ಎಸ್., ರವರು ಇತರ ಉನ್ನತಾಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

**SAPTHAGIRI (KANNADA) SPIRITUAL ILLUSTRATED MONTHLY** Published by Tirumala Tirupati Devasthanams Printing on 25-09–2025 and Posting at Tirupati RMS.Regd. with the Registrar of Newspapers for India under RNI. No. APKAN/2021/80589. Postal Regd.No.TRP/156/2024-2026 "Licenced toPost Without Prepayment No. PMGK/RNP/WPP-04(6)/2024-2026" Posting on 1th of Every Month



# ಶ್ರೀ ಮನವಾಳ ಮಹಾಮುನಿ ಶಾತ್ತುಮೊರೆ

# 27-10-2025